॥ ಓಂ ಶ್ರೀ ಅಕ್ಷರ ಬ್ರಹ್ಮಣೇ ನಮಃ ॥

॥ ಶ್ರೀ ಗಣೇಶಾಯ ನಮಃ ॥ ॥ ಶ್ರೀ ಕೃಷ್ಣಾಯ ನಮಃ॥

ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ । ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ ॥

# ಶ್ರೀಮದ್ಭಗವದ್ಗೀತಾ

## ದೃಷ್ಟಿಕೋನ ಮತ್ತು ಸರಳ ಪರಿಚಯ





ಶ್ರೀ ಡಿ. ಎಸ್. ಶ್ರೀಧರ್ ರವರ ಗೀತಾ ಪ್ರವಚನಗಳ ಆಧಾರಿತ

ಲೇಖಕರು : ಶ್ರೀಮತಿ ಭಾರತಿ ಭಾಸ್ಕರ್ ಎಂ.ಎ.(ಕನ್ನಡ ಸಾಹಿತ್ಯ)


॥ ಓಂ ತತ್ ಸತ್ ॥

ಭಗವದ್ಗೀತೆಯು ನಿಮ್ಮ ಬಗ್ಗೆ, ದೇವರ ಬಗ್ಗೆ, ನಿಮ್ಮ ಮತ್ತು
ದೇವರ ನಡುವಿನ ಸಂಬಂಧದ ಬಗ್ಗೆ ಜ್ಞಾನವನ್ನು ನೀಡುತ್ತದೆ.
ಇದು ಬಿಡುಗಡೆ ಮತ್ತು ಜೀವನ ಸತ್ಯ



# ಶ್ರೀಮದ್ಭಗವದ್ಗೀತಾ

## ದೃಷ್ಟಿಕೋನ ಮತ್ತು ಸರಳ ಪರಿಚಯ

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥



ಈ ಪುಸ್ತಕದಲ್ಲಿ, ಲೇಖಕಿಯ ಅನಿಸಿಕೆ ಮತ್ತು ಅನುಭವಗಳನ್ನು ತಿಳಿಯಪಡಿಸಲಾಗಿದೆ.
ಓದುಗರು ಇದನ್ನು ಒಪ್ಪಬೇಕೆಂಬ ಯಾವುದೇ ನಿರ್ಬಂಧವಿಲ್ಲ.

ಗೀತಾ ಜ್ಞಾನದ ಪ್ರಚಾರದ ಉದ್ದೇಶದಿಂದ, ಈ ಪುಸ್ತಕದ ಪ್ರತಿಗಳನ್ನು ಉಚಿತವಾಗಿ ನೀಡಲಾಗುವುದು.

ಈ ಪುಸ್ತಕದ ಪ್ರಾಯೋಜಕರಿಗೆ ಧನ್ಯವಾದಗಳು.

ಪ್ರತಿಗಳಿಗಾಗಿ ಸಂಪರ್ಕಿಸಬೇಕಾದ ಮೊ. ಸಂ. 98450 94486

ಈ ಪುಸ್ತಕದಲ್ಲಿ ಯಾವುದೇ ಅಕ್ಷರ ಅಥವಾ ವ್ಯಾಕರಣಾಂಶಗಳ ದೋಷವಿದ್ದಲ್ಲಿ ಕ್ಷಮೆ ಇರಲಿ

# ಶ್ರೀಮದ್ಭಗವದ್ಗೀತಾ – ದೃಷ್ಟಿಕೋನ

ಮುದ್ರಣ : 2022

## –: ವಿಷಯಗಳು :–

* ಸಮಗ್ರ ಜೀವನ ಪೂರ್ವ ದೃಷ್ಟಿಕೋನ
* ಸಮಗ್ರ ಜೀವನ ಪೂರ್ವ ದೃಷ್ಟಿಕೋನದ ಕ್ರಮಶಾಸ್ತ್ರ
* ಸರಳ ದೃಷ್ಟಿಕೋನ, ಪೂರ್ವಭಾವಿ ಸಿದ್ಧತೆಗಳು
* ಜೀವನದ ಗುರಿ, ಅಕ್ಷರಬ್ರಹ್ಮ, ಪ್ರಗತಿ
* ತ್ವಂ ತತ್ ಅಸಿ, ಮಹಾತ್ಮೆ, ನ್ಯಾಸ, ಧ್ಯಾನ
* ಅ ಉ ಮ, ವಿಕಸನ/ಪ್ರಗತಿ, ಜೀವನದ ಭಾಗಲಬ್ಧ
* ಶಕ್ತಿ ಮತ್ತು ಊರ್ಜ, ಯುಕ್ತ, ಜೀವನದ ಆಯ್ಕೆಗಳು
* ಧರ್ಮ/ನಿಯಮ, ಪ್ರಸ್ತುತಕಾಲ, ಪ್ರಗತಿಗೆ ಸಲಹೆಗಳು
* ಜೀವನದ ಮಾರ್ಗಗಳು, ಅಸ್ತಿತ್ವ, ಸ್ವಯಂ ಪರಿಶೀಲನೆ
* ಜನನಗಳ ಚಕ್ರ, ಧ್ಯಾನ

ಗುರುಗಳಾದ ಶ್ರೀ ಡಿ. ಎಸ್. ಶ್ರೀಧರ್, ಅಧ್ಯಕ್ಷರು, **ಪರಮಾಕ್ಷರ ಚಾರಿಟಬಲ್ ಟ್ರಸ್ಟ್**
ಅವರ ಮಾರ್ಗದರ್ಶನದಲ್ಲಿ
ಲೇಖಕರು : ಶ್ರೀಮತಿ ಭಾರತಿ ಭಾಸ್ಕರ್, ಎಂ.ಎ. (ಕನ್ನಡ ಸಾಹಿತ್ಯ)
ಸಂಪಾದಕಿ : ಶ್ರೀಮತಿ ರೂಪ ಶ್ರೀನಿವಾಸ್

ಶ್ರೀಯುತ ಎಂ. ಆರ್. ಭಾಸ್ಕರ್‌ರವರ ಸವಿ ನೆನಪಿನಲ್ಲಿ ಬಿಡುಗಡೆ

# ಸಂಪಾದಕೀಯ

ಭಗವದ್ಗೀತೆ ಎಂದರೆ ಭಗವಂತನ ನುಡಿಗಳು. ಸ್ವಯಂ ಅಕ್ಷರಬ್ರಹ್ಮನ ಪ್ರತಿರೂಪವಾದ ಶ್ರೀ ಕೃಷ್ಣನ ಅಧರಗಳಿಂದ ಬಂದ ಮಾತುಗಳು (ನುಡಿಗಳು).

ಈ ಸೃಷ್ಟಿಯಲ್ಲಿರುವ ಪ್ರತಿಯೊಬ್ಬರು ಭಗವದ್ಗೀತೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡರೆ, ಈ ಪ್ರಪಂಚ ಒಂದು ಆನಂದ ತಾಣವಾಗುತ್ತದೆ, ಸ್ವರ್ಗದ ನಿಲಯವಾಗುತ್ತದೆ. ಭಗವದ್ಗೀತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಂದರೆ, ಭಗವಂತನು ಹೇಳಿದ ಹಾಗೆ ನಡೆದುಕೊಳ್ಳುವುದು ಎಂದು ಅರ್ಥ. ಭಗವದ್ಗೀತೆಯು ಜೀವನದಲ್ಲಿ ಪುನರಾವರ್ತನೆಯಾಗಬೇಕು. ಹೇಗೆಂದರೆ ಅದನ್ನು ಪ್ರತಿದಿನ ಆಚರಿಸುವುದು – ಅಂದರೆ ಗೀತಾ ಮಹಾತ್ಮೆ, ನ್ಯಾಸ, ಧ್ಯಾನ, ಭಗವದ್ಗೀತೆ 700 ಶ್ಲೋಕಗಳ ಪಠಣೆ, ಗೀತಾಆರತಿ, ದಿನದಲ್ಲಿ ಕನಿಷ್ಟ 30 ನಿಮಿಷ ಎರಡು ಬಾರಿ ಧ್ಯಾನ ಮಾಡುವುದು. ಅಹಂಕಾರವನ್ನು ಕಡಿಮೆ ಮಾಡಿಕೊಂಡು ಬಡಬಗ್ಗರಿಗೆ ಸಹಾಯಮಾಡುವುದು, ಪ್ರಕೃತಿಯನ್ನು (ಗಿಡ, ಮರಗಳನ್ನು, ಪ್ರಾಣಿ ಸಮುದಾಯವನ್ನು) ರಕ್ಷಿಸುವುದು.

ಭಗವದ್ಗೀತೆಯ ಜೀವನ ಪುನರಾವರ್ತನೆ ಮಾಡುವುದರಿಂದ ಸಾಮಾನ್ಯ ಮನುಷ್ಯನು ದ್ವಿಜನಾಗುತ್ತಾನೆ. ದ್ವಿಜನಾಗಿ ಯೋಗಿಯಾಗಿ, ಸ್ಥಿತಪ್ರಜ್ಞನಾಗಿ, ನಂತರ ಜೀವನ್ಮುಕ್ತನಾಗುತ್ತಾನೆ. ಗುಣಾತೀತನಾಗುತ್ತಾನೆ. ನಂತರ ಭಕ್ತನಾಗಿ ಭಕ್ತವತ್ಸಲನನ್ನು ಸೇರುತ್ತಾನೆ.

ಪ್ರತಿಯೊಬ್ಬ ಮನುಷ್ಯನ ಗುರಿ ಮೋಕ್ಷ ಅಂದರೆ ಅಕ್ಷರಬ್ರಹ್ಮನಲ್ಲಿ ಲೀನವಾಗುವುದಾಗಿರಬೇಕು. ಅದಕ್ಕಾಗಿ ಆ ಮನುಷ್ಯನು ಸಾಧನೆ ಮಾಡಬೇಕು.

ಈ ಜ್ಞಾನವನ್ನು ಬೋಧಿಸಿರುವ ಶ್ರೀಧರ್ ಗುರುಗಳಿಗೆ ನಾನು ಚಿರಋಣಿಯಾಗಿದ್ದೇನೆ. ಅವರು ಹೇಳುವ ಪ್ರತಿಯೊಂದು ಮಾತು ಸತ್ಯವಾಕ್, ಹಾಗೆ ನಾವು ನಡೆದುಕೊಳ್ಳುವುದೇ, ನಾವು ಅವರಿಗೆ ಸಲ್ಲಿಸುವ ಗುರುದಕ್ಷಿಣೆ. ನನ್ನ ಎಲ್ಲಾ ಸಹಪಾಠಿಗಳಿಗೆ ಮತ್ತು ಲೇಖಕಿಯಾದ ಶ್ರೀಮತಿ ಭಾರತಿ ಭಾಸ್ಕರ್‌ರವರಿಗೆ ಕೃತಜ್ಞತೆಗಳು.

**– ರೂಪ ಶ್ರೀನಿವಾಸ್, ಸಂಪಾದಕಿ**

# ಶ್ರೀಮದ್ಭಗವದ್ಗೀತೆ

## ಲೇಖಕಿಯ ಮಾತು

**"ಶ್ರೀಮದ್ಭಗವದ್ಗೀತೆ"** ಅಕ್ಷರಬ್ರಹ್ಮನ ಪ್ರತಿರೂಪ. ಇಂದ್ರಿಯಗಳಿಗೆ ಅತೀತವಾದ ಶಕ್ತಿಯ ರೂಪವೇ ಗೀತೆ. ಇಂತಹ ಗೀತೆಯ ಅಮೃತವನ್ನು ನನಗೆ ನೀಡಿದವರು ನಮ್ಮ ಗುರುಗಳಾದ **ಶ್ರೀ ಡಿ. ಎಸ್. ಶ್ರೀಧರ್** ರವರು. ಮೋಕ್ಷವೆಂಬುದು ಸಾಮಾನ್ಯ ಜನರಿಗೆ ಊಹಿಸಲಸಾಧ್ಯವಾದ ಸ್ಥಿತಿ. ಆದ್ದರಿಂದಲೇ ಸಾಮಾನ್ಯರು ಇದರ ಪ್ರಯತ್ನದಿಂದ ದೂರ ಉಳಿಯುವರು. ಇದರ ಪರಿಣಾಮ, ಅವರು ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿ, ಆಧ್ಯಾತ್ಮಿಕತೆಯಿಂದ ವಂಚಿತರಾಗುವರು. ಆದರೆ ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ನಮ್ಮ ಗುರುಗಳು, ಈ ಆಧ್ಯಾತ್ಮಿಕ ಕ್ಷೇತ್ರದಲ್ಲಿ ನನ್ನಂತಹ ಸಾಮಾನ್ಯರೂ ಪ್ರವೇಶ ಮಾಡಬಹುದೆಂದು ಹೇಳಿ, ಮಾಡಿದ ಪ್ರಯತ್ನವು ವಿಫಲವಾಗುವುದಿಲ್ಲವೆಂಬ ಸತ್ಯದ ಬಗ್ಗೆ ಅರಿವು ಮೂಡಿಸಿ, ನನ್ನಂತಹ ಅನೇಕರನ್ನು ಜಾಗೃತಗೊಳಿಸಿ, ಆತ್ಮದ ಬಗ್ಗೆ ಜ್ಞಾನವನ್ನು ನೀಡಿ, ಆಧ್ಯಾತ್ಮಿಕ ಪಥಕ್ಕೆ ದಾರಿ ತೋರಿಸಿರುವರು.

ನಮ್ಮಲ್ಲಿರುವ ನ್ಯೂನತೆಗಳ ಲಾಭ ಪಡೆಯುವವರೇ ತುಂಬಿರುವ ಈ ಸಮಾಜದಲ್ಲಿ, ನಮಗೇ ತಿಳಿಯದೆ ಇರುವ, ನಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಉತ್ತೇಜಿಸಿ, ಪ್ರೋತ್ಸಾಹಿಸಿ, ಮಾನ್ಯತೆಯನ್ನು ನೀಡಿ ಸನ್ಮಾರ್ಗವನ್ನು ತೋರುತ್ತಿರುವ ನಮ್ಮ ಗುರುಗಳಿಗೆ ನನ್ನ ಅನಂತಾನಂತ ವಂದನೆಗಳನ್ನು ಸಲ್ಲಿಸುತ್ತೇನೆ.

**ಇಂತಹ ಒಂದು ಆಶೀರ್ವಾದವನ್ನು ನೀಡಿದ ಆ ಭಗವಂತನ ಚರಣಗಳಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.**

ಈ ಕಿರುಹೊತ್ತಿಗೆಯಲ್ಲಿ ನಮ್ಮ ಗುರುಗಳಿಂದ ಲಿಖಿತವಾಗಿರುವಂತಹ ಆಂಗ್ಲ ಭಾಷೆಯ "Holistic Life Orientation" ಪುಸ್ತಕದ ಆಧಾರದ ಮೇಲೆ ಜೀವನ ಪೂರ್ವ ದೃಷ್ಟಿಕೋನವನ್ನು ಮತ್ತು ಗುರುಗಳು ನೀಡಿರುವ ಪ್ರವಚನಗಳ ಜ್ಞಾನವನ್ನು ಸಾಮಾನ್ಯರಿಗೂ ಸಹ ಅರ್ಥವಾಗುವಂತೆ, ಸರಳ ಕನ್ನಡದಲ್ಲಿ ಬರೆಯುವ ಪ್ರಯತ್ನವನ್ನು ಮಾಡಿರುವೆನು. ಅವರಿಂದಲೇ ಪಡೆದ ಗುರುದೀಕ್ಷೆಯನ್ನು ಪಾಲಿಸುವ ವಿಧಾನವನ್ನೂ ಸಹ ಈ ಹೊತ್ತಿಗೆಯಲ್ಲಿ ನೀಡಲಾಗಿದೆ.

**ಈ ನನ್ನ ಪ್ರಥಮ ಪ್ರಯತ್ನಕ್ಕೆ ಮಾರ್ಗದರ್ಶಕರಾಗಿ ನಿಂತ ನನ್ನ ಗುರುಗಳಿಗೆ ವಂದನೆಗಳು.**


**ಈ ಪುಸ್ತಕದ ಸಂಪಾದಕಿ ಶ್ರೀಮತಿ ರೂಪಾಶ್ರೀನಿವಾಸ್‌ರವರಿಗೆ ಮತ್ತು ನನ್ನ ಎಲ್ಲಾ ಸಹಪಾಠಿಗಳಿಗೆ ಕೃತಜ್ಞತೆಗಳು.**

ತಮ್ಮ ಬಿಡುವಿಲ್ಲದ ಕೆಲಸದ ಮಧ್ಯೆಯೂ ಅತ್ಯಂತ ಶ್ರದ್ಧೆಯಿಂದ ಆಕರ್ಷಕ ಮುಖ ಪುಟದೊಂದಿಗೆ ಪುಸ್ತಕ ಪ್ರಕಟಣೆಗೆ ಸಹಕರಿಸಿದ ಶ್ರೀ **ವೆಂಕಟೇಶ್** ಅವರಿಗೆ ಧನ್ಯವಾದಗಳು.

**ಈ ನನ್ನ ಪ್ರಯತ್ನವು ನಾನು ಆ ಅಕ್ಷರಬ್ರಹ್ಮನಿಗೆ ಸಲ್ಲಿಸುತ್ತಿರುವ ಅತ್ಯಲ್ಪ ಸೇವೆಯೆಂದು ಭಾವಿಸುವೆನು. – ಶ್ರೀಮತಿ ಭಾರತಿ ಭಾಸ್ಕರ್**

# ಸಮಗ್ರ ಜೀವನ ಪೂರ್ವ ದೃಷ್ಟಿಕೋನ

ಮೂಲ : ಶ್ರೀಮದ್ಭಗವದ್ಗೀತೆ ಅಥವ ಸಂಪೂರ್ಣ ಜ್ಞಾನ




**ಗಮನವಿಟ್ಟು ಏಕಾಗ್ರತೆಯಿಂದ ಭಗವದ್ಗೀತೆ ಮತ್ತು ಅಕ್ಷರಬ್ರಹ್ಮನನ್ನು ಕುರಿತು ಅಧ್ಯಯನ ಮಾಡಲು – ಇಂದೇ ಆರಂಭಿಸಿ**

**ಸಂಪೂರ್ಣ ಜಾಗೃತಿ/ಆತ್ಮದ ವ್ಯಾಪಕತೆ = ಅಕ್ಷರಬ್ರಹ್ಮನ ಸಮಷ್ಠಿಯ ಅರಿವು + ಅಕ್ಷರಬ್ರಹ್ಮನೊಂದಿಗೆ ಸಂಪೂರ್ಣ ಏಕತೆ + ಶುದ್ಧ ಅಕ್ಷರಬ್ರಹ್ಮನ ಬೆಳಕಿನಿಂದ ಪೂರ್ಣ ಮೆದುಳಿನ ಪ್ರಕಾಶತೆ**

## ಸಮಗ್ರ ಜೀವನ ದೃಷ್ಟಿಕೋನದ ಕ್ರಮಶಾಸ್ತ್ರ – ಸ್ವಅಧ್ಯಯನ ಅಥವ ಪ್ರವಚನಗಳು ಅಥವ ಉಭಯ ವಿಧಾನಗಳು

* ಸಮಗ್ರ ಜೀವನ ಪೂರ್ವ ದೃಷ್ಟಿಕೋನ ಎಂಬ ಪುಸ್ತಕದ ಅಧ್ಯಯನ
* ಗೀತಾಪ್ರೆಸ್‌ನಿಂದ ಪ್ರಕಾಶಿತವಾಗಿರುವ ಭಗವದ್ಗೀತೆಯ ಪುಸ್ತಕದಲ್ಲಿರುವ ಗೀತಾ ಮಹಾತ್ಮೆಯ ಅಧ್ಯಯನ ಅಥವಾ ಇಂಗ್ಲೀಷ್‌ನಲ್ಲಿ ಪ್ರಕಟವಾಗಿರುವ ಅನಿಬೆಸೆಂಟ್/ ಭಗವಾನ್ ದಾಸ್‌ರವರ ಗೀತಾ ಮಹಾತ್ಮೆಯ ಪುಸ್ತಕಗಳು
* ಗೀತಾ ನ್ಯಾಸ / ಸಂಪರ್ಕ – ಪಠ್ಯಪುಸ್ತಕದಲ್ಲಿದೆ
* ಗೀತಾ ಧ್ಯಾನ / ಗೀತೆಯ ಧ್ಯಾನ ಶ್ಲೋಕಗಳು – ಪಠ್ಯಪುಸ್ತಕದಲ್ಲಿದೆ
* ಗೀತೆಯ 18 ಅಧ್ಯಾಯಗಳಲ್ಲಿರುವ 700 ಶ್ಲೋಕಗಳ ಅರ್ಥಸಹಿತ ಅಧ್ಯಯನ – ಪಠ್ಯಪುಸ್ತಕದಲ್ಲಿದೆ
* ಗೀತ ಆರತಿ / ಬೆಳಕು – ಪಠ್ಯಪುಸ್ತಕದಲ್ಲಿದೆ
* ಧ್ಯಾನ – ಗುರುದೀಕ್ಷೆ
* ಪ್ರಾಯೋಗಿಕವಾಗಿ ಸಮಾಜದಲ್ಲಿ ದುರ್ಬಲರಾಗಿರುವವರನ್ನು ಭೇಟಿ ಮಾಡಿ, ಅವರ ಅವಶ್ಯಕತೆಗಳನ್ನು ಅರಿತು, ಸಹಾಯ ಮಾಡುವುದು.
* ಪ್ರವಚನಗಳು / ಅಧ್ಯಯನ ಮಾಡುವಾಗ ಮತ್ತು ಮಾಡಿದ ನಂತರ ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಇತರರಿಗೂ ಹಂಚಿ.

**ಗೋವಿಂದ – ಗೋ(ಗೀತ/ವೇದದ ಜ್ಞಾನ) ವಿಂದ(ಪ್ರಭು/ಅಭಯ ಪ್ರದಾತ)**




**ಆನಂದಿಸಿ** – ಆಲಿಸಿ, ಆಧ್ಯಯನ ಮಾಡಿ, ಚರ್ಚಿಸಿ, ಅಳವಡಿಸಿಕೊಳ್ಳಿ, ಹರ್ಷಿಸಿ, ಕಠಿಣ ಅಭ್ಯಾಸ ಮಾಡಿ ಮತ್ತು ಮುಕ್ತ ನಗೆಯಿಂದ ಬಡವರಿಗೆ ಸಹಾಯ ಹಸ್ತ ನೀಡಿ ಸಮರ್ಪಣಾ ಭಾವದಿಂದ **ಜೀವನದಲ್ಲಿ ಗೀತಾ ಪಾಠವನ್ನು ಪುನರಾವರ್ತನೆ** ಮಾಡಿ. ನೀವು ಖಂಡಿತವಾಗಿ ಜ್ಞಾನ ಸಿದ್ಧಿಯನ್ನು ಪಡೆದು ಅಕ್ಷರಬ್ರಹ್ಮನನ್ನು ಸೇರುವಿರಿ.

**ಅಕ್ಷರಬ್ರಹ್ಮನು ನಿಮ್ಮನ್ನು ಅಶೀರ್ವದಿಸಲಿ**


ಗೀತಾ ಜ್ಞಾನ ಮತ್ತು ಧ್ಯಾನ

ಶ್ರದ್ಧೆ ಮತ್ತು ಭಕ್ತಿ

## ಸರಳ ದೃಷ್ಟಿಕೋನ

ಯೋಗ = ಅಕ್ಷರಬ್ರಹ್ಮನಲ್ಲಿ ಸಂಯೋಗ ಮತ್ತು ಅಕ್ಷರಬ್ರಹ್ಮನೆಡೆಗೆ ದಾರಿ

**ಅಕ್ಷರಬ್ರಹ್ಮ**




**ಕರ್ಮಯೋಗ**
ಕರ್ಮಫಲತ್ಯಾಗ

**ಸಂನ್ಯಾಸ ಯೋಗ**
ಅಹಂ/ಕರ್ತೃತ್ವ ತ್ಯಜಿಸುವಿಕೆ

( ರಾಗ–ದ್ವೇಷಗಳಿಲ್ಲದ ಯಜ್ಞ, ದಾನ ಮತ್ತು ತಪಸ್ಸಿನ ಮೂಲಕ)

ಅಭ್ಯಾಸ ಮತ್ತು ವೈರಾಗ್ಯ

ನೀವು ಗೀತೆಯಂತಹ ಅಮೂಲ್ಯವಾದ ಜ್ಞಾನದ ಆಭರಣವನ್ನು ಅಜ್ಞಾನಿಗಳಿಗೆ ನೀಡಿದರೆ, ಆತನು ಅದಕ್ಕೆ ಮೌಲ್ಯವನ್ನು ನೀಡುತ್ತಾನೆಯೇ?

# ಪೂರ್ವಭಾವಿ ಸಿದ್ಧತೆಗಳು

1. ಬಿಡುವಿಲ್ಲದ ಜೀವನದಲ್ಲಿ ತಾತ್ಕಾಲಿಕವಾಗಿ ಬಿಡುವು(ವಿರಾಮ) ಮಾಡಿಕೊಳ್ಳಿ. ಪ್ರವಚನಗಳನ್ನು ಆಲಿಸಿ, ಸ್ಮರಿಸಿಕೊಳ್ಳಿ, ಅಕ್ಷರಬ್ರಹ್ಮನಲ್ಲಿ ನಂಬಿಕೆ, ಪ್ರೀತಿ ಮತ್ತು ಭಕ್ತಿಯನ್ನು ಬೆಳೆಸಿಕೊಳ್ಳಿ.
2. ನಿಮ್ಮ ಬುದ್ಧಿಯಲ್ಲಿರುವ ಜ್ಞಾನವನ್ನು ರಿಕ್ತ (ಬರಿದು) ಗೊಳಿಸಿಕೊಂಡು ಮುಕ್ತ ಮನಸ್ಸಿನಿಂದ ಬನ್ನಿ.
3. ಜೀವನದಲ್ಲಿ ಪ್ರತಿನಿತ್ಯ ಮಾಡುವ ಕೆಲಸಗಳಲ್ಲಿ ಜ್ಞಾನವನ್ನು ಅನುಸಂಧಾನ ಮಾಡಿ. ದೇಹ, ನುಡಿ ಮತ್ತು ಮನಸ್ಸಿನಲ್ಲಿ ಶಿಸ್ತನ್ನು ರೂಢಿಸಿಕೊಳ್ಳಿ.
4. ಗೀತೆಯು ನಿಮಗೆ ನಿಮ್ಮ ಜೀವನದ ಉದ್ದೇಶ ಮತ್ತು ಆ ಉದ್ದೇಶವನ್ನು ಹೇಗೆ ಸಾಧಿಸಬೇಕು ಎಂಬುದನ್ನು ತಿಳಿಸುತ್ತದೆ.
5. ಜೀವಾತ್ಮನು ಮಾಯೆಯಿಂದ ಆವೃತಗೊಂಡು ನಮ್ಮ ಹೃದಯಾಂತರಾಳದಲ್ಲಿ ನೆಲೆಸಿದ್ದಾನೆ. ಈ ಜೀವಾತ್ಮನು ಅಕ್ಷರಬ್ರಹ್ಮನ ಒಂದು ಅಂಶ. ಇದು ಕಾರ್ಯನಿರ್ವಹಿಸುವುದಿಲ್ಲ. ಇದು ಈ ಜಗತ್ತನ್ನು ಇಂದ್ರಿಯಗಳ ಮೂಲಕ ಅನುಭವಿಸುತ್ತದೆ ಮತ್ತು ಇದರ ಪ್ರಜ್ಞೆಯು ಮಾರ್ಪಡುತ್ತದೆ. ಇದು 7 ಪದರಗಳು ಮತ್ತು ಏಕಕಾಲದಲ್ಲಿ ಒಂದರ ಮೇಲೊಂದು ಇರುವುದು.

| ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ | ಸೃಷ್ಟಿ, ಶುದ್ಧವಾದ ಆನಂದ ಮತ್ತು ಅಂತಃಪ್ರಜ್ಞೆ | ಸಂಪೂರ್ಣ ವಿಲೀನ |
|---|---|---|
| ← **ಗುಣಗಳು** → | ← **ಸುಗುಣ** → | **ನಿರ್ಗುಣ** |

6. ಅಕ್ಷರಬ್ರಹ್ಮನು ಕಾರ್ಯ ನಿರ್ವಹಿಸಬಹುದು. ಆದರೆ ಸ್ಥಿರನಾಗಿರುತ್ತಾನೆ. ಅತ್ಯಂತ ಶಕ್ತಿಶಾಲಿ. ಸಂಪೂರ್ಣ ಪ್ರಜ್ಞೆಯುಳ್ಳವನು. ಅಕ್ಷರಬ್ರಹ್ಮನ ಒಳಗೆ ಮಾಯಾಲೋಕವು ಬದಲಾವಣೆ ಹೊಂದುತ್ತಾ ಚಲಿಸುತ್ತಿದೆ.
7. ಜೀವನ ರಹಸ್ಯ – ಅಕ್ಷರಬ್ರಹ್ಮನಲ್ಲಿ ಯುಕ್ತರಾಗಿ ಜೀವನವನ್ನು ಆನಂದಿಸಿ. ಕರ್ತೃತ್ವ ಮತ್ತು ಆಸಕ್ತಿಯನ್ನು ಬಿಟ್ಟು ಜೀವಿಸಿ ಮತ್ತು ಬೇರೆಯವರಿಗೆ ಜೀವನವನ್ನು ಕೊಡಿ.
8. ಗೀತಾಯಜ್ಞವು ಆತ್ಮಪ್ರಜ್ಞೆಯ ಆಧ್ಯಾತ್ಮಿಕ ಏಳು–ಬೀಳುಗಳ ಇಳಿಜಾರಿನ ದಾರಿಯಾಗಿದೆ. ಇದು ಮಿತಿಯಿಂದ ಅಪರಿಮಿತದೆಡೆಗೆ ಹಾಗು ಕಾಲ ಮತ್ತು ಸ್ಥಳದ ಪರಿಧಿಯಿಂದಾಚೆಗೆ ಒಯ್ಯುತ್ತದೆ.
9. ಆತ್ಮ ಪ್ರಜ್ಞೆಯ ವಿಕಸನ – ಗೀತೆ/ಧ್ಯಾನ – ಶಕ್ತಿವರ್ಧಕ
   ಆತ್ಮ ಅಸ್ತಿತ್ವದ ವಿಕಸನ – ಪಡೆದ ಶಕ್ತಿಯನ್ನು ಲೋಕಕಲ್ಯಾಣಕ್ಕಾಗಿ ಅನುಸಂಧಾನ ಮಾಡುವುದು.
10. ಜೀವನದ ಉದ್ದೇಶ / ಗುರಿಯಲ್ಲಿ ನಿಮ್ಮ ಆದ್ಯತೆ / ಆಯ್ಕೆ / ನಿರ್ಧಾರ
    ಅ. ವೈಯಕ್ತಿಕ ಹಿತದೃಷ್ಟಿ – ಲಾಭ, ಹೆಮ್ಮೆ, ಅಧಿಕಾರ ಮತ್ತು ಸಂತೋಷ – ಪುನರ್ಜನ್ಮ
    ಆ. ಸಾರ್ವತ್ರಿಕ ಹಿತದೃಷ್ಟಿ – ಕರ್ಮ / ಸಂನ್ಯಾಸ ಯೋಗ – ವಿಮೋಚನೆ

# ಜೀವನದ ಗುರಿ

ಈ ಜನ್ಮದಲ್ಲಿ ನಿಮ್ಮ ಸಂಪರ್ಕ ಭಗವದ್ಗೀತೆಯೊಂದಿಗೆ ಬೆಳೆದಿದೆಯೆಂದರೆ ನಿಮ್ಮನ್ನು ನೀವು ಅನುಗ್ರಹಿಗಳೆಂದು ಪರಿಗಣಿಸಿ. ಅದು ನಿಮಗೆ ಜೀವನ ಸತ್ಯದ ಅರಿವು ಮೂಡಿಸುತ್ತದೆ.

ಪ್ರಕೃತಿಯು ಕ್ರಿಯಾಶೀಲತೆಯಿಂದ ಇರಬಹುದು. ಅದು ತನ್ನ ಕಾರ್ಯಕ್ಕೆ ಅನುಸಾರವಾಗಿ ರೂಪ ಪಡೆದುಕೊಳ್ಳುತ್ತದೆ, ಪ್ರಕೃತಿಗೆ ಪರಿಣಾಮಗಳ ಬಗ್ಗೆ ನಿಯಂತ್ರಣ ಇರುವುದಿಲ್ಲ.

ಗೀತೆಯನ್ನು ಅಭ್ಯಾಸ ಮಾಡಿ ಕರ್ಮಗಳನ್ನು ಶುದ್ಧಿ ಮಾಡಿಕೊಂಡು ಗೀತೆಯಲ್ಲಿ ಹೇಳಿರುವ ದಾರಿಯಲ್ಲಿ ನಡೆದು ಅಕ್ಷರಬ್ರಹ್ಮನನ್ನು ಸೇರಿರಿ.

ಹಬ್ಬ–ಸಮಾರಂಭದ ಆಧಾರಿತ ಜೀವನ ನಡೆಸುವ ಬದಲು ಉದ್ದೇಶ ಆಧಾರಿತ ಜೀವನ ನಡೆಸಲು ಇಂದೇ ಗೀತೆಯನ್ನು ಅಭ್ಯಾಸ ಮಾಡಲು ಆರಂಭಿಸುವುದು ಉತ್ತಮ ಆಯ್ಕೆ.

**15 ವರ್ಷಗಳ ಕೆಳಗಿನವರು ಗೀತಾ ಶ್ಲೋಕಗಳನ್ನು ಅಭ್ಯಾಸ ಮಾಡಿ** → **16ರಿಂದ 65 ವರ್ಷದವರು ಗೀತೆಯಲ್ಲಿ ಹೇಳಿರುವಂತೆ ಜೀವನದಲ್ಲಿ ಸಕ್ರಿಯರಾಗಿರಿ** → **65 ವರ್ಷ ಮೇಲ್ಪಟ್ಟವರು ಗೀತೆಯನ್ನು ಅಧ್ಯಯನ ಮಾಡಿ**


**ಆರಂಭದ ಕಾಲ** → **ಉತ್ತಮ** | **ಮಧ್ಯಮ** | **ಅಧಮ**

**ಗೀತೆಯನ್ನು ಈ ಕೆಳಗೆ ಹೇಳಿರುವಂತಹ ಮನುಷ್ಯರಿಗೆ ಹೇಳಬಾರದು ಮತ್ತು ಇವರಿಗೆ ಅರ್ಥವಾಗುವುದಿಲ್ಲ.**

1. ಆಧ್ಯಾತ್ಮಿಕ ಶಿಸ್ತನ್ನು ಪಾಲಿಸದಿರುವವರಿಗೆ
2. ಗೀತೆಯಲ್ಲಿ ನಂಬಿಕೆ ಇಲ್ಲದವರಿಗೆ
3. ಅಕ್ಷರಬ್ರಹ್ಮನಲ್ಲಿ ಪ್ರೀತಿ ಮತ್ತು ಭಕ್ತಿ ಇಲ್ಲದವರಿಗೆ
4. ಆಸಕ್ತಿ ಇಲ್ಲದವರಿಗೆ
5. ಆಕ್ಷೇಪಣಾ ಬುದ್ಧಿಯುಳ್ಳವರಿಗೆ / ದೂರುವ ಬುದ್ಧಿ ಇರುವವರಿಗೆ

ನಾವು ಗೀತೆಯನ್ನು ಯಾವುದೇ ಅಪೇಕ್ಷೆಯಿಲ್ಲದೆ (ಮೋಕ್ಷವನ್ನು ಒಳಗೊಂಡು) ಕರ್ತವ್ಯ ಭಾವನೆಯಿಂದ ಹೇಳಿಕೊಡಬೇಕು.

**ನಿಮ್ಮ ಜೀವನದ ಗುರಿ / ಗುರಿಗಂಬ ಯಾವುದು ?**



# ಅಕ್ಷರಬ್ರಹ್ಮ

ಅಕ್ಷರಬ್ರಹ್ಮನೆಂದರೆ ಸಮಷ್ಠಿ ಅಥವಾ ತತ್ (ಅದು) ಅವಿನಾಶಿ, ಅನಂತ, ಶಾಶ್ವತ, ಸರ್ವೋಚ್ಚ, ಸ್ವಯಂ ಪ್ರಜ್ವಲಿತ, ಸೂಕ್ಷ್ಮಾತಿಸೂಕ್ಷ್ಮ, ಸರ್ವವ್ಯಾಪಕ, ಸಕಲಕ್ಕೂ ವಾಸಸ್ಥಾನವಾಗಿರುವ ಸರ್ವಾಂತರ್ಯಾಮಿ ಮತ್ತು ಮೂಲತಃ ಅವ್ಯಕ್ತ. ಸಂಪೂರ್ಣವಾಗಿ ಅಸ್ತಿತ್ವದಲ್ಲಿರುವ ಪ್ರಜ್ಞೆ, ಶಕ್ತಿ, ಜೀವಿ ಅಥವಾ ಭಾವನೆಯ ಸ್ಥಿತಿ.

1. ಆತ್ಮ ಅಥವಾ ಜೀವಾತ್ಮ ನಮ್ಮ ಹೃದಯದಲ್ಲಿ ನೆಲೆಸಿರುವ ಅಕ್ಷರಬ್ರಹ್ಮನ ಒಂದು ಅಂಶ. ನಮ್ಮ ಜೀವನದ ಗುರಿ ಅಥವಾ ಗಮ್ಯ ಅಕ್ಷರಬ್ರಹ್ಮನನ್ನು ಸೇರುವುದು / ವ್ಯಾಪಸಿ ಅಕ್ಷರಬ್ರಹ್ಮನಲ್ಲಿ ಲೀನವಾಗುವುದು.
2. ಸ್ಥಿರವಾದ ಅಕ್ಷರಬ್ರಹ್ಮನೊಳಗೆ ಈ ಮಾಯಾಲೋಕ ಬದಲಾಗುತ್ತಾ ಚಲಿಸುತ್ತಿದೆ.
3. ಆತ್ಮವು ಕ್ರಿಯಾಶೀಲವೂ ಅಲ್ಲ. ವ್ಯಕ್ತವೂ ಆಗುವುದಿಲ್ಲ. ಇದು ಏಕಕಾಲದಲ್ಲಿ ಒಂದರ ಮೇಲೊಂದು ಇರುವ ಏಳು ಹಂತಗಳ ಪ್ರಜ್ಞೆಯಲ್ಲಿ / ಏಳು ಬಗೆಯ ಅಸ್ತಿತ್ವದಲ್ಲಿ ಮಾಯೆಯಿಂದ ಆವೃತಗೊಂಡಿದೆ. ಈ ಮಾಯೆಯನ್ನು ಆತ್ಮವು 6 ಇಂದ್ರಿಯಗಳ ಮೂಲಕ ಅನುಭವಿಸುತ್ತದೆ.
4. ಅಕ್ಷರಬ್ರಹ್ಮನು ಕ್ರಿಯಾಶೀಲ, ಶಕ್ತಿಯುತ, ಎಲ್ಲದರ ಮೂಲ. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತ ಮತ್ತು ತನ್ನ ಇಚ್ಛೆಯಂತೆ ಪ್ರಕಟನಾಗುತ್ತಾನೆ.
5. ಜೀವನ ರಹಸ್ಯ – ಈ ಜೀವನದಲ್ಲಿ ಕರ್ಮಯೋಗ ಮತ್ತು ಸಂನ್ಯಾಸಯೋಗದ ಮೂಲಕ ಅಕ್ಷರಬ್ರಹ್ಮನಿಗೆ ಅನುಗುಣವಾಗಿ ನಂಬಿಕೆ ಮತ್ತು ಭಕ್ತಿಯಿಂದ ಆ ಪರಮಾತ್ಮನಲ್ಲಿ ಯುಕ್ತರಾಗಿ ಬಾಳುವುದು.
   ಅ. ಕರ್ಮಫಲತ್ಯಾಗದಿಂದ ನಿಸ್ವಾರ್ಥ ಸೇವೆ
   ಆ. ಯಾರೊಂದಿಗೂ ಮತ್ತು ಯಾವುದರೊಂದಿಗೂ ಆಸಕ್ತಿಯನ್ನು ಹೊಂದಿರಬಾರದು. ಮನುಷ್ಯರಾಗಿ ನಿಮ್ಮ ಕರ್ತವ್ಯವನ್ನು ಮಾಡಿ.
   ಇ. ಕರ್ತೃತ್ವ ಭಾವವನ್ನು ತ್ಯಜಿಸಿ.
6. ಮಿತಿಯಿಂದ ಅಪರಿಮಿತದೆಡೆಗೆ, ಚಲನೆಯಿಂದ ಅಚಲತೆಯೆಡೆಗೆ, ಬದಲಾವಣೆಯಿಂದ ಬದಲಾಗದೆಡೆಗೆ ಸಾಗುವುದು ಆನೇಕ ಜನ್ಮಗಳ ಪಯಣ, ಇದನ್ನು ನಿರಂತರ ಅಭ್ಯಾಸ ಮತ್ತು ವೈರಾಗ್ಯದಿಂದ ಹಂತ ಹಂತವಾಗಿ ಸಾಧಿಸಬಹುದು.
7. ಅಕ್ಷರಬ್ರಹ್ಮನನ್ನು ತಿಳಿಯಲು ಭಗವದ್ಗೀತೆಯನ್ನು ಅಭ್ಯಾಸ ಮಾಡಬೇಕು. ಅಕ್ಷರಬ್ರಹ್ಮನನ್ನು ಅನುಭವಿಸಲು ಧ್ಯಾನವನ್ನು ಸಿದ್ಧಿ ಮಾಡಿಕೊಳ್ಳಬೇಕು. ಅಕ್ಷರಬ್ರಹ್ಮನನ್ನು ಸೇರಲು ಭಗವಂತನು ಗೀತೆಯಲ್ಲಿ ಹೇಳಿರುವಂತೆ ನಾವು ನಿಜ ಜೀವನದಲ್ಲಿ ನಡೆದುಕೊಳ್ಳಬೇಕು.

**ನಾನು ಜೀವಾತ್ಮ (ಆತ್ಮ) – ನಾನು ಶರೀರವಲ್ಲ – ಪರಮಾತ್ಮ ಮತ್ತು ಜೀವಾತ್ಮ ಪರಸ್ಪರ ಒಂದರಲ್ಲೊಂದಿದೆ. ಒಂದು ಶರೀರದಿಂದ ಹೊರ ಬಂದು ಮತ್ತೊಂದು ಶರೀರವನ್ನು ಪ್ರವೇಶಿಸುತ್ತಾನೆ. ಶರೀರದಿಂದ ಎಲ್ಲಾ ಜೀವಿಗಳು ಬೇರೆಯಾದರೂ ಆತ್ಮದ ಮೂಲಕ ಎಲ್ಲರೂ ಒಂದೇ.**

## ಪ್ರಗತಿ

**ಅಕ್ಷರಬ್ರಹ್ಮ** – ಶುದ್ಧವಾದ ಸಂಪೂರ್ಣ ಪ್ರಜ್ಞೆ ಅಥವಾ ಅಸ್ತಿತ್ವ – ನಿರ್ಗುಣ / ಸ್ಥಿರ / ಪರಮಾತ್ಮ / ಬದಲಾಗದ

**ಅಕ್ಷರಬ್ರಹ್ಮನು** ಅಸಂಖ್ಯ ಆಯಾಮಗಳುಳ್ಳ, ಕ್ರಿಯೆಗಳುಳ್ಳ, ಗುಣಗಳುಳ್ಳ, ಅಪರಿಮಿತವಾಗಿ ವ್ಯಾಪಿಸಿರುವ ಅನಂತಗಳಿಗೆ ಅನಂತಾತೀತ

↓↑

| | | |
|---|---|---|
| **ನಿರ್ಗುಣ** | **ಸತ್ಯಂ** ಅನಂತ – ಅಕ್ಷರಬ್ರಹ್ಮನ ಒಂದಂಶ । ವಿಲೀನ | **ಬದಲಾಗದ ಮತ್ತು ಸ್ಥಿರ** |
| | ↓↑ | |
| **ಸಗುಣ** | **ಶಿವ ಮತ್ತು ವಿಷ್ಣು** – ಅನಂತ / ಅಂತಃಪ್ರಜ್ಞೆ | **ಬದಲಾಗದ ಮತ್ತು ಚಲನಾಶೀಲ** |
| | ↓↑ | |
| **ಸಗುಣ** | **ಸ್ವತಂತ್ರ ಆತ್ಮಗಳು** – ಅನಂತ / ಶುದ್ಧ ಆನಂದ | **ಬದಲಾಗದ ಮತ್ತು ಚಲನಾಶೀಲ** |
| | ↓↑ | |
| **ಸಗುಣ** | **ಬ್ರಹ್ಮ** – ಅನಂತ / ಸೃಷ್ಠಿ | **ಬದಲಾಗದ ಮತ್ತು ಚಲನಾಶೀಲ** |
| | ↓↑ | |
| **ತ್ರಿಗುಣಗಳು** | ದೇಹದಾರಿಗಳು (ಆತ್ಮಗಳು+ಸತ್ಯದ ಪ್ರತಿಬಿಂಬ)<br>ಸ್ವರ್ಗಲೋಕ, ನಕ್ಷತ್ರಲೋಕ, ಭೂಲೋಕ ಮತ್ತು ಅನಂತವಾದ ಕೆಳವರ್ಗಗಳು<br>( ಮಾನಸಿಕ, ಭಾವನಾತ್ಮಕ, ದೈಹಿಕ) | **ಬದಲಾಗುವ ಮತ್ತು ಚಲನಾಶೀಲ** |

ಅನಂತವಾದ ಅಕ್ಷರಬ್ರಹ್ಮನಿಂದ ಅನಂತಗಳನ್ನು ತೆಗೆದರೂ ಸಹ ಅಕ್ಷರಬ್ರಹ್ಮನ ವ್ಯಾಪಕತೆ ಸ್ಥಿರವಾಗಿರುತ್ತದೆ. ನಮ್ಮಲ್ಲಿ ಏನಿದೆಯೋ, ಅದು ಎಲ್ಲೆಲ್ಲಿಯೂ ಇದೆ – ಕ್ಷೇತ್ರ, ಗುಣಗಳು ಮತ್ತು ಕ್ಷೇತ್ರಜ್ಞ / ಅಕ್ಷರ ಬ್ರಹ್ಮ. ಈ ಜೀವನದ ನಂತರ, ಪ್ರತಿಯೊಬ್ಬ ವ್ಯಕ್ತಿಯೂ ದೇವರ ಸಂದರ್ಶನಕ್ಕೆ ಏಕಾಂಗಿಯಾಗಿ ಹೋಗಬೇಕಾಗುತ್ತದೆ. ಆದ್ದರಿಂದ ವೈರಾಗ್ಯವನ್ನು ಬೆಳೆಸಿಕೊಳ್ಳಿ. ಗೀತಜ್ಞಾನ, ಧ್ಯಾನ ಮತ್ತು ಬಡವರಿಗೆ ಸಹಾಯ ಮಾಡದಿದ್ದರೆ, ಜೀವನವು ವ್ಯರ್ಥ ಮತ್ತು ಅರ್ಥವಿಲ್ಲದೆ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ.

# ತ್ವಂ ತತ್ ಅಸಿ

**18ನೇ ಅಧ್ಯಾಯ – ಸಾರಂಶ – ತ್ವಂ ತತ್ ಅಸಿ**

* ಅಕ್ಷರಬ್ರಹ್ಮನ ಆಧಾರಿತ – ತ್ಯಾಗ ಮತ್ತು ಸಂನ್ಯಾಸ, ಕಡ್ಡಾಯ ಕರ್ಮಗಳಾದ ಯಜ್ಞ, ದಾನ ಮತ್ತು ತಪಸ್ಸುಗಳ ಸಾಂಗತ್ಯದಿಂದ ಯಾವ ರೀತಿ ಅಕ್ಷರ ಬ್ರಹ್ಮನನ್ನು ಸೇರಬಹುದು.
* ಗುಣಗಳು – ನಿಮ್ಮ ವ್ಯಕ್ತಿತ್ವದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತವೆ.
* ಅಕ್ಷರಬ್ರಹ್ಮನನ್ನು ಸೇರಲು ಮಾಡಬೇಕಾದ ಕರ್ಮಗಳ ಬಗ್ಗೆ ಹಂತ ಹಂತವಾಗಿ ಸಲಹೆ.

⬆

**ಅಸಿ ಅಥವಾ ಮನುಷ್ಯ ಮತ್ತು ಅಕ್ಷರಬ್ರಹ್ಮನ ನಡುವೆ ಇರುವ ಸಂಬಂಧ (13ರಿಂದ 17ನೇ ಅಧ್ಯಾಯದವರೆಗೆ)**

* 16, 17ನೇ ಅಧ್ಯಾಯ – ಗುಣಗಳ ಆಧಾರಿತ ಕರ್ಮ. ಗುಣಗಳ ಮೇಲಿರುವ ನಮ್ಮ ನಂಬಿಕೆ, ನಮ್ಮ ಕ್ರಿಯೆಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ
* 15ನೇ ಅಧ್ಯಾಯ – ಅಕ್ಷರಬ್ರಹ್ಮನ ಶಾಸ್ತ್ರ ಅಥವ ಬೋಧನೆ ಅಥವ ವಿಜ್ಞಾನ
* 13, 14ನೇ ಅಧ್ಯಾಯ – ಪ್ರಕೃತಿ, ಪುರುಷ, ಗುಣಗಳು ಮತ್ತು ಗುಣಾತೀತ

⬆

**ತತ್ ಅಥವ ಅಕ್ಷರಬ್ರಹ್ಮ (7ರಿಂದ 12ನೇ ಅಧ್ಯಾಯದವರೆಗೆ)**

* 12ನೇ ಅಧ್ಯಾಯ – ಅಕ್ಷರಬ್ರಹ್ಮನ ಉಪಾಸಕ ಅಥವ ಭಕ್ತ
* 10, 11ನೇ ಅಧ್ಯಾಯ – ವ್ಯಕ್ತವಾದ ಮತ್ತು ಪ್ರಕಟವಾದ ಅಕ್ಷರಬ್ರಹ್ಮನ ಜ್ಞಾನ
* 7, 8, 9ನೇ ಅಧ್ಯಾಯ – ವ್ಯಕ್ತವಾದ ಮತ್ತು ಕಾಣಿಸದ ಅಕ್ಷರಬ್ರಹ್ಮನ ಜ್ಞಾನ ಮತ್ತು ಅಕ್ಷರಬ್ರಹ್ಮನ ಧರ್ಮ/ ನ್ಯಾಯ

⬆

**ತ್ವಂ ಅಥವ ಮಾನವ / ಮನುಷ್ಯ (1ರಿಂದ 6ನೇ ಅಧ್ಯಾಯದವರೆಗೆ)**

* 6ನೇ ಅಧ್ಯಾಯ – ಬ್ರಾಹ್ಮಿ ಸ್ಥಿತಿ – ಧ್ಯಾನ, ಯೋಗ ಸ್ಥಿತಿ ಮತ್ತು ಯೋಗಿ
* 3, 4, 5ನೇ ಅಧ್ಯಾಯ – ಬ್ರಾಹ್ಮಿ ಸ್ಥಿತಿ – ಕರ್ಮ – ಶೂನ್ಯಸ್ಥಿತಿ ಮತ್ತು ಜೀವನ್ಮುಕ್ತ
* 2ನೇ ಅಧ್ಯಾಯ – ಸಂಕ್ಷಿಪ್ತ – ಬ್ರಾಹ್ಮಿಸ್ಥಿತಿ – ಸ್ಥಿತಪ್ರಜ್ಞ , ವಿವೇಕ ಮತ್ತು ಸ್ವಧರ್ಮ
* 1ನೇ ಅಧ್ಯಾಯ – ಮಾನವನ ದ್ವಂದ್ವ ಸ್ಥಿತಿ – ಇಷ್ಟ / ಇಷ್ಟವಿಲ್ಲದರ ನಡುವೆ ಮಾನವನ ಸಂದಿಗ್ಧತೆಯ ಸ್ಥಿತಿ

**ಗೀತೆಯು ಅಮೃತ, ಗಂಗೋದಕ, ಶಾಸ್ತ್ರ, ಧರ್ಮ, ಜ್ಞಾನ – ಅಕ್ಷರಬ್ರಹ್ಮನ ಆಧಾರಿತ ಜೀವನ ಅಥವ ಗುಣಗಳ ಆಧಾರಿತ ಜೀವನದ ಆಯ್ಕೆಯನ್ನು ಕೊಡುವುದು.**

**ತಂದೆ ತಾಯಿಯರನ್ನು ನೋಡಿಕೊಳ್ಳದೆ ಮತ್ತು ಬಡಜನರಿಗೆ ಸಹಾಯ ಮಾಡದೆ ಅತೀ ಶ್ರೀಮಂತನಾದರೂ ಸಹ ಪ್ರಯೋಜನವೇನು ?**

## ಗೀತಾ ಮಹಾತ್ಮ್ಯಂ (ಪುಟ ಸಂಖ್ಯೆ 50 ನೋಡಿ)

1. ಶ್ಲೋಕ 1 – ದ್ವಂದ್ವದಿಂದ / ಗುಣಗಳಿಂದ, ಮಾಯೆಯಿಂದ / ದ್ವಂದ್ವ ಮೋಹದಿಂದ ಕೂಡಿದ ಈ ಪ್ರಪಂಚದಲ್ಲಿ ನಡೆಯುತ್ತಿರುವುದೇನು ?
   ಶ್ಲೋಕ 700 – ಈ ಮಾಯಾಲೋಕದಲ್ಲಿ, ಅಕ್ಷರ ಬ್ರಹ್ಮನೊಂದಿಗೆ ಯುಕ್ತರಾಗಿ ಜೀವಿಸಿದರೆ – ಜೀವಿಸುವಾಗ, ಜೀವಿಸಿದ ನಂತರ ಮತ್ತು ಸದಾಕಾಲ ಸಮೃದ್ಧಿ, ಪ್ರಗತಿ, ಗೆಲುವು, ಅಪರಿಮಿತ ಶಕ್ತಿ, ಶಾಶ್ವತವಾದ ಅನಂದ ಮತ್ತು ನೈತಿಕತೆಯನ್ನು ಅನುಭವಿಸುವಿರಿ.
2. ಓಂ ಹಂ – ನೀನು ಅದು (ಅಕ್ಷರಬ್ರಹ್ಮ) – ಸೋ ಹಂ – ನಾನು ಅದು
3. ನಮಸ್ತೆ ಪ್ರಣಾಮಗಳು – ತಥಾಸ್ತು/ ಹಾಗೆ ಇರಲಿ – ಸ್ವಹ / ಚೆನ್ನಾಗಿ ಮಾಡಿರುವೆ – ಅಕ್ಷರಬ್ರಹ್ಮನನ್ನು ಸೇರುವುದಕ್ಕೆ
4. ನಂಬಿಕೆ ಮತ್ತು ಭಕ್ತಿಯಿಂದ ಯೋಗದ ಮೂಲಕ ಅಕ್ಷರಬ್ರಹ್ಮನನ್ನು ಅನುಭವಿಸಿ ಅರ್ಥಮಾಡಿಕೊಳ್ಳಿ, ಕಲ್ಪಿಸಿಕೊಳ್ಳಿ ಮತ್ತು ಪ್ರವೇಶಿಸಿ.
   ಅಕ್ಷರಬ್ರಹ್ಮನ ಧರ್ಮವನ್ನು ಕಾಪಾಡಲು ಅಕ್ಷರಬ್ರಹ್ಮನು ಈ ಮಾಯಾಲೋಕದಲ್ಲಿ ಯಾವುದಾದರೊಂದು ರೂಪವನ್ನು ಪಡೆದುಕೊಂಡು ಪ್ರವೇಶಿಸುತ್ತಾನೆ ಮತ್ತು ನಾವು ಯಾವ ರೀತಿ ಬದುಕಬೇಕೆಂಬುದನ್ನು ತೋರಿಸಿಕೊಡುತ್ತಾನೆ.
5. ಗೀತಾ ಮಹಾತ್ಮೆ / ಶ್ರೇಷ್ಠತೆ (ನೀವು ಪ್ರತಿಬಾರಿಯೂ 18 ಅಧ್ಯಾಯಗಳನ್ನು ಪೂರ್ಣವಾಗಿ ಓದಿದ ನಂತರ, ಓದಬೇಕು) ನಮ್ಮ ಭಕ್ತಿಯ ಮೇಲೆ ಪ್ರಾರಬ್ಧವು ಯಾವುದೇ ಪರಿಣಾಮವನ್ನು ಉಂಟುಮಾಡುವುದಿಲ್ಲ. ಎಲ್ಲಾ ದೇವರುಗಳು ಇರುತ್ತಾರೆ.
   ಸರ್ವೋಚ್ಛ ಅಕ್ಷರಬ್ರಹ್ಮನ ಜ್ಞಾನ – ಅದು 'ಓಂ'.

| | | |
|---|---|---|
| 18 ಅಧ್ಯಾಯಗಳು | – ಜೀವನ ಪರ್ಯಂತ ಗೀತೆಯ ಪುನರಾವರ್ತನೆ | – ಮೋಕ್ಷ |
| 9 ಅಧ್ಯಾಯಗಳು | – | – ಗೋದಾನ |
| 6 ಅಧ್ಯಾಯಗಳು | – | – ಗಂಗಾಸ್ನಾನ |
| 3 ಅಧ್ಯಾಯಗಳು | – | – ಸೋಮಯಾಗ |
| 1 ಅಧ್ಯಾಯ | – | – ರುದ್ರಲೋಕ |
| 1/2 ರಿಂದ 10 ಶ್ಲೋಕಗಳು | – | – ಚಂದ್ರಲೋಕ |
| 1/4 ಶ್ಲೋಕ | – | – ಮಾನವ ಜನ್ಮ |

**ಅಕ್ಷರಬ್ರಹ್ಮನು ಪರಿಶುದ್ಧ, ಸ್ವಯಂ ಪ್ರಜ್ವಲಿತ ಮತ್ತು ಸಂಪೂರ್ಣ ಕಾಂತಿಯುಕ್ತ / ಬೆಳಕು**

**ಹಣವು ಈ ಜನ್ಮಕ್ಕಾಗಿ – ಅಲ್ಪಾವಧಿ, ಆಧ್ಯಾತ್ಮಿಕ ಪ್ರಗತಿಯು ಅನೇಕ ಜನ್ಮಗಳಿಗಾಗಿ – ಶಾಶ್ವತ**

**ಅಕ್ಷರಬ್ರಹ್ಮ = ಅಂತರಂಗ ದೇವರು (ಕ್ಷೇತ್ರ + ಕ್ಷೇತ್ರಜ್ಞ) ಆತ್ಮದೊಂದಿಗೆ ಯುಕ್ತ – ಧ್ಯಾನದ ಮುಖಾಂತರ + ಬಹಿರಂಗ ದೇವರು (ಪ್ರಕೃತಿ + ಪುರುಷ) (ವ್ಯಕ್ತವಾದ ಅಕ್ಷರಬ್ರಹ್ಮನೊಂದಿಗೆ ಭಕ್ತಿಯಿಂದ ಒಂದಾಗಿ)**

## ಗೀತಾ ನ್ಯಾಸ (ಸಂಪರ್ಕಗಳು) (ಪುಟ ಸಂಖ್ಯೆ 56 ನೋಡಿ)

| ಬೆರಳು | ಅಂಗ | ಬಲ | ಪಂಚಭೂತ ಅಂಶ |
|---|---|---|---|
| ಹೆಬ್ಬೆರಳು | ಹೃದಯ | ದೈಹಿಕ | ಭೂಮಿ |
| ತೋರು ಬೆರಳು | ತಲೆ | ಭಾವನಾತ್ಮಕ | ನೀರು/ಜಲ |
| ಮಧ್ಯದ ಬೆರಳು | ಶಿಖೆ | ಮಾನಸಿಕ | ಅಗ್ನಿ |
| ಉಂಗುರದ ಬೆರಳು | ಸೂಕ್ಷ್ಮ ಶರೀರ | ಬೌದ್ಧಿಕ | ಗಾಳಿ/ವಾಯು |
| ಕಿರು ಬೆರಳು | ಸಂತಾನೋತ್ಪತ್ತಿ | ಆತ್ಮ | ಆಕಾಶ |

ಈ ದೇಹದ ಮೂಲಕ ಅಕ್ಷರಬ್ರಹ್ಮನ ಧರ್ಮವನ್ನು ಪಾಲಿಸುವುದರಿಂದ ಆತ್ಮವು ಮುಕ್ತಿಯನ್ನು ಪಡೆಯಲು ಸಾಧ್ಯ. ಯಾವ ಅಪೇಕ್ಷೆಯಿಲ್ಲದೆ ಜಗತ್ತಿಗೆಲ್ಲ ಬೆಳಕನ್ನು ಪಸರಿಸುವ ಸೂರ್ಯನಂತೆ ಬಾಳಿ.

ಈ ದೇಹ ಅಥವ ಪ್ರಪಂಚ ಶಾಶ್ವತವೆಂದು ತಿಳಿಯಬೇಡಿ. ಅಕ್ಷರಬ್ರಹ್ಮನೊಬ್ಬನೆ ಶಾಶ್ವತ.

ಗೀತೆಯ ಶ್ಲೋಕಗಳೊಂದಿಗೆ ನ್ಯಾಸವನ್ನು (ಕರನ್ಯಾಸ ಮತ್ತು ಹೃದಯ ನ್ಯಾಸ) ಮಾಡಿ.

ನಿಮ್ಮನ್ನು ನೀವು ಆಂತರಿಕವಾಗಿ ಬಲಪಡಿಸಿಕೊಳ್ಳಿ – ದೈಹಿಕವಾಗಿ / ಭಾವನಾತ್ಮಕವಾಗಿ / ಮಾನಸಿಕವಾಗಿ. ಇದರಿಂದ ನೀವು ಇಂದ್ರಿಯ ವಿಷಯಗಳನ್ನೊಳಗೊಂಡಂತೆ ಹೊರಗಿನ ಸೆಳೆತವನ್ನು ಮಣಿಸಿ ವಿಜಯವನ್ನು ಸಾಧಿಸಬಹುದು.

## ಗೀತಾ ಧ್ಯಾನಂ (ಪುಟ ಸಂಖ್ಯೆ 61 ನೋಡಿ)

16

1. ಅಕ್ಷರಬ್ರಹ್ಮನು ಶ್ರೀ ಕೃಷ್ಣನ ಮುಖಾಂತರ ಅರ್ಜುನನಿಗೆ ನೀಡಿದ ಉಪದೇಶ.
2. ವೇದವ್ಯಾಸರು ಮಹಾಭಾರತದಲ್ಲಿ ಹೇಳಿರುವರು. ದೈವಿಕ ಜ್ಞಾನದ ದೀಪವನ್ನು ತಮ್ಮ ಕಮಲದಂತಹ ಕಣ್ಣುಗಳ ಜ್ಞಾನ ಚಕ್ಷುವಿನಿಂದ ಬೆಳಗಿರುವರು.
3. ಮೋಕ್ಷವನ್ನು ಸೇರಲು ಅದ್ವೈತ ಎಂಬ ಅಮೃತವನ್ನು ಕೊಡುವ ತಾಯಿ ಗೀತೆ.
4. ವೇದಗಳು ಮತ್ತು ಉಪನಿಷತ್ತುಗಳು ಗೋವುಗಳಾದರೆ, ಕೃಷ್ಣನು ಗೋಪಾಲಕನು, ಅರ್ಜುನನು ಕರು ಮತ್ತು ಗೀತೆಯು ಹಾಲು.
5. ಕಂಸನನ್ನು ಕೊಂದ ಶ್ರೀಕೃಷ್ಣನು ಪಾಂಡವರ ರಥಸಾರಥಿಯಾಗಿ ಮುಂದೆ ಇದ್ದು ಯುದ್ಧದಲ್ಲಿ ವಿಜಯಿಗಳಾಗುವಂತೆ ಮಾಡಿದನು. ಈ ವಿಶ್ವಕ್ಕೆ ಗುರು ಹಾಗೂ ತಾಯಿ ದೇವಕಿಯ ಪರಮಾನಂದನು.
6. ಗೀತೆಯೆಂಬ ಹರಿಕಥೆಯು ಪರಾಶರ್ಯರಿಂದ (ಪರಾಶರರ ಮಗ ವ್ಯಾಸ) ಬಂದ ಅಮೃತ. ಪ್ರಪಂಚದ ಸಜ್ಜನರಿಂದ / ದುಂಬಿಗಳಿಂದ ಅದು ಹೀರಲ್ಪಡುತ್ತದೆ. ಕಲಿಯುಗದಲ್ಲಿ ಕರ್ಮಗಳನ್ನು ಸ್ವಚ್ಛಗೊಳಿಸುತ್ತದೆ.
7. ಇದು ಅಸಾಧ್ಯವಾದುದನ್ನು ಸಾಧ್ಯಗೊಳಿಸುತ್ತದೆ.
8. ಗೀತೆಯು ವೈಕುಂಠಕ್ಕೆ ದಾರಿ ತೋರಿಸುತ್ತದೆ. ಕರ್ಮಗಳನ್ನು ಸ್ವಚ್ಛಗೊಳಿಸುತ್ತದೆ. ಹೊಸ ಕರ್ಮಬಂಧನವನ್ನು ತಡೆಯುತ್ತದೆ. ಇದು ಶಾಸ್ತ್ರ / ವಿಜ್ಞಾನ / ಬೋಧನೆ, ಇದು ಧರ್ಮ / ನಿಯಮ. ಈ ಗಂಗೆಯನ್ನು ಅಕ್ಷರಬ್ರಹ್ಮನು ಸ್ವತಃ ಕೃಷ್ಣನ ಮುಖಾರವಿಂದದಿಂದ / ಬಾಯಿಯಿಂದ / ಅಧರಗಳಿಂದ ಹೇಳಿರುವನು.
9. ಗೀತೆಯನ್ನು ಓದಿ, ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಕ್ಷರಬ್ರಹ್ಮನಿಗೆ ನಾವು ಸಲ್ಲಿಸುವ ಶ್ರೇಷ್ಠವಾದ ಸೇವೆ.
10. ಸಕಲ ನಕಾರಾತ್ಮಕಗಳನ್ನು ನಾಶಪಡಿಸುವ ಭಗವಂತನಿಗೆ ನಮಸ್ಕಾರ.
11. ದೇವತೆಗಳು, ವೇದ ಪಾಠಕರು ಮತ್ತು ಧ್ಯಾನಿಸುವವರು – ಅಕ್ಷರಬ್ರಹ್ಮನನ್ನು ಗೀತೆಯ ಮುಖಾಂತರ ಕಂಡು, ಹಾಡಿ ಹೊಗಳುವರು.
12. ಅಕ್ಷರಬ್ರಹ್ಮನನ್ನು ಹೊರತುಪಡಿಸಿ ಅಕ್ಷರ ಬ್ರಹ್ಮನ ಬಗ್ಗೆ ಯಾರಿಗೂ ತಿಳಿದಿಲ್ಲ. ಆತ ಆಶ್ರಯದಾತ ಮತ್ತು ವಿಶ್ವಪ್ರಭು.

**ಪ್ರಕೃತಿಗೆ ಅಕ್ಷರಬ್ರಹ್ಮನು ತನ್ನ ಕೆಲಸವನ್ನು ಮಾಡಲು ಹಕ್ಕನ್ನು ನೀಡಿರುವನು. ಅದನ್ನು ಪರಿಶೀಲಿಸಿ ಸರಿದೂಗಿಸಲು ಮಧ್ಯೆ ಪ್ರವೇಶಿಸುವನು. ಅಕ್ಷರಬ್ರಹ್ಮನಲ್ಲಿ ನಿಮಗಿರುವ ಪ್ರೀತಿಯನ್ನು ಬಂಧನವಿಲ್ಲದೆ, ವೈರಾಗ್ಯದ ಮೂಲಕ ತೋರಿಸಿ.**

**ಸಂಪೂರ್ಣ ಸಮಷ್ಠಿಯ ಅರಿವು** ⇄ **ಸಂಪೂರ್ಣ ಏಕತೆ** ⇄ **ಉಭಯ ಭಾಗದ ಮೆದುಳು ಜಾಗೃತ**
(ಇಂದ್ರಿಯಗಳಿಗೆ ಅತೀತವಾದುದನ್ನು ಗ್ರಹಿಸುತ್ತದೆ)

## ॐ ಅ ಉ ಮ

### ಓಂ ಅಥವ ಅ ಉ ಮ  ಅಕ್ಷರಬ್ರಹ್ಮನ ಹೆಸರು

### ಅ ಉ ಮ ಎನ್ನುವುದು ಸಂಪೂರ್ಣ ಜ್ಞಾನ ಮತ್ತು ಪ್ರಥಮ ದೈವೀ ಕಂಪನ.

### ಅಕ್ಷರಬ್ರಹ್ಮನನ್ನು ಸೇರಲು ಅ ಉ ಮ ಗಳನ್ನು ದಾಟಿ ಹೋಗಬೇಕು.

| ಅ | ಉ | ಮ |
|---|---|---|
| ಋಗ್ವೇದ | ಸಾಮವೇದ | ಯಜುರ್ವೇದ |
| ಬ್ರಹ್ಮ | ವಿಷ್ಣು | ಶಿವ |
| ಜಾಗೃತ | ಸ್ವಪ್ನ | ಸುಷುಪ್ತಿ |
| ದೈಹಿಕ | ಭಾವನಾತ್ಮಕ | ಮಾನಸಿಕ |
| ಅಗ್ನಿಯ ಬೆಳಕು | ಚಂದ್ರನ ಬೆಳಕು | ಸೂರ್ಯನ ಬೆಳಕು |
| ಪೃಥ್ವಿ | ನಕ್ಷತ್ರ | ಸ್ವರ್ಗ |
| | | |

ವೇದ ಉಪನಿಷತ್ತು ಇತ್ಯಾದಿಗಳ ಆದಿ ಮತ್ತು ಅಂತ್ಯದಲ್ಲಿ ಉಲ್ಲೇಖಿಸಲಾಗಿದೆ.

**ಪ್ರತಿಯೊಂದು ರೂಪಾಯಿಯು ಪರಿಗಣಿಸಲ್ಪಡುತ್ತದೆ. ಪ್ರತಿಯೊಂದು ಶ್ಲೋಕವೂ ಗಣನೆಗೆ ಬರುತ್ತದೆ. ಪ್ರತಿಯೊಂದು ಕಾರ್ಯವೂ ಗಣನೆ ಮಾಡಲ್ಪಡುತ್ತದೆ. ಪ್ರತಿಯೊಂದು ಧ್ಯಾನವು ಗಣನೆಗೆ ಬರುತ್ತದೆ. ಪ್ರತಿಯೊಂದು ಘಟನೆಯು ಗಣಿಸಲ್ಪಡುತ್ತದೆ. ಪ್ರತಿಯೊಂದು ಸಹಾಯವು ಪರಿಗಣಿಸಲ್ಪಡುತ್ತದೆ. ಅಹಂಕಾರ/ಕರ್ತೃತ್ವ ತ್ಯಾಗದ ಪ್ರತಿಯೊಂದು ಪ್ರಯತ್ನವೂ ಸಹ ಗಣನೆಗೆ ಬರುತ್ತದೆ. ಗೀತೆಯನ್ನು ಆಧರಿಸಿ ನಿಮ್ಮ ಜೀವನವನ್ನು ಆತ್ಮಾವಲೋಕನ ಮಾಡಿಕೊಳ್ಳಿ ಮತ್ತು ಅದನ್ನು ಪರಿಶೀಲಿಸಿ, ಸರಿದೂಗಿಸಿಕೊಳ್ಳಿ.**

# ವಿಕಸನ / ಪ್ರಗತಿ

1. ವಿಕಸನ ಅಥವ ಪ್ರಗತಿ – ಜೀವನ ಪರ್ಯಂತ ಗೀತೆಯನ್ನು ಪುನರಾವರ್ತನೆ ಮಾಡುವುದು ಮೋಕ್ಷಕ್ಕೆ ದಾರಿಯಾಗುತ್ತದೆ.
2. ಈ ಮಾಯಾಲೋಕದೊಂದಿಗೆ ಅನಾಸಕ್ತಿಯಿಂದ ಇದ್ದು ಪ್ರತಿದಿನ ಗೀತೆಯನ್ನು ಅಭ್ಯಾಸ ಮಾಡಿ.
3. ನಿಮ್ಮ ದಿನಚರಿಯಲ್ಲಿ ಇದನ್ನು ರೂಢಿಸಿಕೊಳ್ಳಿ.
4. ಇದು ಹಂತ ಹಂತವಾಗಿ ಬೆಳವಣಿಗೆ ಹೊಂದಿ ಹಲವಾರು ಜನನಚಕ್ರಗಳ ನಂತರ ಮೋಕ್ಷಕ್ಕೆ ಕೊಂಡೊಯ್ಯುತ್ತದೆ.
5. ಮೋಕ್ಷದ ಹಂತಗಳು :
   ಅ. ಫಲತ್ಯಾಗದಿಂದ ನೈಷ್ಕರ್ಮ್ಯ ಸಿದ್ಧಿ
   ಆ. ಧ್ಯಾನ – ಸಾರೂಪ್ಯ – ಸ್ಥಿತಪ್ರಜ್ಞ
   ಇ. ಸಮತ್ವ ಬುದ್ಧಿಯೋಗ – ಸಾಲೋಕ್ಯ / ಸಾಮಿಪ್ಯ – ಜೀವನ್ಮುಕ್ತ
   ಈ. ಜ್ಞಾನಯೋಗ – ಕೈವಲ್ಯ ಮತ್ತು ಸಾಯುಜ್ಯ – ಗುಣಾತೀತ – ಭಕ್ತ
   ಉ. ಮೋಕ್ಷ ಅಥವ ಅಕ್ಷರ ಬ್ರಹ್ಮನಲ್ಲಿ ಲೀನ
6. ಗೀತೆಯ ಒಂದು ಆವೃತ್ತಿ – ಗೀತೆಯ ಧ್ಯಾನ, ಗೀತಾ ಮಹಾತ್ಮೆ, ನ್ಯಾಸ, ಅರ್ಥಸಹಿತ 18 ಅಧ್ಯಾಯಗಳ ಶ್ಲೋಕ ಪಾರಾಯಣ ಮತ್ತು ಗೀತಾ ಆರತಿ.
7. ಆರಂಭದಲ್ಲಿ ಅಭ್ಯಾಸಕ್ಕೆಂದು – ಕನಿಷ್ಠ ಧ್ಯಾನಕ್ಕೆ ಒಂದು ಘಂಟೆ, ಗೀತೆಯನ್ನು ಅಭ್ಯಾಸ ಮಾಡಲು ಒಂದು ಘಂಟೆ ಮತ್ತು ಗೀತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಒಂದು ಘಂಟೆಯನ್ನು ಮೀಸಲಿಡಿ. ಅಭ್ಯಾಸದ ಮುಖಾಂತರ ನಿಧಾನವಾಗಿ ಈ ಸಮಯವನ್ನು ಹೆಚ್ಚಿಸಿಕೊಳ್ಳಿ.
8. ಹೂಗಳು – ಕೆಲವು ಹೂಗಳು ಬಳಸಲ್ಪಡದೆ ಒಣಗಿ ಹೋಗುತ್ತವೆ. ಕೆಲವು ಹೂಗಳು ಆಲಂಕಾರಿಕವಾಗಿರುತ್ತವೆ. ಕೆಲವು ಹೂಗಳು ಪೂಜೆಗೆ ಬಳಸಲ್ಪಡುತ್ತವೆ.

**ಮನುಜರು – ಅನೇಕರು ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ ಅಥವ ಅಧೋಗತಿಗೆ ಹೋಗುತ್ತಾರೆ. ಕೆಲವರು ಮರಳ ಇಲ್ಲಿಗೆ ಹಿಂದಿರುಗುತ್ತಾರೆ. ಕೆಲವರು ದೇವರ ಹತ್ತಿರ ಹೋಗಲು ಬೆಳವಣಿಗೆ ಹೊಂದುತ್ತಾರೆ.**

**ವೇದಜ್ಞಾನವನ್ನು ಪಡೆಯಲು ಅನೇಕ ಮಾರ್ಗಗಳಿವೆ. ಈ ಕಲಿಯುಗದಲ್ಲಿ ಗೀತೆಯು ಅತ್ಯುತ್ತಮವಾದುದು. ದೇವರನ್ನು ಧ್ಯಾನಿಸಲು ಅನೇಕ ಮಾರ್ಗಗಳಿವೆ. ಭಾಗವತದ ಪ್ರಕಾರ ಧ್ಯಾನ ಮಾಡುವುದು ಅತ್ಯುತ್ತಮ. ಅಕ್ಷರಬ್ರಹ್ಮನನ್ನು ಸೇರಲು ಏಕೈಕ ಮಾರ್ಗ – ಕರ್ಮ ಯೋಗ ಅಥವ ಅರ್ಹ ಬಡಜನರಿಗೆ ಸ್ವಾರ್ಥರಹಿತ ಸಹಾಯ. ಇದನ್ನು ಅಹಂ / ನಾನು / ನನ್ನ / ನನ್ನದು ಎಂಬ ಕರ್ತೃತ್ವವನ್ನು ತ್ಯಜಿಸಿ ಸಂನ್ಯಾಸಯೋಗದೊಂದಿಗೆ ಮಾಡಬೇಕು.**

# ಜೀವನದ ಭಾಗಲಬ್ಧ

1. ಆಟ ವಿನೋದಕ್ಕಾಗಿ ಅಕ್ಷರಬ್ರಹ್ಮನು ಈ ವಿಶ್ವವನ್ನು ಸೃಷ್ಠಿಸಿದನು. ಯಾವುದೇ ರೀತಿ ಬಂಧನವಿಲ್ಲ ಅಥವ ದ್ವೇಷವಿಲ್ಲ. ನಾವು ಈ ಪ್ರಪಂಚವನ್ನು ಓದು, ಕೆಲಸ, ಮದುವೆ, ಮಕ್ಕಳು, ಮೊಮ್ಮಕ್ಕಳು, ಹಣ, ಆಸ್ತಿಯ ಸಂಗ್ರಹಣೆ ಮುಂತಾದವುಗಳಿಂದ ಅನಾರೋಗ್ಯಕರ ಪೈಪೋಟಿ ನಡೆಸಿ ದ್ವೇಷ ಮತ್ತು ಬಂಧನದಿಂದ ಉಂಟಾಗುವ ನೋವಿನಿಂದ ಜೀವನವನ್ನು ಒತ್ತಡಕ್ಕೊಳಗಾಗುವಂತೆ ಮಾಡಿಕೊಂಡಿದ್ದೇವೆ.
2. ಪ್ರತಿಬಿಂಬಿಸು – ಸತ್ಯವನ್ನು ತಿಳಿಯಲು ಆಳವಾಗಿ ಹೋಗಬೇಕು. ಮೇಲ್ನೋಟಕ್ಕೆ ಸತ್ಯವು ಗೋಚರಿಸದು.
3. ವೇದ ಮಂತ್ರಗಳು – ಋಗ್ವೇದ – ಪ್ರಜ್ಞಾನಂ ಬ್ರಹ್ಮನ್ / ಅಕ್ಷರಬ್ರಹ್ಮ
   ಸಾಮವೇದ – ತತ್ ತ್ವಂ ಅಸಿ
   ಯಜುರ್ವೇದ – ಅಹಂ ಬ್ರಹ್ಮನ್ ಅಸ್ಮಿ
   ಅಥರ್ವಣ ವೇದ – ಅಯಂ ಆತ್ಮನ್ ಬ್ರಹ್ಮನ್
   ಶ್ರೀಮದ್ಭದವ್ಗೀತಾ (ಪಂಚಮ ವೇದ) – ಓಂ ತತ್ ಸತ್
4. ಜೀವನ ಭಾಗಲಬ್ಧ = ಕೊಡುವುದು ÷ ಸ್ವೀಕರಿಸುವುದು = ಶೂನ್ಯದಿಂದ ಅನಂತದವರೆಗೂ ಇರುತ್ತದೆ. ಕಡಿಮೆ ತೆಗೆದುಕೊಂಡು, ಹೆಚ್ಚು ಕೊಟ್ಟಾಗ ಅನಂತದ ಸಮೀಪ ಹೋಗಲು ಸಾಧ್ಯ. ಶ್ರೀಮಂತರಾದಷ್ಟು ಸ್ವಾರ್ಥರಾಗುವುದು ಮಾನವ ಸ್ವಭಾವ.
5. ಸಂಸಾರ, ಸ್ನೇಹಿತರು, ದೇವಸ್ಥಾನಕ್ಕೆ ಹೋಗುವುದು, ಗೀತೆಯನ್ನು ಓದುವುದು ಮುಂತಾದವುಗಳಿಗೆ 25 ಅಂಕಗಳು. ಗೀತೆಯನ್ನು ಜೀವನದಲ್ಲಿ ಅಳವಡಿಸಿಕೊಂಡರೆ 75 ಅಂಕಗಳು. ಒಟ್ಟು 100 ಅಂಕಗಳ ಸಮೀಪ = ಸ್ವಹ ಅಥವ ಮೋಕ್ಷ

**ಯಾವುದೇ ಅಪೇಕ್ಷೆಯಿಲ್ಲದೆ ಅಕ್ಷರಬ್ರಹ್ಮನು ಈ ಸೃಷ್ಠಿಯನ್ನು ರಚಿಸಿ, ಪೋಷಿಸಿ ಮತ್ತು ಲಯವಾಗಿಸಿಕೊಳ್ಳುತ್ತಾನೆ. ಯಾವುದೂ ಯಾರಿಗೂ ಸೇರಿಲ್ಲ.**

**ಪ್ರಾಪಂಚಿಕ ಸಂಬಂಧಗಳು ತಂದೆ, ಮಗ ....... ಹೀಗೆ ವಿಭಿನ್ನವಾಗಿರುತ್ತವೆ. ಆಧ್ಯಾತ್ಮಿಕವಾಗಿ ಸಂಬಂಧವು ಏಕವಾಗಿರುತ್ತದೆ. ಆದರೆ ಕೆಲವರು ತಮ್ಮದೇ ದೇಶದಲ್ಲಿದ್ದು ಭ್ರಷ್ಟರಾಗಿರುತ್ತಾರೆ. ಕೆಲವರು ಹಣದ ಮೋಹದಿಂದ ತಂದೆ–ತಾಯಿಯರನ್ನು ಮತ್ತು ದೇಶವನ್ನು ನಿರ್ಲಕ್ಷಿಸುತ್ತಾರೆ. ಇವರಿಬ್ಬರೂ ಸಹ ಮಾನವರಿಗಾಗಿ ಅಕ್ಷರಬ್ರಹ್ಮನು ಮಾಡಿರುವ ಧರ್ಮವನ್ನು ಉಲ್ಲಂಘಿಸಿದವರಾಗಿದ್ದಾರೆ.**

## ದೇವರ ಶಕ್ತಿ (Power) ಮತ್ತು ಅದರಿಂದ ಉತ್ಪತ್ತಿಯಾಗುವ ಊರ್ಜ (Energy)

1. ಗುಣಶಕ್ತಿ / ಪ್ರಕೃತಿ ಶಕ್ತಿ ಮತ್ತು ಆತ್ಮ ಶಕ್ತಿ / ಪುರುಷ ಶಕ್ತಿ, ಇವೆರಡೂ ಸಹ ಅಕ್ಷರಬ್ರಹ್ಮನಿಂದಲೇ ಹೊರಹೊಮ್ಮುತ್ತವೆ.
2. ಗುಣಶಕ್ತಿಗೆ ಎರಡು ಘಟಕಗಳಿವೆ. ಆವರಣ ಶಕ್ತಿ (ಅಕ್ಷರಬ್ರಹ್ಮನನ್ನು ಆವರಿಸಿದೆ) ಮತ್ತು ವಿಕ್ಷೇಪ ಶಕ್ತಿ (ಅಕ್ಷರಬ್ರಹ್ಮನಿಂದ ಬೇರೆಡೆಗೆ ಸೆಳೆದಿದೆ)
3. ಅಕ್ಷರಬ್ರಹ್ಮನನ್ನು ಸೇರಲು ಮತ್ತು ಆತ್ಮಶಕ್ತಿಯನ್ನು ಆನಂದಿಸಲು ಅಸಮತೋಲನದಲ್ಲಿರುವ ಈ ಮಾಯಾಲೋಕದಲ್ಲಿ ನಿರ್ಲಿಪ್ತತೆಯನ್ನು ಹೊಂದಿ ಧ್ಯಾನವನ್ನು ಅಭ್ಯಾಸ ಮಾಡುವುದರ ಮೂಲಕ ಗುಣಶಕ್ತಿಯನ್ನು ಗೆಲ್ಲಬಹುದು.
4. ನಾವು ಭಗವದ್ಗೀತೆಯ ಜ್ಞಾನ ಪಡೆದು ಧ್ಯಾನ ಮಾಡದಿದ್ದರೆ, ಗುಣಶಕ್ತಿಗಳಾದ ದ್ವಂದ್ವತೆ, ಭಯ, ಕೋಪ, ಇಚ್ಛೆ, ರುಚಿ–ಅರುಚಿಗಳು, ರಾಗ–ದ್ವೇಷಗಳು ನಮ್ಮ ಕ್ರಿಯೆಗಳನ್ನು ನಿಯಂತ್ರಿಸುತ್ತವೆ.
5. ಅಕ್ಷರಬ್ರಹ್ಮನಲ್ಲಿ ನಂಬಿಕೆಯಿಟ್ಟು ಆತ್ಮಶಕ್ತಿಗಳಾದ ಯೋಗ, ಶಾಂತಿ, ಸಂತೋಷ, ವಿಮೋಚನೆ, ಸಹಬಾಳ್ವೆ, ಸ್ಪಷ್ಟತೆ, ವೈರಾಗ್ಯ, ಗೀತೆ, ಧ್ಯಾನಗಳನ್ನು ಅಳವಡಿಸಿಕೊಂಡು ಅಹಂಕಾರವನ್ನು ತ್ಯಜಿಸಿ ಇತರರಿಗೆ ಸಹಾಯವನ್ನು ಮಾಡುವುದರಿಂದ ನಮ್ಮಲ್ಲಿ ವಿಶೇಷವಾದ ಭಕ್ತಿಯ ಹೊಳಪು ಹೊಮ್ಮುತ್ತದೆ.

ಅಕ್ಷರಬ್ರಹ್ಮನು ಗುಣಶಕ್ತಿಯಲ್ಲಿಲ್ಲ. ಆತ್ಮ ಶಕ್ತಿಯಲ್ಲಿರುವನು. ಈ ಎರಡೂ ಶಕ್ತಿಗಳು ನಮ್ಮಲ್ಲಿ ಪೂರ್ವನಿಯೋಜಿತವಾಗಿವೆ. ನಾವು ಜೀವನ ನಡೆಸುವ ವಿಧಾನವು ನಾವು ಆಯ್ಕೆ ಮಾಡಿರುವುದನ್ನು ಅವಲಂಬಿಸಿರುತ್ತದೆ. ಗುಣ ಆಧಾರಿತ ಕರ್ಮ ಅಥವ ಅಕ್ಷರಬ್ರಹ್ಮ ಆಧಾರಿತ ಕರ್ಮ.


**ಗುಣಶಕ್ತಿಯು ನಮ್ಮನ್ನು ಪುನರ್ಜನ್ಮಕ್ಕೆ ಕರೆದೊಯ್ಯುತ್ತದೆ ಮತ್ತು ಆತ್ಮ ಶಕ್ತಿಯು ನಮ್ಮನ್ನು ವಿಮೋಚನೆಗೆ ಕೊಂಡೊಯ್ಯುತ್ತದೆ.**
**ಗೀತೆ ಮತ್ತು ಧ್ಯಾನವು ನಮಗೆ ಈ ಎರಡೂ ಅನುಭವಗಳನ್ನು ನೀಡುತ್ತದೆ ಹಾಗು ಆತ್ಮ ಶಕ್ತಿಯೆಡೆಗೆ ದಾರಿಯನ್ನು ತೋರಿಸುತ್ತದೆ.**
**ಅಕ್ಷರಬ್ರಹ್ಮನು ಮೂಲ ಶಕ್ತಿ. ಆ ಮೂಲ ಶಕ್ತಿಯನ್ನು ಬಳಸಿಕೊಳ್ಳುವುದು ಊರ್ಜ (ಆತ್ಮ / ಗುಣ ಶಕ್ತಿ).**

**ನಮ್ಮಲ್ಲಿ ಅನೇಕರು ಅಕ್ಷರಬ್ರಹ್ಮನು ಆಶೀರ್ವದಿಸಿದ ಈ ಊರ್ಜವನ್ನು ನಮ್ಮ ಸ್ವಂತಕ್ಕೆ (ಸ್ವಯಂ) / ಕುಟುಂಬಕ್ಕೆ ಬಳಸುತ್ತೇವೆ.**
**ಇದು ದುಃಖದ ಸಂಗತಿ.**

# ಯುಕ್ತತೆ

**ನವಜಾತ ಶಿಶುವು ನೂತನ ಗಣಕ ಯಂತ್ರದಂತೆ. ನಾವು ಅದನ್ನು ಹೇಗೆ ಪೋಷಿಸುತ್ತೇವೆಯೋ ಅದು, ಅದರಂತೆ ಜೀವಿಸುತ್ತದೆ. ಆ ಮಗುವಿಗೆ ನೀವು ದೂರದರ್ಶನ (TV), ಜಂಗಮವಾಣಿ (Mobile) ಅಥವ ಹಣವನ್ನು ಕೊಡದೆ ಗೀತೆಯನ್ನು ಕೊಟ್ಟು ಬೆಳೆಸಿ.**

1. ಅಕ್ಷರಬ್ರಹ್ಮನೊಂದಿಗೆ ಯುಕ್ತ = ಆತ್ಮ ಜೋಡಣೆ + ಆತ್ಮ ಸಮತೋಲನೆ + ಆತ್ಮ ವಿಲೀನ
   (ದೇಹ, ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಯನ್ನು ಉಪಯೋಗಿಸಿ – ಅಷ್ಟಾಂಗ ಯೋಗ)
2. ನಿಯಮಗಳು, ಯಮಗಳು, ಯೋಗಾಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ – ಇವು ಅಷ್ಟಾಂಗಗಳು
3. ಧ್ಯಾನ ಮತ್ತು ಗೀತೆಯನ್ನು ಆಳವಾಗಿ ಮನನ ಮಾಡಿದಾಗ ಯುಕ್ತತೆಯು ಸಾಧ್ಯ.
   ಅ. ನೀವು ಈ ಜೀವನದಲ್ಲಿ ಏನನ್ನು ಸಾಧಿಸಲು ಬಯಸುವಿರಿ ?
   ಆ. ನೀವು ಈ ಜೀವನದ ನಂತರ ಎಲ್ಲಿಗೆ ತಲುಪಲು ಬಯಸುವಿರಿ ?



# ಜೀವನ ಆಯ್ಕೆಗಳು



1. ಈ ಜೀವನ ಅಕ್ಷರಬ್ರಹ್ಮನು ನೀಡಿದ ಆಯ್ಕೆ – ತಾತ್ಕಾಲಿಕವಾದ, ಚಲನೆಯುಳ್ಳ ಮತ್ತು ಬದಲಾಗುವ ಸೃಷ್ಟಿಕರ್ತ ಬ್ರಹ್ಮನವರೆಗೂ ಇರುವ ಈ ಮಾಯಾಲೋಕದಲ್ಲಿ ಸುತ್ತುತ್ತಿರುವುದು ಅಥವ ಸೃಷ್ಟಿಕರ್ತ ಬ್ರಹ್ಮನಿಗೆ ಅತೀತನಾಗಿರುವ, ಸ್ಥಿರನಾಗಿರುವ, ಶಾಶ್ವತವಾಗಿರುವ ಮತ್ತು ಬದಲಾವಣೆಯಾಗದ ಸಂಪೂರ್ಣ ಬೆಳಕನ್ನು ಸೇರುವುದು.
2. ಪ್ರವೃತ್ತಿ / ಪ್ರಾಮಾಣಿಕ ಆದರೆ ಕುಟುಂಬಕ್ಕೆ ಮಾತ್ರ ಸೀಮಿತ. ಭೂಮಿ / ನಕ್ಷತ್ರ / ಸ್ವರ್ಗದಲ್ಲಿ ಅಲೆದಾಡುವಿರಿ. ನಿವೃತ್ತಿ / ಗೀತೆ–ಅಕ್ಷರ ಬ್ರಹ್ಮನೆಡೆಗೆ ದಾರಿ ತೋರುತ್ತದೆ. ಅಜ್ಞಾನ / ಅಧೋಮಾರ್ಗ ಭೂಮಿಯ ಕೆಳಗೆ ಒಯ್ಯುತ್ತದೆ.
3. ನಿವೃತ್ತಿ – ಗೀತೆಯ ಮೂಲಕ ಅಕ್ಷರಬ್ರಹ್ಮನನ್ನು ಅರಿಯಿರಿ. ಧ್ಯಾನದ ಮೂಲಕ ಅಕ್ಷರಬ್ರಹ್ಮನನ್ನು ದರ್ಶಿಸಿ. ಯಜ್ಞ, ದಾನ, ತಪಸ್ಸು, ಕರ್ಮಯೋಗ ಮತ್ತು ಜ್ಞಾನ / ಸಂನ್ಯಾಸ ಯೋಗದ ಮೂಲಕ ಅಕ್ಷರಬ್ರಹ್ಮನನ್ನು ಸೇರಿ.
4. ಇಲ್ಲಿ ನಿರಂತರ ಅಭ್ಯಾಸ ಮತ್ತು ವೈರಾಗ್ಯದೊಂದಿಗೆ ಅಕ್ಷರಬ್ರಹ್ಮನ ಮೇಲೆ ನಂಬಿಕೆ ಮತ್ತು ಭಕ್ತಿ ಬಹಳ ಮುಖ್ಯವಾಗಿದೆ. ಇದು ಹಲವಾರು ಜನ್ಮಗಳ ಹಂತ ಹಂತವಾದ ಸಾಧನೆಯಾಗಿದೆ.
5. ಅಕ್ಷರಬ್ರಹ್ಮನಿಗೆ ಜೀವನದಲ್ಲಿ ಪ್ರಥಮ ಪ್ರಾಮುಖ್ಯತೆ / ಆದ್ಯತೆ ನೀಡಿರಿ. ಅಕ್ಷರಬ್ರಹ್ಮನಲ್ಲಿ ಆಶ್ರಯ ಪಡೆಯಿರಿ. ನಿಮ್ಮನ್ನು ನೀವು ಅಕ್ಷರಬ್ರಹ್ಮನಿಗೆ ಅರ್ಪಿಸಿಕೊಳ್ಳಿ. ಅಕ್ಷರಬ್ರಹ್ಮನಿಗೆ ಶರಣಾಗಿ ಗುಣಗಳನ್ನು ಜಯಿಸಿದರೆ ಜೀವಿಸಿರುವವರೆಗೂ, ಹೊರಡುವಾಗ ಮತ್ತು ಹೊರಟ ನಂತರವೂ ಶಾಶ್ವತವಾಗಿ ಅಕ್ಷರಬ್ರಹ್ಮನ ಆಟ ಮತ್ತು ವಿನೋದವನ್ನು ಆನಂದಿಸುವಿರಿ.
6. ಅಕ್ಷರಬ್ರಹ್ಮನಲ್ಲಿ ಯುಕ್ತರಾಗಿ ಮಿತಿಯಿಂದ ಅಪರಿಮಿತದೆಡೆಗೆ, ಬದಲಾವಣೆಯಿಂದ ಬದಲಾಗದಿರುವೆಡೆಗೆ, ತಾತ್ಕಾಲಿಕತೆಯಿಂದ ಶಾಶ್ವತದೆಡೆಗೆ ವಿಸ್ತರಿಸಿ.
7. ಯೋಗಿ–ಕರ್ಮಯೋಗ, ಧ್ಯಾನ, ಬುದ್ಧಿಯೋಗ ಮತ್ತು ಸಂನ್ಯಾಸ ಯೋಗವನ್ನು ಅಭ್ಯಾಸ ಮಾಡುತ್ತಾನೆ. ಗೀತೆಯನ್ನು ಅನುಸರಿಸಿ ಆಸೆಗಳನ್ನು ಗೆದ್ದು ಸ್ಥಿತಪ್ರಜ್ಞನಾಗಿ – ಇಚ್ಛೆ, ಭಯ, ಕ್ರೋಧಗಳನ್ನು ಗೆದ್ದು ಜೀವನ್ಮುಕ್ತನಾಗಿ – ಗುಣಗಳನ್ನು, ಆಸೆಗಳ ಕಾರಣವನ್ನು ದಾಟಿ ಗುಣಾತೀತನಾಗಿ ಭಕ್ತನಾಗುತ್ತಾನೆ.
8. ಅಕ್ಷರಬ್ರಹ್ಮ – ಕಾರಣ / ಪರಿಣಾಮ, ವಿಷಯ / ವಿಷಯದ ವಸ್ತು, ಪರಿಮಿತ / ಅಪರಿಮಿತ, ವಾಸಸ್ಥಾನ / ಮೂಲ, ಬೀಜ / ತಾಯಿ ಬೇರು, ಒಳಗೆ/ಹೊರಗೆ, ದೂರ / ಹತ್ತಿರ, ಚಲಿಸುವ / ಚಲಿಸದ
9. ಅಕ್ಷರಬ್ರಹ್ಮನ ಒಂದು ಚಿಂತನೆಯ ಫಲವಾಗಿ, ಗುಣಗಳು ಅಸಮತೋಲನಗೊಂಡು ಜಡ ಮತ್ತು ಜೀವ ಪ್ರಕೃತಿಯ ಹುಟ್ಟಿಗೆ ಕಾರಣವಾಗಿದೆ. ಬ್ರಹ್ಮಾಂಡವೆಂಬ ಈ ಪ್ರತಿಬಿಂಬ 4 ಸಂಯೋಜಿತಗೊಂಡ ಮತ್ತು 3 ಸಂಯೋಜಿತಗೊಳ್ಳದ ಪದರಗಳನ್ನೊಳಗೊಂಡಿದೆ. ಈ ಮಾಯಾಲೋಕವನ್ನು ಅಕ್ಷರಬ್ರಹ್ಮನು ತನ್ನ ಇಚ್ಛೆಯಂತೆ ವಿವಿಧ ರೂಪಗಳನ್ನು ಪಡೆದುಕೊಂಡು ಪ್ರವೇಶಿಸುವನು.
10. ಅಕ್ಷರಬ್ರಹ್ಮನು – ಅನಂತ, ಅವಿನಾಶಿ, ಶಾಶ್ವತ, ಸರ್ವೋಚ್ಚ, ಸ್ವಯಂಪ್ರಜ್ವಲಿತ, ಸ್ವಯಂಚಾಲಿತ, ಸಂಪೂರ್ಣ ಮತ್ತು ಸೂಕ್ಷ್ಮಾತಿಸೂಕ್ಷ್ಮ, ಶುದ್ಧ ಪ್ರಜ್ಞೆ, ಅಸ್ತಿತ್ವ, ವಾಸ್ತವ ಮತ್ತು ಭಾವ.

## ಧರ್ಮ ಅಥವ ನಿಯಮ

| ಮಾನವನು ಅನುಸರಿಸುತ್ತಿರುವ ಸನಾತನ ಧರ್ಮ | ಅಕ್ಷರಬ್ರಹ್ಮನ ಸನಾತನ ಧರ್ಮ |
|---|---|
| ಗುಣಗಳ ಆಧಾರಿತ ಕರ್ಮ | ಅಕ್ಷರಬ್ರಹ್ಮನ ಆಧಾರಿತ ಕರ್ಮ |
| ನಾನು ದೇಹ | ನಾನು ಆತ್ಮ |
| ಅಯುಕ್ತ | ಯುಕ್ತ |
| ಜೀವನ ಭಾಗಲಬ್ಧ ಕಡಿಮೆ | ಜೀವನ ಭಾಗಲಬ್ಧ ಹೆಚ್ಚು |
| ಆಸಕ್ತ / ಮೋಹ | ಅನಾಸಕ್ತ / ವೈರಾಗ್ಯ |
| ದ್ವೇಷ | ಸಮಾನತೆಯ ಮನಸ್ಸು |
| ಇಚ್ಛೆ, ಭಯ, ಕ್ರೋಧ | ಸಮತ್ವ ಬುದ್ಧಿ |
| ಹೆಮ್ಮೆ, ಭ್ರಮೆ, ಅಸೂಯೆ | ಸಮಾಜದ ಒಳಿತಿಗೆ |
| ಸ್ವಾರ್ಥಿ | ಯಜ್ಞ, ದಾನ ಮತ್ತು ತಪಸ್ಸು |
| ವರ್ಗ 'ಅ' – ಆಸುರಿ | ವರ್ಗ 'ಇ' – ಜ್ಞಾನಿ |
| ಇತರರಿಗೆ ತೊಂದರೆ | ನಿವೃತ್ತಿ |
| ವರ್ಗ 'ಆ' – ಪ್ರವೃತ್ತಿ | ಕರ್ಮ / ಸಂನ್ಯಾಸ ಯೋಗ |
| ಕುಟುಂಬಕ್ಕೆ ಸೀಮಿತ | ಸೀಮಿತದಿಂದ ಹೊರಗೆ |
| ಪುನರ್ಜನ್ಮ / ತಾತ್ಕಾಲಿಕ ಸಂತೋಷ | ವಿಮೋಚನೆ / ಶಾಶ್ವತ ಆನಂದ |
| ಧರ್ಮ ಆಧಾರಿತ | ಗೀತೆ, ವೇದ ಆಧಾರಿತ |


**ಮೆದುಳಿನ ಎಡಭಾಗವು ವಿಶ್ಲೇಷಣಾತ್ಮಕ ಅಥವ ಲೌಕಿಕವಾಗಿದೆ. ಮೆದುಳಿನ ಬಲಭಾಗವು ಆಧ್ಯಾತ್ಮಿಕವಾಗಿದೆ.**

# ಪ್ರಸ್ತುತ ಕಾಲ

# ಕಲಿಯುಗದ ಸತ್ಯ

ಗುಣಗಳು ಪ್ರಕೃತಿಯ ರೂಪಗಳು

ಗುಣಾತೀತನು ಸಾತ್ವಿಕ, ರಾಜಸಿಕ, ತಾಮಸಿಕ ಗುಣಗಳನ್ನು ದಾಟಿರುವವನು.




ನಮಗೆ ಸಂಪತ್ತು ಇಲ್ಲ.
ಈ ಜೀವನದ
ಉಪಯೋಗವೇನು ?

ನಮಗೆ ಕುಟುಂಬವಿಲ್ಲ. ಯಾರಿಗಾಗಿ
ನಾವು ಬದುಕಬೇಕು ?

ಗುಣಾತೀತನು ಅಕ್ಷರಬ್ರಹ್ಮನನ್ನು
ಸೇರುತ್ತಾನೆ.

ಸಾತ್ವಿಕತೆಯಲ್ಲಿ ಹೆಚ್ಚಿನ ಸಮಯವನ್ನು
ಕಳೆಯಿರಿ. ಇದು ನಿಮ್ಮನ್ನು
ಗುಣಾತೀತರನ್ನಾಗಿ ಮಾಡುತ್ತದೆ.

# ಪ್ರಗತಿಗೆ ಸಲಹೆಗಳು

1. ನೋಡಿ/ಅಧ್ಯಯನ ಮಾಡಿ ಕಲಿಯಿರಿ ಅಥವ ಅನುಭವಿಸಿ ಕಲಿಯಿರಿ – ಆಯ್ಕೆ ನಿಮ್ಮದು.
2. ಜೀವನವೊಂದು ಆಟ. ನಿಯಮಗಳ ಪ್ರಕಾರ ಅದನ್ನು ಆಡಿ. ಆನಂದಿಸಿ. ಸದಾ ಹೇಗೆ ಆಡಬೇಕೆಂದು / ಜಯವನ್ನು ಪಡೆಯಬೇಕೆಂದು, ಅದರಲ್ಲೇ ಮುಳುಗದಿರಿ. ಗೀತೆಯನ್ನು ಅನ್ವಯಿಸಿ.
3. ಅಕ್ಷರಬ್ರಹ್ಮನು ತನ್ನ ಆಟ ವಿನೋದಕ್ಕಾಗಿ ಸೃಷ್ಟಿಸಿದ ಈ ಭ್ರಮಾಲೋಕವನ್ನು / ಮಾಯಾಲೋಕವನ್ನು ಗೆಲ್ಲಲು ಇರುವ ಕೀಲಿಕೈ – ವೈರಾಗ್ಯ ಮತ್ತು ಅನಾಸಕ್ತಿ.
4. ನಿರಂತರ ಅಭ್ಯಾಸ ಮತ್ತು ವೈರಾಗ್ಯದ ಜೊತೆ ಅಕ್ಷರಬ್ರಹ್ಮನ ಮೇಲೆ ನಂಬಿಕೆ ಮತ್ತು ಆತನಲ್ಲಿ ಭಕ್ತಿ ಇಲ್ಲಿ ಮುಖ್ಯವಾಗುತ್ತದೆ. ಇದು ಹಂತ ಹಂತಗಳ, ಜನ್ಮಾಂತರಗಳ ಸಿದ್ಧಿ.
5. ಅಕ್ಷರಬ್ರಹ್ಮನನ್ನು ಹೊರತು ಪಡಿಸಿ ಎಲ್ಲವೂ ತಾತ್ಕಾಲಿಕ.
6. ನಿರಹಂಕಾರ – ನಾನು ಎನ್ನುವುದಿರಬಾರದು, ನಿರ್ಮಮ – ನನ್ನದು ಎನ್ನುವುದಿರಬಾರದು, ನಿರ್ವೈರ್ಯ – ದ್ವೇಷವಿರಬಾರದು, ಸಂಘವರ್ಜಿತ – ಮೋಹವಿರಬಾರದು. ನಿಮ್ಮನ್ನು ವಿಮೋಚನೆಯತ್ತ ಕೊಂಡೊಯ್ಯುತ್ತದೆ.
7. ಶಕ್ತಿಹೀನ / ಸಾಮರ್ಥ್ಯದ ಪೋಲು–ಭಯ, ಇಚ್ಛೆ, ಕೋಪ ; ಶಕ್ತಿವರ್ಧಕ – ಯೋಗ
8. ಜೀವನದ ಆಟವನ್ನು ಕ್ಷೇತ್ರದಲ್ಲಿ / ಪ್ರಕೃತಿಯಲ್ಲಿ ಆಡುತ್ತಿದ್ದೇವೆ. ಆಟವನ್ನು ಗೆಲ್ಲಲು ಈ ಕ್ಷೇತ್ರವನ್ನು ಉಪಯೋಗಿಸಿದರೆ, ಆತ್ಮಕ್ಕೆ ಮೋಕ್ಷ ಸಿಗುತ್ತದೆ. ಸಾವು ಶಾಂತಿಯುತ, ಜನ್ಮ ನೋವಿನಿಂದ ಕೂಡಿದೆ.
9. ಗೀತೆಯು, ಜೀವನವನ್ನು ಕಲಿಯುವುದಕ್ಕಾಗಿಯೇ ಹೊರತು ಸಂಸ್ಕೃತವನ್ನು ಕಲಿಯಲು ಅಲ್ಲ. ನಾವೆಲ್ಲರೂ ದೇಹದ ಮೂಲಕ ಬೇರೆಯಾದರೂ ಆತ್ಮದ ಮೂಲಕ ಒಂದಾಗಿದ್ದೇವೆ. ಅಕ್ಷರಬ್ರಹ್ಮನು ನನ್ನೊಳಗೆ ಇರುವನು. ನಾನು ಅಕ್ಷರಬ್ರಹ್ಮನಲ್ಲಿ ಇರುವೆನು.
10. ಮಾಯೆ – ಸ್ವಾರ್ಥ ಮತ್ತು ಸಾಪೇಕ್ಷ (ತುಲಾನಾತ್ಮಕ) ಇದು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತದೆ / ಬೇರೆಯಿರುತ್ತದೆ. ಅಕ್ಷರಬ್ರಹ್ಮ–ಸಂಪೂರ್ಣ –ಸಾರ್ವತ್ರಿಕ–ವಸುಧೈವ ಕುಟುಂಬಕಂ–ಎಲ್ಲರಲ್ಲೂ ಸಮಾನವಾಗಿ ಕುಳಿತಿರುವನು.
11. ನಾವು ಪ್ರಸ್ತುತ ಚತುರ್ಯುಗದ ಬಗ್ಗೆ ಅತ್ಯಂತ ಅಲ್ಪವನ್ನು ಮಾತ್ರ ತಿಳಿದುಕೊಂಡಿದ್ದೇವೆ.
12. ನೀನು ಯಾರು ? ನೀನು ಎಲ್ಲಿರುವೆ ? ನೀನು ಇನ್ನೊಂದು 50 ವರ್ಷ ಅಥವ ಇನ್ನೂ ಹೆಚ್ಚು ಕಾಲ ಬದುಕಿದರೆ ಏನು ಮಾಡುವೆ? ದೇವರೆಲ್ಲಿದ್ದಾನೆ?
13. ಗೀತೆಯು ಆಟವನ್ನು ಬದಲಾಯಿಸುತ್ತದೆ. ಈ ಪ್ರಪಂಚವನ್ನು ವಿಭಿನ್ನ ದೃಷ್ಟಿಯಿಂದ ನೀವು ನೋಡುವಿರಿ.
14. ಅನಾಸಕ್ತಿ / ವೈರಾಗ್ಯ = ಸಂಘವರ್ಜಿತ + ನಿರ್ವೈರ್ಯ

# ಜೀವನ ಮಾರ್ಗಗಳು



**ಇಂದೇ ನಿಮ್ಮ ಜೀವನದಲ್ಲಿ ತಿದ್ದುಪಡಿಯನ್ನು ತನ್ನಿ**


**ನಿಸ್ವಾರ್ಥವಾಗಿ ಹಣ್ಣುಗಳನ್ನು ಮತ್ತು ನೆರಳನ್ನು ಕೊಟ್ಟು, ಪರಿಸರವನ್ನು ಶುದ್ಧಗೊಳಿಸುವ ಮರದಂತೆ ಜೀವಿಸಿ.**

---

## ಮಾರ್ಗ 1

**ಸೃಷ್ಟಿಕರ್ತ ಬ್ರಹ್ಮನಿಗೂ ಅತೀತನಾಗಿರುವ ಅಕ್ಷರಬ್ರಹ್ಮನೆಡೆಗೆ ದಾರಿ**

ಗೀತೆಯನ್ನು ಅಳವಡಿಸಿಕೊಳ್ಳಿ





ಕರ್ಮಯೋಗ ಮತ್ತು ಸಂನ್ಯಾಸಯೋಗದ ಮೂಲಕ ಜನನ–ಮರಣ ಚಕ್ರದಲ್ಲಿ ವರ್ತಮಾನ / ಭವಿಷ್ಯದಲ್ಲಿ ನಮ್ಮ ಜನ್ಮಗಳ ಸಂಖ್ಯೆ ಕಡಿಮೆಯಾಗುವುದು

---

## ಮಾರ್ಗ 2

**ಸ್ವರ್ಗ / ನಕ್ಷತ್ರ / ಭೂಮಿ / ಪಾತಾಳ**

ಪ್ರಾಪಂಚಿಕ ಚಿಂತನೆ ಇದ್ದರೆ




ಪ್ರಸ್ತುತ ಜನ್ಮದಲ್ಲಿ ಲೌಕಿಕ ಯಶಸ್ಸು, ಜನನ–ಮರಣ ಚಕ್ರದಲ್ಲಿ ಜನ್ಮಗಳ ಸಂಖ್ಯೆ ಅಧಿಕವಾಗುವುದು

---


**ಮಾರ್ಗ 1 ಮತ್ತು ಮಾರ್ಗ 2 ರ ಜೊತೆಗೆ ಗೀತೆ ಮತ್ತು ಧ್ಯಾನವನ್ನು ಮಾಡಿದರೆ ಮೂರನೇ ಮಾರ್ಗ ದೊರೆಯುವುದು.**

**ಮಾರ್ಗ 3 = ಮಾರ್ಗ 1 + ಮಾರ್ಗ 2 – ಜನನ–ಮರಣ ಚಕ್ರದಲ್ಲಿ ಜನ್ಮಗಳ ಸಂಖ್ಯೆಯನ್ನು ಶೀಘ್ರವಾಗಿ ಕಡಿಮೆ ಮಾಡಿಕೊಳ್ಳಬಹುದು = ಅಕ್ಷರಬ್ರಹ್ಮ**

**(ಉದಾಹರಣೆ : ವೈದ್ಯನಾಗಿ ನಿಸ್ವಾರ್ಥ ಸೇವೆ ಸಲ್ಲಿಸುವುದರ ಮೂಲಕ ಮಾರ್ಗ1 ರಲ್ಲಿ ಸೂಚಿಸಿರುವುದಕ್ಕಿಂತಲೂ ಶೀಘ್ರವಾಗಿ ಅಕ್ಷರಬ್ರಹ್ಮನನ್ನು ತಲುಪಬಹುದು)**

## ಅಸ್ತಿತ್ವ (Existence)

**ಸಂಪೂರ್ಣ ನಿರ್ಗುಣ ಬ್ರಹ್ಮ / ಅಕ್ಷರಬ್ರಹ್ಮ / ಸಂಪೂರ್ಣ ಅಸ್ತಿತ್ವ – ಅಚಲ**





**ಅಸ್ತಿತ್ವದ ಹಂತಗಳು**

ಸಕಲವೂ ಅಕ್ಷರಬ್ರಹ್ಮನ ಮೂಲ; ಆತನಲ್ಲೇ ಬೇರೂರಿದೆ ಮತ್ತು ಆಸೀನವಾಗಿದೆ.
ಅಕ್ಷರಬ್ರಹ್ಮನು ವಿವಿಧ ಹಂತಗಳಲ್ಲಿ ವಿಭಿನ್ನವಾಗಿ ಪ್ರಜ್ವಲಿಸುತ್ತಾನೆ

ಅತೀ ಸೂಕ್ಷ್ಮವಾದ ಮಾಯಾವೃತಗೊಂಡಿರುವ ಜೀವಿಗಳಿಂದ ಹಿಡಿದು ಹಿರಿದಾದ ಸೂಕ್ಷ್ಮಾಣುಗಳಾದ ದೈವಿಕ ಜೀವಿಗಳವರೆಗೂ, ಅತ್ಯಂತ ಹಿರಿದಾದ ವಿಲೀನಗೊಂಡ ಸೂಕ್ಷ್ಮಾಣುವಿನವರೆಗೂ, ಸಂಪೂರ್ಣ ಸಮಷ್ಟಿ ಅಥವ ಅಕ್ಷರಬ್ರಹ್ಮನವರೆಗೂ.

# ಸ್ವಯಂ ಪರಿಶೀಲನೆ

28




**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿ.**

**ಸಂನ್ಯಾಸ ಅಥವ ಅಹಂಕಾರ ಅಥವ ಕರ್ತೃತ್ವದ ಪರಿಶೀಲನೆ ಅಕ್ಷರಬ್ರಹ್ಮನನ್ನು ಪ್ರವೇಶಿಸಲು ಉಪಯೋಗವಾಗುತ್ತದೆ.**

1. ಸಂಗತಿಗಳು ನಡೆಯುತ್ತಿರುವ ರೀತಿಯಲ್ಲಿ ಏಕೆ ನಡೆಯುತ್ತಿದೆ ?
2. ನಿಮ್ಮದು ಏನು ? ನೀವು ಯಾರು ?
3. ನಿಮ್ಮ ಜೀವನದಲ್ಲಿ ನಿಮ್ಮ ಅಭಿವೃದ್ಧಿಗೆ ಅಥವ ಪ್ರಗತಿಗೆ / ಹಿನ್ನಡೆಗೆ ನಿಮ್ಮ ಕೊಡುಗೆ ಏನು ?

**ಕರ್ಮದ ಪರಿಶೀಲನೆ – ಅಕ್ಷರಬ್ರಹ್ಮನಲ್ಲಿ ಪ್ರವೇಶಿಸಿ.**

1. ನಿಮಗೋಸ್ಕರ ಅಥವ ನಿಮ್ಮ ಕುಟುಂಬಕ್ಕೋಸ್ಕರ ನಿಮ್ಮ ಜೀವನದ ಸಮಯವನ್ನು ಎಷ್ಟು ವಿನಿಯೋಗಿಸಿರುವಿರಿ?
2. ನಿಮ್ಮ ಅವಶ್ಯಕತೆಗಳನ್ನು ಮೀರಿ ಈ ಸೃಷ್ಟಿಯಿಂದ ನೀವು ಎಷ್ಟನ್ನು ತೆಗೆದುಕೊಂಡಿರುವಿರಿ ?
3. ಈ ಸೃಷ್ಟಿಗೆ ಎಷ್ಟನ್ನು ನೀವು ಹಿಂದಿರುಗಿಸಿರುವಿರಿ ?

**ಧ್ಯಾನದ ಪರಿಶೀಲನೆ – ಅಕ್ಷರಬ್ರಹ್ಮನನ್ನು ಅನುಭವಿಸಿ.**

1. ನೀವು ಅನಾರೋಗ್ಯದಲ್ಲಿದ್ದಾಗ ನೀವು ಏನನ್ನು ಯೋಚಿಸುವಿರಿ ?
2. ನಿಮಗೆ ಯಾರ / ಯಾವುದರ ಭಯ ? ಯಾವುದು ನಿಮಗೆ ಕೋಪವನ್ನುಂಟುಮಾಡುತ್ತದೆ ? ನೀವು ಏನನ್ನು ಇಷ್ಟ ಪಡುವಿರಿ? ಮತ್ತು ಏನನ್ನು ಇಷ್ಟ ಪಡುವುದಿಲ್ಲ ?
3. ನಿಮ್ಮ ಮನಸ್ಸು ಮತ್ತು ಬುದ್ಧಿಯಲ್ಲಿ ಹೆಚ್ಚು ಸಮಯ ಇರುವುದೇನು ?

**ಗೀತೆ ಅಥವ ವೇದ ಜ್ಞಾನದ ಪರಿಶೀಲನೆ – ಅಕ್ಷರಬ್ರಹ್ಮನನ್ನು ತಿಳಿಯಿರಿ.**

ಈ ಕೆಳಗಿನ ಜನರಿಗೆ 1 ರಿಂದ 7ನೇ ಸ್ಥಾನವನ್ನು ನೀಡಿ.

- ವ್ಯಕ್ತಿ 1 – ಕಷ್ಟಕರವಾದ ಪರ್ವತಗಳನ್ನು ಏರಿ ದೇವಾಲಯಕ್ಕೆ ಭೇಟಿ ನೀಡುವವನು.
- ವ್ಯಕ್ತಿ 2 – ಪ್ರತಿನಿತ್ಯವು ಬಹಳ ಸಮಯ ಗೀತೆಯ ಅಭ್ಯಾಸ ಮತ್ತು ಧ್ಯಾನವನ್ನು ಮಾಡುವವನು.
- ವ್ಯಕ್ತಿ 3 – ಒಂದು ಸಂಸ್ಥೆಯನ್ನು ಸ್ಥಾಪಿಸಿ, ಬಹಳಷ್ಟು ಮಂದಿಗೆ ಉದ್ಯೋಗವಕಾಶವನ್ನು ಒದಗಿಸುವವನು.
- ವ್ಯಕ್ತಿ 4 – ಸಂಸ್ಥೆಗೆ ನಿಷ್ಠೆಯಿಂದ ಕೆಲಸ ಮಾಡಿ, ಅದನ್ನು ಮುನ್ನಡೆಸುವವನು.
- ವ್ಯಕ್ತಿ 5 – ಸೈನ್ಯದಲ್ಲಿ ಕೆಲಸ ಮಾಡಿ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡುವವನು.
- ವ್ಯಕ್ತಿ 6 – ರಾಜಕಾರಣಿಯಾಗಿ ದೇಶದ ಅಭಿವೃದ್ಧಿಗಾಗಿ ಕೆಲಸ ಮಾಡುವವನು.
- ವ್ಯಕ್ತಿ 7 – ಸೃಷ್ಟಿಯ ಹಿತದೃಷ್ಟಿಯಿಂದ ಜೀವನ ನಡೆಸುವವನು.


# ಜನನದ ಚಕ್ರಗಳು

ಹಿಂದಿನ ಅನೇಕ ಅನೇಕ ಜನ್ಮಗಳ ನಿಮ್ಮ ಕರ್ಮವನ್ನು ಆಧರಿಸಿ ನೀವು ಈ ಜನ್ಮವನ್ನು ಪಡೆದಿರುವಿರಿ.
ನಾವು ಈ ಬಹು ಕರ್ಮಚಕ್ರಗಳನ್ನು ಬಹಳ ಸಮಯದಿಂದ ಅನುಭವಿಸುತ್ತಾ ಬಂದಿದ್ದೇವೆ. ಅದೇ ರೀತಿ ಈ ಜನ್ಮದಲ್ಲೂ ಸಹ ನಡೆಯಬಯಸುವಿರಾ ? ಅಥವ ಶಾಶ್ವತವಾದ ಆನಂದದೆಡೆಗೆ ಸ್ವಲ್ಪ ಪ್ರಗತಿಯನ್ನು ಸಾಧಿಸುವಿರಾ ?

ಹಿಂದಿನ ಕರ್ಮ → ಪ್ರಸ್ತುತ ಜೀವನ ಕರ್ಮವನ್ನು ಕಡಿಮೆಗೊಳಿಸಿ → ಕರ್ಮ ಚಕ್ರಗಳನ್ನು ಕಡಿಮೆಗೊಳಿಸುವ ಮುಖಾಂತರ ಅಕ್ಷರಬ್ರಹ್ಮನನ್ನು ಸೇರಿರಿ.

1. ಆಧ್ಯಾತ್ಮಿಕ ಶಿಸ್ತು – ಯಜ್ಞ, ದಾನ, ತಪಸ್ಸು – ಕರ್ತೃತ್ವವಿಲ್ಲದೆ
2. ಗೀತೆ / ವೇದಗಳ ಮೇಲೆ ನಂಬಿಕೆ
3. ದೇವರಲ್ಲಿ / ಅಕ್ಷರಬ್ರಹ್ಮನಲ್ಲಿ ಪ್ರೀತಿ
4. ಬಂಧನ ಮತ್ತು ದ್ವೇಷಗಳಿಲ್ಲದೆ ಇರುವುದು
5. ಇಚ್ಛೆ, ಭಯ, ಕ್ರೋಧಗಳಿಲ್ಲದೆ – ಅಕ್ಷರಬ್ರಹ್ಮನೊಡನೆ ಯುಕ್ತ
6. ನಿಮ್ಮ ಹಿಂದಿನ ಸಾಧನೆಯ ದಾಖಲೆಗಳ ಆಧಾರದ ಮೇಲೆ, ನೀವು ಅಕ್ಷರಬ್ರಹ್ಮನ ಒಂದು ಅಂಶರಾಗಿರುವಿರಿ ಎಂಬುದನ್ನು ಅರಿತುಕೊಳ್ಳಿ.

ನೀವು ಹಿಂದಿನ ಕರ್ಮ ಅಥವ ಕಾರ್ಯಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಒಳ್ಳೆಯದನ್ನು ಹಂಚಿಕೊಳ್ಳುವುದರ ಮೂಲಕ, ಬಡಜನರಿಗೆ ಸಹಾಯ ಮಾಡುವ ಮೂಲಕ ಮತ್ತು ಕಷ್ಟಗಳನ್ನು ಅನುಭವಿಸುವ ಮೂಲಕ ಕರ್ಮವನ್ನು ಕಡಿಮೆ ಮಾಡಿಕೊಳ್ಳಲು ಪ್ರಸ್ತುತ ಜನ್ಮದಲ್ಲಿ ಪ್ರಯತ್ನಿಸಿ.



# ಗೀತೆಯ ಪ್ರಕಾರ ಧ್ಯಾನ / 1

**ಪ್ರಕೃತಿಯ ಮೂಲಭೂತ ಕಾರ್ಯವೆಂದರೆ ಕಾರ್ಯನಿರ್ವಹಿಸುವುದು. ಆತ್ಮದ ಮೂಲಭೂತ ಕಾರ್ಯ ಪ್ರಕೃತಿಯ ಕ್ರಿಯೆಯನ್ನು ಅನುಭವಿಸುವುದು ಪ್ರಗತಿಗಾಗಿ ಮತ್ತು ಆನಂದಕ್ಕಾಗಿ ಅಕ್ಷರಬ್ರಹ್ಮನೊಂದಿಗೆ ಯುಕ್ತರಾಗಿ ದೇವರ ಧರ್ಮವನ್ನು ಆಚರಿಸಿ.**

1. ಧ್ಯಾನದ ಗುರಿ = ಅಕ್ಷರ ಬ್ರಹ್ಮ / ಸಂಪೂರ್ಣ ಬೆಳಕು / ಸಂಪೂರ್ಣ ಅಸ್ತಿತ್ವ
2. ಉದ್ದೇಶ = ಯುಕ್ತ = ಸಾಮರಸ್ಯ, ಏಕತೆ ಮತ್ತು ಅಕ್ಷರಬ್ರಹ್ಮನಲ್ಲಿ ಐಕ್ಯವಾಗುವುದು.
3. ಆತ್ಮವು ಕಾರ್ಯನಿರ್ವಹಿಸುವುದಿಲ್ಲ. ಆಂತರಿಕ ಪ್ರಕೃತಿಯು, ಬಹಿರಂಗ ಪ್ರಕೃತಿಯೊಂದಿಗೆ ಸಂವಹಿಸುವುದು. ಅಕ್ಷರಬ್ರಹ್ಮನು ನನ್ನಲ್ಲಿ ಇರುವನು – ನಾನು ಅಕ್ಷರಬ್ರಹ್ಮನಲ್ಲಿರುವೆ. ನಾವು ಸಂಪೂರ್ಣವಾಗಿ ಅಕ್ಷರಬ್ರಹ್ಮನಲ್ಲಿ ಲೀನರಾದಾಗ ಎಲ್ಲವೂ ನಮ್ಮಲ್ಲಿದೆ – ಅಂತಿಮ ಸ್ಥಿತಿ
4. ಸೀಮಿತದಿಂದ ಅನಂತಕ್ಕೆ ವಿಸ್ತರಿಸಿ / ಮಿತಿಯಿಂದ ಅಪರಿಮಿತಕ್ಕೆ, ಅನೇಕತೆಯಿಂದ ಏಕತೆಗೆ, ವ್ಯಕ್ತಿಗತದಿಂದ ಸಾರ್ವತ್ರಿಕತೆಗೆ, ದೈಹಿಕ ಪ್ರಜ್ಞೆಯಿಂದ ಸಂಪೂರ್ಣ ಪ್ರಜ್ಞೆಗೆ ವಿಸ್ತರಿಸಿ.  ನಾನು ದೇಹವಲ್ಲ, ಆತ್ಮವೆಂದು ಅನುಭವಿಸಿ. ನಾಲ್ಕು ಗೋಡೆಯ ಮಧ್ಯದಿಂದ ಸಂಪೂರ್ಣ ಜೀವನಕ್ಕೆ ಬನ್ನಿ.
   4 ದಳ ಪದ್ಮ ಅಥವ ಮೂಲಾಧಾರ ಚಕ್ರದಿಂದ ಸಹಸ್ರಾರು ದಳ ಪದ್ಮ ಅಥವ ಸಹಸ್ರಾರ ಚಕ್ರದೆಡೆಗೆ ಚಲಿಸಿ.
   ಯೋಗಿಯಾಗಿ, ಸ್ಥಿತಪ್ರಜ್ಞನಾಗಿ, ಜೀವನ್ಮುಕ್ತನಾಗಿ, ಗುಣಾತೀತನಾಗಿ, ಭಕ್ತನಾಗಿ, ಭಕ್ತವತ್ಸಲರಾಗಿ ಮೋಕ್ಷವನ್ನು ಪಡೆಯಿರಿ.
5. ಪ್ರತಿನಿತ್ಯವು ಎರಡು ಬಾರಿ ಕನಿಷ್ಠ 30 ನಿಮಿಷ ಆಹಾರ ಸೇವಿಸುವುದಕ್ಕೆ ಮುನ್ನ ಧ್ಯಾನವನ್ನು ಅಭ್ಯಾಸ ಮಾಡಿ.
6. ಅಕ್ಷರಬ್ರಹ್ಮನನ್ನು ಇಷ್ಟದೇವತೆಯಲ್ಲಿ ಯುಕ್ತಗೊಳಿಸಿ ಶಾಶ್ವತವಾದ ಅನಂದವನ್ನು ಸಂತೋಷದಿಂದ ಅನುಭವಿಸಿ. ನೀವು ಇಂದ್ರಿಯಗಳಿಗೆ ಅತೀತವಾದ ಅನುಭವವನ್ನು ಪಡೆಯುವಿರಿ.
7. ಅಕ್ಷರಬ್ರಹ್ಮನನ್ನು ನಿಮ್ಮ ಜೀವಾತ್ಮದಲ್ಲಿ ಚಿತ್ತದಿಂದ ನೋಡಿ ಅಥವ ಅಕ್ಷರಬ್ರಹ್ಮನನ್ನು ನಿಮ್ಮ ಚಿತ್ತದಿಂದ ಹೃದಯದಲ್ಲಿ ನೋಡಿ.
8. ಅಂತಿಮ ಸ್ಥಿತಿ – ಅನಂತವಾದ ಸಂಪೂರ್ಣ ಬೆಳಕಿನಲ್ಲಿ ನಿಮ್ಮೊಳಗಿನ ಬೆಳಕನ್ನು ಅನುಭವಿಸಿ.

# ಗೀತೆಯ ಪ್ರಕಾರ ಧ್ಯಾನ / 2

ಧ್ಯಾನ ಮಾಡುವ ವಿಧಾನ : ಪ್ರಜ್ಞೆಯು ವಿಸ್ತಾರವಾಗಿ ನಮ್ಮ ಹೃದಯದೊಳಗಿರುವ ಆತ್ಮದ ಮೂಲಕ ಅಕ್ಷರಬ್ರಹ್ಮ / ದೇವರನ್ನು ನಮ್ಮ ಮೆದುಳು ಅನುಭವಿಸುತ್ತದೆ. ಧ್ಯಾನದಲ್ಲಿ ಪ್ರಗತಿಯನ್ನು ಸಾಧಿಸಲು, ಅರ್ಹ ಬಡಜನರಿಗೆ ಸಹಾಯ ಮಾಡುತ್ತಾ ನಿಮ್ಮ ಅಹಂಕಾರವನ್ನು ಕಡಿಮೆಯಾಗಿಸಲು ಪ್ರಯತ್ನಿಸಿ.

1. ಹಂತಗಳು / ಸ್ಥಿತಿ 1 – ದೇವರು ನನ್ನಲ್ಲಿ ಆತ್ಮರೂಪದಲ್ಲಿರುವನು – ಸಾರೂಪ್ಯ. ನಿಮ್ಮ ದೇಹ, ಮನಸ್ಸು, ಬುದ್ಧಿ ಮತ್ತು ಅಹಂಕಾರವನ್ನು ನಿಮ್ಮ ಅಂತರಂಗ ದೇವರು ಅಥವ ಮಾಯೆಯಿಂದ ಆವೃತಗೊಂಡ ಆತ್ಮ ಅಥವ ಜೀವಾತ್ಮನ ಜೊತೆ ಯುಕ್ತಗೊಳಿಸಿ.
   (ಅ.) ಗೀತೆಯನ್ನು ಓದಿ, ಯೋಗಾಸನ, ವ್ಯಾಯಾಮ ಮತ್ತು ಪ್ರಾಣಾಯಾಮ ಮಾಡಿ. (ಆ.) ಅನುಕೂಲಕರವಾಗಿ, ನೇರವಾಗಿ ಕುಳಿತು, ಕಣ್ಣನ್ನು ಮುಚ್ಚಿ, ಎರಡು ಕಣ್ಣುಗಳ ಭ್ರೂ ಮಧ್ಯೆಯಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ. ಹೃದಯದೊಳಗೆ ಪೂರ್ಣವಾಗಿ ಅರಳಿರುವ ಕಮಲ, ಸೂರ್ಯ, ಚಂದ್ರ, ಜ್ಯೋತಿಯ ಬೆಳಕುಗಳು ಒಂದರ ಒಳಗೆ ಒಂದು ನಿಮ್ಮ ಇಷ್ಟದೇವತೆಯ ಸುತ್ತ ಇರುವಂತೆ ಕಲ್ಪಿಸಿಕೊಳ್ಳಿ.
   (ಇ.) ಇಂದ್ರಿಯಾತೀತರಾಗಲು ನಿಮ್ಮ ಮನಸ್ಸಿನಲ್ಲಿ ಈ ಕೆಳಗೆ ಕೊಟ್ಟಿರುವ ನಾಮವನ್ನು ಜಪಿಸುತ್ತಾ ಹೃದಯದಲ್ಲಿರುವ ಆತ್ಮದೊಂದಿಗೆ ಏಕತೆಯನ್ನು ಅನುಭವಿಸಿ.
   **" ಅಹಂ ಜೀವಾತ್ಮನ್, ಜೀವಾತ್ಮನ್ ಹೃದಯೇ ತಿಷ್ಠತಿ, ಅಹಂ ಜೀವಾತ್ಮನ್ ಅಕ್ಷರಬ್ರಹ್ಮನ್ "**
2. ಹಂತಗಳು / ಸ್ಥಿತಿ 2 – ದೇವರು ಎಲ್ಲರಲ್ಲಿಯೂ ಇರುವನು. – ಸಾಲೋಕ್ಯ ಹೊರಗಡೆ ಇತರರಲ್ಲಿ ಸ್ಥಿತವಾಗಿರುವ ಆತ್ಮದೊಂದಿಗೆ ನಮ್ಮ ಅಂತರಂಗದಲ್ಲಿರುವ ಆತ್ಮ/ದೇವರೊಂದಿಗೆ ಯುಕ್ತರಾಗಿಸಿ ಸ್ಥಿತಿ 1ರಲ್ಲಿ ಇರುವಂತೆಯೇ ಮುಂದುವರೆಸಿ ನಂತರ ನಿಮ್ಮ ಮನಸ್ಸಿನಲ್ಲಿ **"ಅಕ್ಷರಬ್ರಹ್ಮನ್ ಸರ್ವಭೂತೇಷು ತಿಷ್ಠತಿ"** ಎಂದು ಜಪಿಸಿ.
3. ಹಂತಗಳು / ಸ್ಥಿತಿ 3 – ದೇವರು ಒಳಗೆ ಮತ್ತು ಹೊರಗೆ ಎಲ್ಲದರಲ್ಲಿಯೂ ಮತ್ತು ಎಲ್ಲೆಲ್ಲಿಯೂ ಇರುವನು – ಸಾಮಿಪ್ಯ ಸೃಜನಶೀಲ ಆತ್ಮ ಆಥವ ನಿಮ್ಮ ಹತ್ತಿರ ಮತ್ತು ದೂರವಿರುವ ಬಹಿರಂಗ ದೇವರೊಂದಿಗೆ, ನಿಮ್ಮ ಅಂತರಂಗ ದೇವರ ಅಥವ ಆತ್ಮವನ್ನು ಯುಕ್ತಗೊಳಿಸಿ. ಸ್ಥಿತಿ 1 ಮತ್ತು ಸ್ಥಿತಿ 2ರಲ್ಲಿ ತಿಳಿಸಿರುವಂತೆ ಹೇಳಿ – **"ಅಕ್ಷರಬ್ರಹ್ಮನ್ ಸರ್ವತ್ರ ಬಾಹ್ಯ ಅಂತರ ಸಮಃ ಸ್ಥಿತಂ"** ಎಂದು ಪಠಿಸಿ.
4. ಹಂತಗಳು / ಸ್ಥಿತಿ 4 – ನಾನು ಮತ್ತು ನನ್ನದು ಎಂಬುದು ಇಲ್ಲ. ಪ್ರತಿಯೊಂದು ದೇವರ ಕಿಡಿ / ಹೊಳಪು ಮತ್ತು ದೇವರಲ್ಲೇ ಇದೆ – ಕೈವಲ್ಯಂ ಬಹಿರಂಗ ದೇವರ / ಮುಕ್ತ ಆತ್ಮಗಳೊಂದಿಗೆ ನಿಮ್ಮ ಆತ್ಮವನ್ನು ಯುಕ್ತಗೊಳಿಸಿ. ಸ್ಥಿತಿ 1, 2,3 ರಲ್ಲಿ ಹೇಳಿದಂತೆ ಅನುಕರಿಸಿ, **"ಜಗನ್ನಿವಾಸಯಸ್ಯ ಅಂತಸ್ಥಾನಿ ಭೂತಾನಿ, ಯೇನ ಸರ್ವಂ ಇದಂ ತಥಂ"** ಎಂದು ಜಪಿಸಿ.
5. ಸ್ಥಿತಿ 5 ಮತ್ತು ಅಂತಿಮ – ನಾನು ದೇವರಲ್ಲಿದ್ದೇನೆ. ಆದ್ದರಿಂದ ಎಲ್ಲವೂ ನನ್ನಲ್ಲೇ ಇದೆ. ಸಾಯುಜ್ಯಂ / ಮೋಕ್ಷಂ. ಬಹಿರಂಗ ದೇವರು–ಅಂತಃಪ್ರಜ್ಞೆಯುಳ್ಳ ಆತ್ಮ ಐಕ್ಯವಾದ ಆತ್ಮ ಮತ್ತು ಪರಮಾತ್ಮ ಆತ್ಮದೊಂದಿಗೆ ನಿಮ್ಮ ಆತ್ಮವನ್ನು ಯುಕ್ತಗೊಳಿಸಿ. ಹಂತ 1, 2, 3, 4 ರಲ್ಲಿ ಹೇಳಿದಂತೆ ಅನುಕರಿಸಿ **'ಓಂ ಸೋಹಂ, ಅಕ್ಷರಬ್ರಹ್ಮನ್ ಪರಮಂ ಯುಕ್ತಂ ಅಕ್ಷರಬ್ರಹ್ಮನ್, ತ್ವಂ ತತ್ ಅಸಿ. ಅಹಂ ಅಕ್ಷರಬ್ರಹ್ಮನ್ ಅಸ್ಮಿ ಮತ್ತು ಪ್ರಜ್ಞಾನಂ ಅಕ್ಷರಬ್ರಹ್ಮನ್"** ಎಂದು ಜಪಿಸಿ.

**ಹಂತ ಹಂತವಾಗಿ ಯುಕ್ತರಾಗಿ – ಪ್ರಕೃತಿಯೊಂದಿಗೆ ಅಂತರಂಗ ದೇವರು ಮತ್ತು ಅಂತರಂಗ ದೇವರೊಂದಿಗೆ ಬಹಿರಂಗ ದೇವರು, ಬಹಿರಂಗದೇವರ ಜೊತೆ ಅಕ್ಷರಬ್ರಹ್ಮ.**

← ಗೀತೆ ಮತ್ತು ಧ್ಯಾನವು ಇಳಿಜಾರಿನ ಬಂಡಿಯಲ್ಲಿ, ಏರಿಳಿತಗಳ ಆಧ್ಯಾತ್ಮಿಕತೆಯ ಸವಾರಿ →

| ಗೀತೆಯು ಬಿಲ್ಲು | ಅಕ್ಷರಬ್ರಹ್ಮ ನಿಮ್ಮಲ್ಲಿ | ಅಕ್ಷರಬ್ರಹ್ಮ ನಿಮ್ಮಲ್ಲಿ | ಅಕ್ಷರಬ್ರಹ್ಮ ಇತರರಲ್ಲಿ | ಅಕ್ಷರಬ್ರಹ್ಮ ಒಳಗೆ ಮತ್ತು ಹೊರಗೆ | ಅಕ್ಷರಬ್ರಹ್ಮನಲ್ಲಿ ಬ್ರಹ್ಮಾಂಡ | ಆತ್ಮ ಬೇರ್ಪಡುವಿಕೆ | ಅಕ್ಷರಬ್ರಹ್ಮನಲ್ಲಿ ಆತ್ಮ ಲೀನವಾಗುವುದು AB | ಲಕ್ಷ್ಯ ಅಥವ ಗುರಿ |
|---|---|---|---|---|---|---|---|---|
| ಆತ್ಮವು ಬಾಣ ⇒ | ಸಾರೂಪ್ಯ ಕಲ್ಪನೆ | ಸಾರೂಪ್ಯ ಅನುಭವ | ಸಾಲೋಕ್ಯ | ಸಾಮಿಪ್ಯ | ಗುಣಾತೀತ | ಕೈವಲ್ಯ | ಸಾಯುಜ್ಯ | ಮೋಕ್ಷಂ ಅಕ್ಷರಬ್ರಹ್ಮನನ್ನು ಅಥವ ದೇವರನ್ನು ಸೇರುವುದು |
| ಧ್ಯಾನವು ಬಿಲ್ಲು | ಆರಂಭಿಸಿ | ಸ್ಥಿತಿ 1 | ಸ್ಥಿತಿ 2 | ಸ್ಥಿತಿ 3 | ಸ್ಥಿತಿ 4 | ಸ್ಥಿತಿ 4 | ಸ್ಥಿತಿ 5 | ಕೊನೆಯ ಸ್ಥಿತಿ ಅಂತಿಮ ಲೀನ |
| ಮಂತ್ರವು ಬಿಲ್ಲು | 4 ದಳಗಳ ಕಮಲ | ನಿಮ್ಮ ಪ್ರಜ್ಞೆಯ ವಿಸ್ತರಣೆ ⇒ ದೈಹಿಕದಿಂದ ಸಂಪೂರ್ಣತೆಯೆಡೆಗೆ | | | | | | ಸಹಸ್ರಾರ / ಅನಂತ ದಳಗಳುಳ್ಳ ಕಮಲ |




ಗೀತೆಯ ಪ್ರಕಾರ ಧ್ಯಾನದ ಯಂತ್ರ

# ಗೀತಾ ಪಾಲನೆಯ ದೃಶ್ಯಗಳು








"Holistic Life Vision" Book Release
at Shankari Balaga

"Holistic Life Orientation" Book Release





At Janaseva Foundation



Teaching Bhagavadgita in Jyothi Prasanna Orphanage



With Disciples and Students



On the occasion of Guru Deeksha

# ಶ್ರೀಮದ್ಭಗವದ್ಗೀತಾ – ಸರಳ ಪರಿಚಯ

## ವಿಷಯಗಳು


* ಗೀತಾ ಪರಿಚಯ
* ಗೀತಾ ಸಂದೇಶ
* ಗೀತೆಯ ಚರಿತ್ರೆ
* ವರ್ಣಗಳು
* ಆಶ್ರಮಗಳು
* ವೇದವ್ಯಾಸರು
* ಗುರುದೀಕ್ಷಾ – ಪಾಲಿಸುವ ವಿಧಾನ
  – ಗುರು ಮಂತ್ರ
  – ಗಾಯತ್ರಿ ಮಂತ್ರ
  – ವೇದ ಮಂತ್ರ
  – ಗೀತಾ ಮಹಾತ್ಮೆ
  – ಗೀತಾ ನ್ಯಾಸ
  – ಗೀತಾ ಧ್ಯಾನ
  – ಗೀತಾ ಪಾರಾಯಣ
  – ಕಡ್ಡಾಯ ಶ್ಲೋಕ
  – ಪ್ರಾಣಾಯಾಮ
  – ಧ್ಯಾನ
  – ಶ್ರೀಮದ್ಭಗವದರ್ಪಣೆ
  – ಓಂ ಶಾಂತಿಃ ಸ್ವಸ್ತಿಃ
  – ಗೀತಾ ಜ್ಞಾನದ ಪ್ರಾಯೋಗಿಕತೆ
* ಗೀತೆಯ ಭೂಮಿಕೆ
* ಗೀತೆಯ ಅಧ್ಯಾಯಗಳ ಸಾರಾಂಶ
* ಗೀತಾ ಆರತಿ
* ಶಾಂತಿ ಮಂತ್ರಗಳು
* ಗುರುಗಳ ಶುಭ ಹಾರೈಕೆಗಳು
* ಗುರುಗಳು ಮತ್ತು ಧನ್ಯವಾದಗಳು
* ವಿದ್ಯಾರ್ಥಿಗಳ ಭಾವಾಭಿವ್ಯಕ್ತಿ ಮತ್ತು ಉಪಕೃತರ ಪ್ರತಿಕ್ರಿಯೆಗಳು
* ಕೃತಜ್ಞತೆಗಳು ಮತ್ತು ಪ್ರಾಯೋಜಕರು
* ಆಕರಗಳು (References)



## || ಓಂ ಶ್ರೀ ಕೃಷ್ಣ ಪರಬ್ರಹ್ಮಣೇ ನಮಃ ||

## ಶ್ರೀಮದ್ಭಗವದ್ಗೀತೆ

### ಪರಿಚಯ

ಭಗವದ್ಗೀತೆಯು, ಅಕ್ಷರಬ್ರಹ್ಮನ ಸಗುಣ ರೂಪವಾದ ಶ್ರೀ ಕೃಷ್ಣನ ಅಧರಗಳಿಂದ ಬಂದ ಅಮೃತ. ಈ ಗೀತೆಯು ಬ್ರಹ್ಮ ವಿದ್ಯೆ, ಯೋಗಶಾಸ್ತ್ರ, ವೇದ ಮತ್ತು ಉಪನಿಷತ್ತುಗಳ ಸಾರ. ಇದು ನಿಜವಾದ ವಿವೇಕ ಜ್ಞಾನ. ವೇದಗಳಲ್ಲಿ, ಮಾನವರ ಕಲ್ಯಾಣಕ್ಕಾಗಿ ಹೇಳಲ್ಪಟ್ಟ ಜೀವನ ತತ್ತ್ವಗಳನ್ನು ಮತ್ತು ಮೌಲ್ಯಗಳನ್ನು ಸಂಕ್ಷಿಪ್ತವಾಗಿ ಹೇಳಿ ಶ್ರೀ ಕೃಷ್ಣನು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿರುವನು.

ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ಅಕ್ಷರಬ್ರಹ್ಮನನ್ನು, ಆತನ ಸೃಷ್ಟಿ ರಚನಾ ಕಾರ್ಯವನ್ನು, ನಾವು ಜೀವನದಲ್ಲಿ ಪಾಲಿಸಬೇಕಾದ ಕರ್ಮ–ಸಿದ್ಧಾಂತವನ್ನು ಅರ್ಥ ಮಾಡಿಕೊಂಡರೆ – ಈ ದೇಹವನ್ನು ಪಡೆದು, ಮಾನವ ಜನ್ಮ ಪಡೆದುದರ ಸಾರ್ಥಕತೆ.

ಇದು ವೃದ್ಧಾಪ್ಯದಲ್ಲಿ ಓದುವ ಗೀತೆಯಲ್ಲ – ಇದು ಜೀವನ ನಡೆಸಬೇಕಾದ ವಿಧಾನ. ಇದು ಜೀವನದಲ್ಲಿ ವೈರಾಗ್ಯವನ್ನು ಮೂಡಿಸುವ ಗೀತೆಯಲ್ಲ – ಜೀವನದ ಪ್ರತಿಯೊಂದು ಕ್ಷಣದಲ್ಲಿ ನಾವು ಮಾಡುವ ಕಾರ್ಯಗಳಿಗೆ(ಕರ್ಮಗಳಿಗೆ) ಜ್ಞಾನದ ಅನುಸಂಧಾನ ಮಾಡುವ ಬಗೆಯನ್ನು ತಿಳಿಸಿಕೊಡುವ ಜ್ಞಾನ ಭಂಡಾರ.

ಅಕ್ಷರಬ್ರಹ್ಮನ ಒಂದಂಶದ ಮೂಲದಿಂದ ಬಂದಿರುವ ಈ ಜೀವಾತ್ಮವು, ಆ ಪರಮಾತ್ಮನನ್ನು ತಲುಪಲು ಇರುವ ಮಾರ್ಗವನ್ನು ಭಗವದ್ಗೀತೆಯಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದು. ಈ ಮಾಯಾಲೋಕದೊಂದಿಗೆ ಯಾವ ರೀತಿ ವೈರಾಗ್ಯವನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು ಗೀತೆಯು ತಿಳಿಸುತ್ತದೆ. ಹಾಗೆಯೇ  ವೈರಾಗ್ಯವಿದ್ದರೂ ಸಹ ನಾವು ಹೇಗೆ ಅದನ್ನು ಆನಂದಿಸಬಹುದು ಎಂಬುದನ್ನು ಸಹ ತಿಳಿಸುತ್ತದೆ.

ಕರ್ಮಯೋಗ ಮತ್ತು ಸಂನ್ಯಾಸಯೋಗವನ್ನು ಪಾಲಿಸಿ, ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಪ್ರಾಣ ಮತ್ತು ಪ್ರಜ್ಞೆಯನ್ನು ಧ್ಯಾನದ ಮೂಲಕ ಅಕ್ಷರಬ್ರಹ್ಮನಲ್ಲಿ ಯುಕ್ತಗೊಳಿಸಿ, ಆ ಪರಮಾತ್ಮನಲ್ಲಿ ಒಂದಾಗುವ ಪ್ರಕ್ರಿಯೆಯ ಜ್ಞಾನವನ್ನು ನೀಡುವ ಈ ಭಗವದ್ಗೀತೆಯು ನಮ್ಮ ಬದುಕಿನ ದಿಕ್ಸೂಚಿ.

**'ವಸುಧೈವ ಕುಟುಂಬಕಂ'** ಎಂಬ ಪ್ರತಿಪಾದನೆಯನ್ನು ಪಾಲಿಸಿದಾಗ, ನಾವು ಅರಿಷಡ್ವರ್ಗಗಳನ್ನು ಗೆಲ್ಲುತ್ತೇವೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳನ್ನು ಗೆಲ್ಲುವ ಏಕೈಕ ಮಾರ್ಗ – ಈ ಪಂಚಭೂತಗಳಲ್ಲಿ ನೆಲೆಸಿರುವ ಜೀವಿಗಳೊಂದಿಗೆ ಸಹಬಾಳ್ವೆಯಿಂದ ಜೀವಿಸಿ, ಪೃಥ್ವಿಯಲ್ಲಿ ನಮ್ಮೊಂದಿಗಿರುವ ಅರ್ಹ ಬಡ ಜನರ ಸಂಕಷ್ಟಗಳಿಗೆ ಸ್ಪಂದಿಸುವುದು.

ಯಜ್ಞ, ದಾನ ಮತ್ತು ತಪಸ್ಸಿನ ಮೂಲಕ ತ್ರಿಗುಣಾತ್ಮಕಗಳಿಂದ ಕೂಡಿದ ಈ ಮಾಯಾಲೋಕದಿಂದ ಹೊರಬಂದು, ಆ ಪರಮಾತ್ಮನನ್ನು ಸೇರಲು ಭಗವದ್ಗೀತೆಯ ಜ್ಞಾನ (ಗೀತಾ ಮಹಾತ್ಮೆ, ನ್ಯಾಸ, ಧ್ಯಾನ ಶ್ಲೋಕಗಳು, 18 ಅಧ್ಯಾಯಗಳು, ಆರತಿ), ದಿನಕ್ಕೆರಡು ಬಾರಿ ಕನಿಷ್ಠ 30 ನಿಮಿಷಗಳ ಧ್ಯಾನ, ಮತ್ತು ಅರ್ಹ ಬಡ ಜನರಿಗೆ ಸಹಾಯ (ಅಹಂಕಾರವನ್ನು ಕಡಿಮೆ ಮಾಡುವುದು) ಮಾಡುವುದನ್ನು ನಮ್ಮ ದೈನಂದಿನ ನಿತ್ಯ ನಿಯಮಿತ ಕರ್ಮಗಳನ್ನಾಗಿ ಅಳವಡಿಸಿಕೊಳ್ಳಬೇಕು. ಆಗ ನಾವು ಅಕ್ಷರಬ್ರಹ್ಮನನ್ನು ಅರಿತು, ಅನುಭವಿಸಿ, ಆತನನ್ನು ಪ್ರವೇಶಿಸುತ್ತೇವೆ.

ಅಧ್ಯಯನದ ದೃಷ್ಟಿಯಿಂದ 18 ಅಧ್ಯಾಯಗಳನ್ನೊಳಗೊಂಡ ಭಗವದ್ಗೀತೆಯನ್ನು ಮೂರು ಹಂತಗಳನ್ನಾಗಿ ಅಧ್ಯಯನ ಮಾಡಬಹುದು. ಮೊದಲ ಆರು ಅಧ್ಯಾಯಗಳು – ಸಾಮಾನ್ಯ ಮನುಷ್ಯನು ನಡೆಸಬೇಕಾದ ಜೀವನದ ವಿಧಾನ ಅಂದರೆ **ತ್ವಂ** (ನಮ್ಮ ಬಗ್ಗೆ); ಎರಡನೇ ಆರು ಅಧ್ಯಾಯಗಳು, – ಆ ಪರಮಾತ್ಮನ ಸ್ವರೂಪ ಜ್ಞಾನ ಅಂದರೆ **ತತ್** (ಅದು) ; ಮೂರನೇ ಆರು ಅಧ್ಯಾಯಗಳು – ನಮ್ಮ ಮತ್ತು ಆ ಪರಮಾತ್ಮನ ನಡುವೆ ಇರುವ ಸಂಪರ್ಕ ಅಂದರೆ **ಅಸಿ** (ಆ ಪರಮಾತ್ಮನನ್ನು ಸೇರಲು ಇರುವ ಮಾರ್ಗ).

**ಇದುವೇ ಮಾನವ ಜನ್ಮದ ಗುರಿ.**

# ಗೀತೆಯ ಸಂದೇಶ

ಭಗವದ್ಗೀತೆಯು ನಮಗೆ ವೈಯಕ್ತಿಕ ಮತ್ತು ವೃತ್ತಿಯ ಮೌಲ್ಯಗಳನ್ನೊಳಗೊಂಡಂತೆ ಜೀವನದ ಮೌಲ್ಯಗಳನ್ನು ತಿಳಿಯಪಡಿಸುತ್ತದೆ. ಗಳಿಸುವ ಸಂಪತ್ತು ಮತ್ತು ಜ್ಞಾನವನ್ನು ಯಜ್ಞ, ದಾನ, ತಪಸ್ಸುಗಳ ಮೂಲಕ ನಿರಂತರ ಹಂಚಿಕೆ ಮತ್ತು ಮರುಹಂಚಿಕೆ ಮಾಡುವುದನ್ನು ಕಲಿಸುತ್ತದೆ. ಇಂತಹ ಜ್ಞಾನ–ಪೂರ್ವಕ ಕರ್ಮದಿಂದ ನಾವು **ಸಮತ್ವ**ವನ್ನು ಪಡೆಯುತ್ತೇವೆ. **ಸಮತ್ವ** ಎಂದರೆ ಸಮಾನತೆ ಮತ್ತು ಸಮತೋಲನ.

**ಸಮಾನತೆ** : ಸಮಾನತೆ ಎಂದರೆ ಸಮದೃಷ್ಟಿ. ಯಾವ ಮನುಷ್ಯನು ಪ್ರಕೃತಿಯಲ್ಲಿರುವ ಗಿಡ–ಮರಗಳನ್ನು, ಪ್ರಾಣಿ–ಪಕ್ಷಿಗಳನ್ನು, ಎಲ್ಲಾ ವರ್ಗಗಳ ಜನರನ್ನು ಸಮಾನ ದೃಷ್ಟಿಯಿಂದ ಕಾಣುತ್ತಾನೆಯೋ, ಅಂತಹ ಮನುಷ್ಯನಿಗೆ ಸಮಾನತೆ ಇದೆಯೆಂದು ಹೇಳಬಹುದು.

**ಸಮತೋಲನ** : ಸಮತೋಲನ ಎಂದರೆ ಸಮಭಾವ. ಯಾವ ಮನುಷ್ಯನಲ್ಲಿ ಸುಖ–ದುಃಖ, ಹೊಗಳಿಕೆ–ತೆಗಳಿಕೆ, ಮಾನ–ಅವಮಾನಗಳು ಬಂದಾಗ, ಬುದ್ಧಿಯು ವಿಚಲಿತಗೊಳ್ಳದೆ ಸ್ಥಿರವಾಗಿರುತ್ತದೆಯೋ, ಅಂತಹ ಮನುಷ್ಯನಿಗೆ ಸಮತೋಲನ ಇದೆಯೆಂದು ಹೇಳಬಹುದು.

ಈ ಸಮಾನತೆ ಮತ್ತು ಸಮತೋಲನ ಎರಡನ್ನೂ ಹೊಂದಿದಾಗ ಮಾನವನು ಸಮತ್ವವನ್ನು ಪಡೆಯುತ್ತಾನೆ. ಇದನ್ನು ಪಡೆಯುವುದು ಭಗವದ್ಗೀತಾ ಜ್ಞಾನವನ್ನು ಅಳವಡಿಸಿಕೊಂಡಾಗ ಮಾತ್ರ. ಈ ಸಮತ್ವವನ್ನು ಹೊಂದಿದ ಯೋಗಿ ಪುರುಷನು ಆತ್ಮನಲ್ಲಿ ಸರ್ವಪ್ರಾಣಿಗಳನ್ನು ಮತ್ತು ಸಮಸ್ತ ಪ್ರಾಣಿಗಳಲ್ಲಿ ಆತ್ಮನನ್ನು ಕಲ್ಪಿಸಿ, ಸರ್ವ ವ್ಯಾಪಿಯಾದ ಅನಂತ ಚೈತನ್ಯದಲ್ಲಿ ಐಕ್ಯಸ್ಥಿತಿಯನ್ನು ಹೊಂದುತ್ತಾನೆ. ಇಂತಹ ಜೀವನ್ಮುಕ್ತ ಸ್ಥಿತಿಯನ್ನು ನಾವು ದೇಹದಿಂದಿರುವಾಗ, ದೇಹವನ್ನು ತ್ಯಜಿಸುವಾಗಲೂ ಮತ್ತು ದೇಹ ತ್ಯಜಿಸಿದ ನಂತರವೂ ಹೊಂದಿದ್ದರೆ ಭಗವಂತನಲ್ಲಿ ಯುಕ್ತರಾಗುತ್ತೇವೆ. ಇದನ್ನು ಸಾಧಿಸಲು ದ್ವಂದ್ವ ಮೋಹಗಳು ನಮಗೆ ವೈರಿಗಳಾದರೆ, ನಮ್ಮ ನೆರವಿಗೆ ಬರುವುದು ಗೀತಾ **ಪಠಣಂ** (ಓದುವುದು) **ಪಾಠಣಂ** (ಹೇಳುವುದು) **ಶ್ರುತಂ** (ಕೇಳಿರುವುದನ್ನು) ಮತ್ತು **ಪರಿಪಾಲನಂ** (ಗೀತಾ ಪರಿಪಾಲನೆ / ಪುನರಾವರ್ತನೆಯ ಸೂತ್ರಗಳನ್ನು ಅಳವಡಿಸಿಕೊಳ್ಳುವುದು).

# ಗೀತಾ ಪರಿಪಾಲನೆ / ಪುನರಾವರ್ತನೆಯ ಸೂತ್ರಗಳು

1. ಗೀತಾ ಮಹಾತ್ಮೆ
2. ಗೀತಾ ನ್ಯಾಸ
3. ಗೀತಾ ಧ್ಯಾನ
4. ಅರ್ಜುನ ವಿಷಾದ ಯೋಗಃ
5. ಸಾಂಖ್ಯ ಯೋಗಃ
6. ಕರ್ಮ ಯೋಗಃ
7. ಜ್ಞಾನ ಕರ್ಮ ಸಂನ್ಯಾಸ ಯೋಗಃ
8. ಕರ್ಮ ಸಂನ್ಯಾಸ ಯೋಗಃ
9. ಆತ್ಮ ಸಂಯಮ ಯೋಗಃ
10. ಜ್ಞಾನ ವಿಜ್ಞಾನ ಯೋಗಃ
11. ಅಕ್ಷರಬ್ರಹ್ಮ ಯೋಗಃ
12. ರಾಜ ವಿದ್ಯಾ ರಾಜ ಗುಹ್ಯ ಯೋಗಃ
13. ವಿಭೂತಿ ಯೋಗಃ
14. ವಿಶ್ವರೂಪ ದರ್ಶನ ಯೋಗಃ
15. ಭಕ್ತಿ ಯೋಗಃ
16. ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗಃ
17. ಗುಣತ್ರಯ ವಿಭಾಗ ಯೋಗಃ
18. ಪುರುಷೋತ್ತಮ ಯೋಗಃ
19. ದೈವಾಸುರ ಸಂಪದ್ವಿಭಾಗ ಯೋಗಃ
20. ಶ್ರದ್ಧಾತ್ರಯ ವಿಭಾಗ ಯೋಗಃ
21. ಮೋಕ್ಷ ಸಂನ್ಯಾಸ ಯೋಗಃ
22. ಗೀತಾ ಆರತಿ
23. ಬೆಳಗಿನಲ್ಲಿ ಮತ್ತು ಸಂಜೆಯಲ್ಲಿ ಧ್ಯಾನ
24. ಅರ್ಹ ಬಡಜನರಿಗೆ ಸಹಾಯ, ಪ್ರಕೃತಿ ಸಂರಕ್ಷಣೆ
25. ಅಹಂಕಾರವನ್ನು ತ್ಯಜಿಸುವುದು
26. ಪ್ರಾಣಾಯಾಮ ಮತ್ತು ವೇದ ಮಹಾ ಮಂತ್ರಗಳು

# ಗೀತೆಯ ಚರಿತ್ರೆ

ಪರಮ ಪವಿತ್ರವಾದ ಶ್ರೀಮದ್ಭಗವದ್ಗೀತೆಯು ವೇದ ಮತ್ತು ಉಪನಿಷತ್ತುಗಳ ಸಾರ, ಸರ್ವ ಜನಾಂಗಕ್ಕೂ ಅನ್ವಯಿಸಬಹುದಾದಂತಹ ಜ್ಞಾನಗ್ರಂಥ. ಈ ಗೀತೆಯನ್ನು ನಮಗೆ ನೀಡಿದವರು ಅಚಿಂತ್ಯನು, ಅನಂತನು, ಅವಿನಾಶಿಯು, ಸರ್ವವ್ಯಾಪಿಯೂ ಆದ ಅಕ್ಷರಬ್ರಹ್ಮ.

ಅಕ್ಷರಬ್ರಹ್ಮನು ವೇದಗಳನ್ನು ಸೃಷ್ಟಿಸಿ, ತನ್ನ ನಾಭಿ ಕಮಲದಿಂದ ಹೊರಬಂದ ಪ್ರಜಾಪತಿ ಬ್ರಹ್ಮನಿಗೆ ನೀಡಿ, ಇದರ ಪ್ರಕಾರ ಪ್ರಜಾಪಾಲನೆ (ಸೃಷ್ಟಿ ಕ್ರಿಯೆಯನ್ನು)ಯನ್ನು ಮಾಡಬೇಕೆಂದು ನಿರ್ದೇಶಿಸಿದನು. ಮೊಟ್ಟ ಮೊದಲ ಬಾರಿಗೆ ಸೂರ್ಯನ ಉತ್ಪನ್ನವಾಯಿತು. ಅಕ್ಷರಬ್ರಹ್ಮನು ಸೂರ್ಯನಿಗೆ ಈ ವೇದಗಳ ಉಪದೇಶವನ್ನು ಕೊಡುವನು. ಉಪದೇಶ ಕೊಡುವ ತಾತ್ಪರ್ಯ – ಕರ್ತವ್ಯ ಜ್ಞಾನ ಮೂಡಿಸುವುದು. ಇದನ್ನು ಸೂರ್ಯನು ತನ್ನ ಮಗನಾದ ವೈವಸ್ವತ ಮನುವಿಗೆ ಹೇಳಿದನು. ಮನುವು ತನ್ನ ಮಗನಾದ ರಾಜ ಇಕ್ಷ್ವಾಕುವಿಗೆ ಹೇಳಿದನು. ಈ ಪರಂಪರೆಯಿಂದ ಪ್ರಾಪ್ತವಾದ ಕರ್ಮಯೋಗವನ್ನು ರಾಜರ್ಷಿಗಳು ತಿಳಿದುಕೊಂಡು ಪ್ರಜಾಪಾಲನೆ ಮಾಡುತ್ತಿದ್ದರು. ಮನುಷ್ಯ ಪ್ರಾಯದಲ್ಲಿ ಅದು ಲುಪ್ತವಾಯಿತು.

ನಂತರ ದ್ವಾಪರ ಯುಗದ ಅಂತ್ಯದಲ್ಲಿ ಅಂದರೆ ಸುಮಾರು ಕ್ರಿ.ಪೂ.8ನೇ ಡಿಸೆಂಬರ್ 3137 ರಲ್ಲಿ ಈ ವೇದಗಳ ಸಾರವಾದ ಗೀತೆಯನ್ನು ಧರ್ಮಕ್ಷೇತ್ರವಾದ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ, ಆ ಭಗವಂತನ ಪೂರ್ಣ ಅವತಾರವಾದ ಶ್ರೀಕೃಷ್ಣ ಪರಮಾತ್ಮನು, ನರೋತ್ತಮನಾದ ಅರ್ಜುನನಿಗೆ ಉಪದೇಶಿಸಿದನು. ಗೊಂದಲದಲ್ಲಿದ್ದ ಅರ್ಜುನನು ಕೃಷ್ಣನಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿದಾಗ, ಭಗವಂತನು ಆತನಿಗೆ ಗೀತೋಪದೇಶವನ್ನು ಮಾಡುವ ಮುಖಾಂತರ ಸಮಸ್ತ ಮಾನವ ಕುಲಕ್ಕೆ ಸ್ವಧರ್ಮಾಚರಣೆಯ ಬಗ್ಗೆ ಎಚ್ಚರ ಮೂಡಿಸಿ, ಮೋಕ್ಷದ ಹಾದಿಯನ್ನು ತೋರಿಸಿರುವನು. ಇದು ಸ್ವತಃ ಭಗವಂತನ ಅಧರಗಳಿಂದ ಬಂದಿರುವುದಾದ್ದರಿಂದ ಈ ಗೀತೆಯು ಭಗವದ್ಗೀತೆಯಾಯಿತು.

ಈ ಭಗವದ್ಗೀತೆಯು ನಮಗೆ ದೊರೆಯುವುದು ವೇದವ್ಯಾಸರು ರಚಿಸಿರುವ ಮಹಾಪುರಾಣವೂ, ಇತಿಹಾಸವೂ ಆದ ಮಹಾಭಾರತದಲ್ಲಿ. ಮಹಾಭಾರತದ 6ನೇ ಪರ್ವವಾದ ಭೀಷ್ಮ ಪರ್ವದಲ್ಲಿ 25ನೇ ಅಧ್ಯಾಯದಿಂದ 42ನೇ ಅಧ್ಯಾಯದವರೆಗೂ ಅಂದರೆ 18 ಅಧ್ಯಾಯಗಳಲ್ಲಿ ಇದರ ಉಲ್ಲೇಖವಿದೆ.

ವೇದವ್ಯಾಸರು (ಕೃಷ್ಣದ್ವೈಪಾಯನರು) 18 ಪುರಾಣಗಳು, 18 ಉಪಪುರಾಣಗಳು, ಬ್ರಹ್ಮಸೂತ್ರಗಳನ್ನು ರಚಿಸಿದ್ದು ಮಾತ್ರವಲ್ಲದೆ ಅಖಂಡವಾದ ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ತಮ್ಮ ಶಿಷ್ಯರ ಮೂಲಕ ಮುಂದಿನ ಪೀಳಿಗೆಗೆ ನೀಡಿದರು. ಈ ವೇದಗಳೆಲ್ಲದರ

ಸಾರವಾದ ಶ್ರೀಮದ್ಭಗವದ್ಗೀತೆಯನ್ನು ಐದನೇ ವೇದವೆಂದು ಹೇಳಬಹುದು. ವೈದಿಕ ಧರ್ಮಾಚರಣೆಗಳಲ್ಲಿ ತಪ್ಪಾಗಬಾರದೆಂದು, ಸ್ತ್ರೀಯರು, ಶೂದ್ರರು, ಪತಿತ ದ್ವಿಜರು, ವೇದ ಶ್ರವಣಕ್ಕೆ ಅಧಿಕಾರವಿಲ್ಲದವರಿಗಾಗಿ ಶ್ರೇಯಸ್ಸು ಉಂಟಾಗಲೆಂದು ವ್ಯಾಸರು ಮಹಾಭಾರತವನ್ನು ರಚಿಸಿ, ಆ ಮೂಲಕ ಭಗವದ್ಗೀತೆಯನ್ನು ಜಗತ್ತಿಗೆ ನೀಡಿದರು.

ಕಲಿಯುಗದ ಆರಂಭಕಾಲ, ಜನಮೇಜಯನು ಸರ್ಪಯಾಗವನ್ನು ಕೈಗೊಂಡಿದ್ದನು. ಅಲ್ಲಿ ಉಪಸ್ಥಿತರಾಗಿದ್ದಂತಹ ವ್ಯಾಸರ ಶಿಷ್ಯರಾದ ವೈಶಂಪಾಯನರನ್ನು, ಜನಮೇಜಯನು ತನ್ನ ವಂಶದ ಚರಿತ್ರೆಯನ್ನು ಕುರಿತು ಹೇಳಬೇಕೆಂದು ಪ್ರಾರ್ಥಿಸಿದನು. ಆಗ ವೈಶಂಪಾಯನರು ತಮ್ಮ ಗುರುಗಳಾದ ವ್ಯಾಸರು ರಚಿಸಿದ್ದ ಮಹಾಭಾರತದ ಕಥೆಯನ್ನು ನಿರೂಪಿಸಿದರು. ಅಲ್ಲಿ ನೆರೆದಿದ್ದವರಲ್ಲಿ ಸೂತರಾದ ರೋಮಹರ್ಷಣನ ಮಗನಾದ ಉಗ್ರಶ್ರವನು ಇದನ್ನು ಆಲಿಸಿ ಪುಳಕಿತನಾದನು. ಆತನು ನೈಮಿಶಾರಣ್ಯಕ್ಕೆ ಬಂದಾಗ ಶೌನಕಾದಿ ಮಹರ್ಷಿಗಳು, ಯಾವುದಾದ–ರೊಂದು ಶ್ರೇಷ್ಠವಾದ ಕಥೆಯೊಂದನ್ನು ಹೇಳಬೇಕೆಂದು ಪ್ರಾರ್ಥಿಸಿದಾಗ, ಉಗ್ರಶ್ರವನು, ತಾನು ಕೇಳಿದ್ದ ಮಹಾಭಾರತದ ಕಥೆಯನ್ನು ನಿರೂಪಿಸಿದನು.

ಪೌರಾಣಿಕ ಮೂಲಗಳ ಪ್ರಕಾರ ಕೃಷ್ಣನ ಪ್ರಯಾಣಕಾಲವು ಕಲಿಯುಗದ ಆರಂಭಕಾಲ. ಇಂದಿಗೆ ಅಂದರೆ ಕ್ರಿ.ಶ.2022ನ್ನು ಕಾಲಗಣನೆಗೆ ತೆಗೆದುಕೊಂಡರೆ ಕಲಿಯುಗವು ಆರಂಭವಾಗಿ 5,123 ವರ್ಷಗಳಾಗುತ್ತವೆ. ಕಲಿಯುಗದ ಕಾಲ 4,32,000 (1,200 ದೈವೀ ವರುಷಗಳು) ವರ್ಷಗಳಾದ್ದರಿಂದ, ಇನ್ನೂ 4,26,877 ವರ್ಷಗಳು ಕಲಿಯುಗವಾಗಿರುತ್ತದೆ.

ಕಲಿಯ ಪ್ರಭಾವದಿಂದ ಜನರಲ್ಲಿ ವಿಪರೀತ ಬುದ್ಧಿಯು ಬೆಳೆದಿದ್ದರಿಂದ ಈ ಭಗವದ್ಗೀತೆಯೆಂಬ ಶಾಸ್ತ್ರವಿದ್ಯೆಯು ಕೆಲವೇ ಮಂದಿಯಲ್ಲಿ ಉಳಿಯಿತು. ಭರತ ಭೂಮಿಯಲ್ಲಿ ಈ ಸನಾತನ ಧರ್ಮವು ಅಳಿವಿನ ಅಂಚಿಗೆ ಬಂದಾಗ, ಶ್ರೀ ಆದಿಶಂಕರಾಚಾರ್ಯರು ವೇದಗಳನ್ನು ಭಾರತದಾದ್ಯಂತ ಪ್ರಚುರಪಡಿಸಿ, ಭಗವದ್ಗೀತೆಗೆ ಭಾಷ್ಯವನ್ನು ಬರೆದು ಜನಸಾಮಾನ್ಯರ ಸ್ವತ್ತನ್ನಾಗಿ ಮಾಡಿದರು. ನಂತರ ಈ ಗೀತೆಗೆ ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರೂ ಸಹ ಭಾಷ್ಯವನ್ನು ಬರೆದರು.

ಮಹಾಭಾರತದ ಹಸ್ತಪ್ರತಿಗಳಲ್ಲಿ (6.43) ಗೀತೆಯ ಭಾಗವೆಂದು ಹೇಳಲ್ಪಡುವ 745 ಶ್ಲೋಕಗಳಿವೆ (ಕೃಷ್ಣ 620, ಅರ್ಜುನ 57, ಸಂಜಯ 67, ಧೃತರಾಷ್ಟ್ರ–1) ಎಂಬುದು ರುಜುವಾತಾಗಿದೆ. ವಿವಿಧ ವಿದ್ವಾಂಸರು ವಿಧವಿಧವಾದ ಅಂಕಿಅಂಶಗಳನ್ನು ಹೇಳುತ್ತಿದ್ದುದರಿಂದ ಆದಿಶಂಕರಾಚಾರ್ಯರು 700 ಶ್ಲೋಕಗಳನ್ನು (ಕೃಷ್ಣ 574, ಅರ್ಜುನ 84 ಸಂಜಯ 41 ಧೃತರಾಷ್ಟ್ರ 1) ಮಾನದಂಡವನ್ನಾಗಿಸಿದರು.

ಅಂದಿನಿಂದ 700 ಶ್ಲೋಕಗಳನ್ನೊಳಗೊಂಡ 18 ಅಧ್ಯಾಯಗಳಲ್ಲಿ ಸಂಯೋಜಿಸಲಾದ ಈ ಭಗವದ್ಗೀತೆಯು ಜನಸಾಮಾನ್ಯರಲ್ಲಿ ಪ್ರಚಾರಕ್ಕೆ ಬಂದಿತು.

ಈ ಭಗವದ್ಗೀತೆಯನ್ನು ವಿಶ್ವದಾದ್ಯಂತ ಪ್ರಚುರ ಪಡಿಸಿದವರು ಸ್ವಾಮಿ ವಿವೇಕಾನಂದರು. ಭಾರತೀಯರಾದ ಮಹಾತ್ಮಗಾಂಧಿ, ಡಾ|| ಬಿ. ಆರ್.ಅಂಬೇಡ್ಕರ್, ಡಾ||ಅಬ್ದುಲ್ ಕಲಾಮ್, ವಿಕ್ರಂ ಸಾರಾಭಾಯಿ, ನರೇಂದ್ರ ಮೋದಿ ಮುಂತಾದ ಅನೇಕ ಮಹನೀಯರು ಭಗವದ್ಗೀತೆಯ ಪ್ರಭಾವಕ್ಕೆ ಒಳಗಾದರು. ಭಾರತೀಯರು ಮಾತ್ರವಲ್ಲದೆ ಪಾಶ್ಚಾತ್ಯರಾದ Albert Einstein, Annie Besant, Hermann Hesse, Aldous Huxley, Ralph Waldo Emerson ಮುಂತಾದ ವ್ಯಕ್ತಿಗಳೂ ಸಹ ಈ ಗೀತೆಗೆ ಮಾರುಹೋದರು.

ಮಹಾಭಾರತವು ಪುರಾಣವಾದರೆ, ಭಗವದ್ಗೀತೆಯು ಆ ಭಗವಂತನಿಂದಲೇ ಹೇಳಲ್ಪಟ್ಟ ಪರಮ ಸತ್ಯ. ವೇದಗಳನ್ನು ಈ ಕಲಿಯುಗಕ್ಕೆ ಹೇಗೆ ಅನ್ವಯಿಸಬೇಕು ಎಂಬುದನ್ನು ಭಗವದ್ಗೀತೆಯು ನಮಗೆ ತಿಳಿಸುತ್ತದೆ. ಆದ್ದರಿಂದಲೇ ಮಹಾತ್ಮ ಗಾಂಧೀಜಿಯವರು ಭಗವದ್ಗೀತೆಯನ್ನು "ಆಧ್ಯಾತ್ಮಿಕ ಶಬ್ದಕೋಶ" ಎಂದು ಕರೆದಿರುವರು.

# ವರ್ಣಗಳು

ಈ ಭೌತಿಕ ಪ್ರಪಂಚದಲ್ಲಿ ಮನುಷ್ಯರು, ಜೀವ ವಿಕಾಸದ ಅತ್ಯಂತ ಉನ್ನತವಾದ ಸೃಷ್ಟಿ. ಮಾನವರಿಗೆ ಆಲೋಚನಾ ಶಕ್ತಿಯಿದೆ. ನಿರ್ಧರಿಸುವ ಮತ್ತು ಆಯ್ಕೆ ಮಾಡುವ ಬುದ್ಧಿ ಶಕ್ತಿಯಿದೆ. ಪ್ರತಿಯೊಬ್ಬರಿಗೂ ಅವರದೇ ಆದ ವ್ಯಕ್ತಿತ್ವವಿದೆ. ಅದಕ್ಕನುಸಾರವಾಗಿ ಆತ ತನ್ನ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಇದೆ.

ಭಗವಂತನು ಆಧ್ಯಾತ್ಮಿಕ ನೆಲೆಯಲ್ಲಿ ವರ್ಣಗಳನ್ನು ಕರ್ಮ ಮತ್ತು ಗುಣಗಳ ಆಧಾರದ ಮೇಲೆ ವಿಂಗಡಿಸಿರುವನು.

ಗೀತೆಯ ಅನುಸಾರ ವ್ಯಕ್ತಿಯು ತನ್ನ ಹುಟ್ಟು ಸ್ವಭಾವದ ಗುಣಗಳಿಂದಾಗಿ, ತನ್ನ ವೃತ್ತಿಧರ್ಮವನ್ನು ನಿರ್ಧರಿಸುವನು. ಆತ ಯಾವ ವೃತ್ತಿಯನ್ನು ಅನುಸರಿಸುವನೋ, ಆತನದು ಆ ವರ್ಣ.

**‘ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣ ಕರ್ಮ ವಿಭಾಗಶಃ’** ಗೀತೆಯ 4ನೇ ಅಧ್ಯಾಯದ 13ನೇ ಶ್ಲೋಕದ ಈ ಸಾಲು ಇದಕ್ಕೆ ರುಜುವಾತಾಗಿದೆ. ಈ ಸಾಲಿನ ಅರ್ಥ ‘ನಾನು ಗುಣ ಕರ್ಮ ಆಧಾರದ ಮೇಲೆ ನಾಲ್ಕು ವರ್ಣಗಳನ್ನು ಸೃಷ್ಟಿ ಮಾಡಿರುವೆನು’ ಎಂದು

**ಬ್ರಾಹ್ಮಣ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।**
**ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥**

ಗೀತೆಯ 18ನೇ ಅಧ್ಯಾಯದ 41ನೇ ಶ್ಲೋಕದ ಈ ಸಾಲುಗಳು ಇದನ್ನು ಪುಷ್ಟೀಕರಿಸುತ್ತವೆ. ಇದರ ಅರ್ಥ – ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಶೂದ್ರ – ಇವರ ಕರ್ಮಗಳು, ಸ್ವಭಾವತಃ ಉತ್ಪನ್ನವಾದ ಗುಣಗಳಿಂದಾಗಿ ವಿಭಾಗಿಸಲಾಗಿದೆ ಎಂದು.

ಇನ್ನು ಈ ನಾಲ್ಕು ವರ್ಣದವರ ಕರ್ಮಗಳ ವರ್ಣನೆಯನ್ನು ಸಹ ಭಗವಂತನು ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ ವಿವರಿಸಿರುವನು. ಈ ಕರ್ಮಗಳಿಗೆ ಅನುಗುಣವಾಗಿ ಪುರುಷ ಸೂಕ್ತದಲ್ಲಿ ವರ್ಣಗಳು ಭಗವಂತನ ನಾಲ್ಕು ಭಾಗಗಳನ್ನು ಪ್ರತಿನಿಧಿಸುವವೆಂದು ಹೇಳಲಾಗಿದೆ.

ಬ್ರಾಹ್ಮಣರ ಸ್ವಭಾವ ಮತ್ತು ಮೂಲ ಕರ್ಮ ಜ್ಞಾನದ ಮಾರ್ಗದರ್ಶನ. ಭಗವಂತನ ಬಾಯಿಯನ್ನು ಪ್ರತಿನಿಧಿಸುವ ಇವರದು ಸ್ವಭಾವತಃ ಇಂದ್ರಿಯ ನಿಗ್ರಹ, ಸುಳ್ಳು ಹೇಳದ, ಸದಾ ಭಗವಂತನ ಚಿಂತನೆಯಿರುವ, ಮುಖವಾಡವಿಲ್ಲದ, ಸದಾ ಅಂತರಂಗ – ಬಹಿರಂಗ ಶುದ್ಧವಾಗಿರುವ ಬದುಕು.

ಕ್ಷತ್ರಿಯರ ಸ್ವಭಾವ ಸಮಾಜದ ರಕ್ಷಣೆ ಮತ್ತು ಆಡಳಿತ ನಡೆಸುವುದು. ಇವರ ಕಾರ್ಯಕ್ಕೆ ತೋಳ್ಬಲದ ಅವಶ್ಯಕತೆಯಿರುವುದರಿಂದ, ಇವರು ಭಗವಂತನ ತೋಳುಗಳನ್ನು ಪ್ರತಿನಿಧಿಸುವರು.

ವೈಶ್ಯರ ಸ್ವಭಾವ ವ್ಯಾಪಾರ ಮತ್ತು ವಾಣಿಜ್ಯ. ವಾಣಿಜ್ಯ ಎಂದರೆ ಉತ್ಪನ್ನ ಮಾಡುವ ಕ್ರಿಯೆ. ಅಂದರೆ ಕೃಷಿ ಮತ್ತು ಗೋಪಾಲನೆ. ಇವುಗಳಿಗೆ ಶ್ರಮದ ಅವಶ್ಯಕತೆಯಿರುವುದರಿಂದ ಇವರು ಭಗವಂತನ ತೊಡೆಯನ್ನು ಪ್ರತಿನಿಧಿಸುವರು.

ಶೂದ್ರರ ಸೇವಾಗುಣ ಅತ್ಯಂತ ಮಹತ್ವದ್ದು. ಆದ್ದರಿಂದ ಪೂಜೆಯಲ್ಲಿ ಶ್ರೇಷ್ಠ ಎನಿಸಿದ ಪಾದಗಳನ್ನು ಇವರು ಪ್ರತಿನಿಧಿಸುವರು.

ಯಾವ ಮನುಷ್ಯನು ಯಾವ ಕರ್ಮ ಮಾಡುವುದರಲ್ಲಿ ನಿರತನಾಗಿರುತ್ತಾನೆಯೋ ಆತ ಆ ವರ್ಣಕ್ಕೆ ಸೇರಿದವನಾಗಿರುತ್ತಾನೆ. ಹೀಗೆ ನಾಲ್ಕು ವರ್ಣಗಳು ಸೇರಿದರೆ ಮಾತ್ರ ಸಂಪೂರ್ಣ ಸಮಾಜ. ಇಲ್ಲಿ ಮೇಲು ಕೀಳು ಎನ್ನುವ ಭಾವನೆಯಿಲ್ಲ. ಎಲ್ಲರೂ ಮೋಕ್ಷಕ್ಕೆ ಯೋಗ್ಯರಾದವರೆ. ಇದು ಆಧ್ಯಾತ್ಮಿಕ ವರ್ಗೀಕರಣ ಮತ್ತು ವ್ಯವಸ್ಥೆ.

# ಆಶ್ರಮಗಳು

ಆಶ್ರಮಗಳನ್ನು ಒಬ್ಬ ವ್ಯಕ್ತಿಯ ಭೌತಿಕ ಶರೀರದ ಜೀವಿತಾವಧಿಯ ಆಧಾರದ ಮೇಲೆ ವಿಭಾಗಿಸಲ್ಪಟ್ಟಿದೆ. ಕಲಿಯುಗದಲ್ಲಿ ಮನುಷ್ಯನ ಜೀವಿತಾವಧಿಯು ಅತ್ಯಂತ ಕಡಿಮೆ ಇರುವುದರಿಂದ, ಆತನ ಬುದ್ಧಿ ಮತ್ತು ದೈಹಿಕ ಶಕ್ತಿ ಸಾಮರ್ಥ್ಯವನ್ನನುಸರಿಸಿ ನಾಲ್ಕು ಆಶ್ರಮಗಳಿಗೆ ಸ್ಥಿತ್ಯಂತರಗೊಳ್ಳಬಹುದು.

ಸನಾತನ ಧರ್ಮದ ಸಾಮಾಜಿಕ ವ್ಯವಸ್ಥೆಯು ರಚನಾತ್ಮಕವಾಗಿದೆ ಮತ್ತು ಧರ್ಮದ ಆಧಾರವಾಗಿರುವ ಸಂಹಿತೆಯಾಗಿದೆ. ಇದು ವರ್ಣ–ಆಶ್ರಮ–ಪುರುಷಾರ್ಥಗಳ ಮೇಲೆ ಅವಲಂಬಿಸಿದೆ.

'ಪುರುಷಾರ್ಥ' ಎಂಬುದು ಸಂಸ್ಕೃತ ಪದ. ಇದರ ಅರ್ಥ ಮಾನವನ ಅನ್ವೇಷಣೆಯ ವಸ್ತು ಅಥವ ಮನುಷ್ಯನ ಗುರಿಗಳು.

ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು – ನಾಲ್ಕು ಆಶ್ರಮಗಳಾದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಗಳಲ್ಲಿ ಕ್ರಮವಾಗಿ ಸಾಧಿಸಬೇಕು. ಇದು ಕ್ರಮವಾಗಿ ಭಗವಂತನ ಹೃದಯ, ತೊಡೆ, ಎದೆ ಹಾಗೂ ತಲೆಯ ಭಾಗವನ್ನು ಪ್ರತಿನಿಧಿಸುತ್ತದೆ.

ಉದಾಹರಣೆಗೆ : ಮನುಷ್ಯನ ಅಯುಷ್ಯವನ್ನು 96 ಎಂದು ಪರಿಗಣಿಸಿದರೆ

1 ರಿಂದ 24ನೇ ವಯಸ್ಸಿನವರೆಗು, ಬ್ರಹ್ಮಚರ್ಯ
25 ರಿಂದ 49ನೇ ವಯಸ್ಸಿನವರೆಗು, ಗೃಹಸ್ಥ
50 ರಿಂದ 74ನೇ ವಯಸ್ಸಿನವರೆಗು, ವಾನಪ್ರಸ್ಥ
75 ರಿಂದ 96ನೇ ವಯಸ್ಸಿನವರೆಗು, ಸಂನ್ಯಾಸ
ಆಶ್ರಮ ಧರ್ಮವನ್ನು ಪಾಲಿಸಬೇಕು.

**ಧರ್ಮ**ವು ಪ್ರಾಮಾಣಿಕ ಮತ್ತು ನೇರವಾದ ನಡವಳಿಕೆ. **ಬ್ರಹ್ಮಚರ್ಯ** ಆಶ್ರಮದಲ್ಲಿ ತನ್ನ ಮುಂದಿನ ಮೂರು ಆಶ್ರಮಗಳಿಗೆ ಬೇಕಾಗುವ ಜ್ಞಾನಾರ್ಜನೆಯನ್ನು ಪಡೆದುಕೊಂಡು ಧರ್ಮದ ಹಾದಿಯನ್ನು ಮೈಗೂಡಿಸಿಕೊಂಡಿರಬೇಕು.

**ಅರ್ಥ** ಎಂದರೆ ನೀತಿವಂತ ಮತ್ತು ಪ್ರಾಮಾಣಿಕ ಆರ್ಥಿಕ ಚಟುವಟಿಕೆಗಳ ಅನ್ವೇಷಣೆ. **ಗೃಹಸ್ಥ**ನಾಗಿರುವಾಗ ಧರ್ಮಬದ್ಧವಾಗಿ, ಪ್ರಾಮಾಣಿಕವಾಗಿ ಆರ್ಜಿಸಿ ಸ್ವಾವಲಂಬನೆಯನ್ನು ಸಾಧಿಸಬೇಕು.

**ಕಾಮ** ಎಂದರೆ ಆಸೆಗಳನ್ನು ಪೂರೈಸಿಕೊಳ್ಳುವುದು. **ವಾನಪ್ರಸ್ಥ** ಆಶ್ರಮದಲ್ಲಿ ಪ್ರಕೃತಿಯಿಂದ ನಾವು ಪಡೆದದ್ದನ್ನು ಪ್ರಕೃತಿಗೆ ಹಿಂದಿರುಗಿಸಿ ಪ್ರಾಯೋಗಿಕ ಜೀವನ ನಡೆಸಿ, ತನ್ನ ಆತ್ಮದ ಮುನ್ನಡೆಗೆ ಬೇಕಾಗಿರುವ ಧರ್ಮಯುತವಾದ ಕಾರ್ಯಗಳನ್ನು ಮಾಡುವುದರ ಮೂಲಕ ಆಸೆಗಳನ್ನು ಪೂರೈಸಿಕೊಳ್ಳಬೇಕು.

**ಮೋಕ್ಷ**ವೆಂದರೆ ಮುಕ್ತಿ. ಇದುವೇ ಸ್ವಯಂ ಶಾಶ್ವತ ಆನಂದ. **ಸಂನ್ಯಾಸಾಶ್ರಮ**ದಲ್ಲಿ ಏಕಾಂತದಲ್ಲಿ ಧ್ಯಾನ ಮಗ್ನರಾಗಿ ಅಂತರಂಗದಲ್ಲಿ ಆ ಪರಮಾತ್ಮನೊಡನೆ ಯುಕ್ತರಾಗಿರಬೇಕು. ಆಗ ಅದು ಮೋಕ್ಷಕ್ಕೆ ದಾರಿಯಾಗುತ್ತದೆ.

ಜೀವನದ ವ್ಯಂಗ್ಯವೆಂದರೆ, ನಮ್ಮ ಭೌತಿಕವಾದ ವಯಸ್ಸು ಆಧ್ಯಾತ್ಮಿಕ ಜೀವನವನ್ನು ಅಳವಡಿಸಿಕೊಳ್ಳುವುದರಲ್ಲಿ ನಮ್ಮನ್ನು ಮೋಸಗೊಳಿಸುತ್ತದೆ.

**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ।**

ಇಂದಿನ ಯುವ ಪೀಳಿಗೆಯು ಆಧ್ಯಾತ್ಮಿಕ ಜೀವನವನ್ನು ಅಳವಡಿಸಿಕೊಳ್ಳಲು ಒಂದು ಸಣ್ಣ ಪ್ರಯತ್ನ ಮಾಡಿದರೂ ಸಹ ಅದು ಅವರನ್ನು ಉನ್ನತಿಗೆ ಕರೆದೊಯ್ಯುವುದು. ಭಗವಂತನ ಸೇವೆಯನ್ನು ಮಾಡಲು ಯುವ ಪೀಳಿಗೆಯವರಿಗೆ ಒಂದು ಉತ್ತಮ ಅವಕಾಶ. ಆಧ್ಯಾತ್ಮಿಕ ಜೀವನವನ್ನು ಆರಂಭಿಸಲು ಯಾವುದೇ ವಯಸ್ಸಿನ ಮಿತಿಯಿಲ್ಲ. ಹಾಗೂ ನಮ್ಮ ಭೌತಿಕ ವಯಸ್ಸು ಆಧ್ಯಾತ್ಮಿಕ ವಯಸ್ಸನ್ನು ಪ್ರತಿಫಲಿಸುವುದಿಲ್ಲ. ನಮ್ಮ ಆಧ್ಯಾತ್ಮಿಕ ಸಾಧನೆಯು, ವರ್ತಮಾನ ವಯಸ್ಸಿನ ಜೊತೆ – ಬ್ರಹ್ಮನು ಸೃಷ್ಟಿಸಿದ ಆದಿಯಿಂದ ಅಥವ ಕಲ್ಪದ ಆದಿಯಿಂದ ತೆಗೆದುಕೊಂಡರೂ ಸಹ ಮನುಷ್ಯನ ಯಾವುದೇ ಆಧ್ಯಾತ್ಮಿಕ ಸಾಧನೆಯ ಮಟ್ಟವನ್ನು ನಿಶ್ಚಯ ಪಡಿಸಲಾಗುವುದಿಲ್ಲ. ಆದ್ದರಿಂದ ನಾವು ಭೌತಿಕವಾಗಿ ಯಾವುದೇ ವಯೋಮಾನದವರಾಗಿದ್ದರೂ, ಯಾವ ವರ್ಣದವರಾಗಿದ್ದರೂ ಸಹ ಆಧ್ಯಾತ್ಮಿಕ ಜೀವನವನ್ನು ಆರಂಭಿಸಿ ಭಗವಂತನು ಕೊಟ್ಟಿರುವ ಈ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕು.

# ವೇದವ್ಯಾಸರು



**ವ್ಯಾಸಾಯ ವಿಷ್ಣು ರೂಪಾಯ ವ್ಯಾಸ ರೂಪಾಯ ವಿಷ್ಣವೇ ।**
**ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥**

ವಿಷ್ಣುರೂಪದಲ್ಲಿರುವ ವ್ಯಾಸರಿಗೆ, ವ್ಯಾಸ ರೂಪದಲ್ಲಿರುವ ವಿಷ್ಣುವಿಗೆ ನಮಸ್ಕಾರಗಳು. ವಶಿಷ್ಠ ಮಹರ್ಷಿಗಳ ವಂಶಸ್ಥರಾದ, ವೇದಗಳ ನಿಧಿಯಾಗಿರುವ ವ್ಯಾಸರಿಗೆ ನಮಸ್ಕಾರಗಳು.

'ಇತಿಹಾಸ' ಎಂಬುದು ಸಂಸ್ಕೃತ ಪದ. 'ಇತಿ' ಎಂದರೆ ಇರುವುದು ಎಂದರ್ಥ. ಇದ್ದುದನ್ನು ಇದ್ದ ಹಾಗೆ ದಾಖಲಿಸುವುದೇ ಇತಿಹಾಸ. ಯಾವುದೇ ಒಂದು ಗ್ರಂಥವು ಇತಿಹಾಸವಾಗಬೇಕಾದರೆ, ಆ ಗ್ರಂಥದ ಕರ್ತೃ ಅದರಲ್ಲಿ ಪಾತ್ರಧಾರಿಯಾಗಿರಬೇಕು. ಭರತ ಭೂಮಿಯಲ್ಲಿ ನಡೆದ ಮುಖ್ಯವಾದ ಘಟನೆಗಳನ್ನು ಇತಿಹಾಸ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳಲ್ಲಿ ದಾಖಲಿಸಲಾಗಿದೆ. ಪಂಚಮವೇದವಾದ ಮಹಾಭಾರತದಲ್ಲಿ ಪಾತ್ರಧಾರಿಯಾಗಿರುವ ವೇದವ್ಯಾಸರು ಸಪ್ತರ್ಷಿಗಳಲ್ಲಿ ಒಬ್ಬರಾದ ವಶಿಷ್ಠ ವಂಶಸ್ಥರು. 28ನೇ ಮಹಾಯುಗವಾಗಿರುವ ವೈವಸ್ವತ ಮನ್ವಂತರದಲ್ಲಿ ಕೃಷ್ಣದ್ವೈಪಾಯನರು ವ್ಯಾಸರು. ಚರ್ಮದ ಬಣ್ಣ ಕಪ್ಪಾದ್ದರಿಂದ ಕೃಷ್ಣ ಎಂದು, ದ್ವೈಪಾಯನ ಎಂಬ ದ್ವೀಪದಲ್ಲಿ ಜನಿಸಿದ್ದರಿಂದ ದ್ವೈಪಾಯನ ಎಂದು – ಹೀಗೆ ಎರಡೂ ಪದಗಳು ಸೇರಿ ಕೃಷ್ಣದ್ವೈಪಾಯನರಾದರು. ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ್ದರಿಂದ ವೇದವ್ಯಾಸರಾದರು.

ವೇದವ್ಯಾಸರು 18 ಪುರಾಣಗಳು, 18 ಉಪಪುರಾಣಗಳು, ಬ್ರಹ್ಮಸೂತ್ರಗಳನ್ನು ರಚಿಸಿದ್ದು ಮಾತ್ರವಲ್ಲದೆ, ಧರ್ಮ–ಅರ್ಥ–ಕಾಮ–ಮೋಕ್ಷವೆಂಬ ಪುರುಷಾರ್ಥಗಳನ್ನು ಹೊಂದಿರುವ ಮತ್ತು ಲೌಕಿಕ ಹಾಗೂ ಪಾರಮಾರ್ಥಿಕ ಜ್ಞಾನವನ್ನು ನೀಡಿರುವ ಮಹಿಮಾನ್ವಿತ ಗ್ರಂಥವಾದ ಶ್ರೀಮದ್ಭಾಗವತವನ್ನು ರಚಿಸಿರುವರು. ಆ ಮೂಲಕ ಅಕ್ಷರಬ್ರಹ್ಮನ ಧರ್ಮವನ್ನು ಜನಮಾನಸರಲ್ಲಿ ತಂದರು.

ಅಖಂಡವಾದ ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ, ಐದನೇ ವೇದವಾದ ಇತಿಹಾಸ ಮತ್ತು ಪುರಾಣಗಳನ್ನು ರಚಿಸಿದರು. ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವಣವೇದಗಳನ್ನು, ತಮ್ಮ ಶಿಷ್ಯರ ಮೂಲಕ ಮುಂದಿನ ಪೀಳಿಗೆಗೆ ನೀಡಿದರು. ವೈದಿಕ ಧರ್ಮಾಚರಣೆಗಳಲ್ಲಿ ತಪ್ಪಾಗಬಾರದೆಂದು, ಸ್ತ್ರೀಯರು, ಶೂದ್ರರು, ಪತಿತದ್ವಿಜರು, ವೇದಶ್ರವಣಕ್ಕೆ ಅಧಿಕಾರವಿಲ್ಲದವರಿಗಾಗಿ ಶ್ರೇಯಸ್ಸು ಉಂಟಾಗಲೆಂದು ವ್ಯಾಸರು ಮಾಹಾಭಾರತವೆಂಬ ಇತಿಹಾಸವನ್ನು ರಚಿಸಿದರು. ಸ್ವತಃ ಪಾತ್ರಧಾರಿಯಾಗಿರುವ ವ್ಯಾಸರು, ಈ ಮೂಲಕ ಮಾನವ ಕುಲಕ್ಕೆ ವೇದಗಳೆಲ್ಲದರ ಸಾರವಾದ ಶ್ರೀಮದ್ಭಗವದ್ಗೀತೆಯನ್ನು ತಿಳಿಯಪಡಿಸಿದರು.

**'ವೇದವ್ಯಾಸೋ ಭಗವಾನ್ ಋಷಿಃ'** ವ್ಯಾಸರು ನೀಡಿರುವ ಭಗವದ್ಗೀತೆಯು ಕಾಲ್ಪನಿಕವಲ್ಲ. ಭಗವಂತನ ಅಂಶ ರೂಪರಾದ ಅವರು, ತಮ್ಮ ತಪಸ್ಸಿನ ಮೂಲಕ ದರ್ಶಿಸಿದ ಸತ್ಯ.

ಪ್ರತಿಯೊಬ್ಬ ಮನುಷ್ಯನು ನಡೆದುಕೊಳ್ಳಬೇಕಾದ ಜೀವನ ಮೌಲ್ಯಗಳನ್ನು ಹೇಳುವ ಗೀತೆ, ಗಂಡು–ಹೆಣ್ಣು, ಜಾತಿ–ಮತಗಳ ಭೇದವಿಲ್ಲದೆ, ಎಲ್ಲರೂ ಎಲ್ಲಾ ಕಾಲದಲ್ಲಿಯೂ ಪಠಿಸಬಹುದಾದದ್ದು. ಯಾವುದೇ ಅರ್ಥಗಳಿದ್ದರೂ, ಎಷ್ಟೇ ವ್ಯಾಖ್ಯಾನಿಸಿದರೂ, ಭಗವದ್ಗೀತೆಯ ಸಂದೇಶ ಮಾತ್ರ ಅತ್ಯಂತ ಸರಳ. ಕರ್ಮಯೋಗಿಯಾಗಿ ಸಂನ್ಯಾಸವನ್ನು ಪಾಲಿಸಿ, ಅಹಂಕಾರವನ್ನು ಬಿಟ್ಟು ಸಮಸ್ತ ಜೀವಿಗಳೊಂದಿಗೆ ಸೌಹಾರ್ದತೆಯಿಂದ ಸಹಬಾಳ್ವೆಯನ್ನು ಜೀವಿಸಬೇಕೆಂಬುದು. ನೈಷ್ಕರ್ಮತೆಯನ್ನು ಹೊಂದಿ, ಯಜ್ಞ, ದಾನ ಮತ್ತು ತಪಸ್ಸಿನ ಮುಖಾಂತರ, ಗುಣಗಳನ್ನು ದಾಟಿ ಆ ಪರಮಾತ್ಮನೊಂದಿಗೆ ಈ ಜೀವಾತ್ಮನನ್ನು ಯುಕ್ತಗೊಳಿಸುವುದು.

**'ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ'**. ಮಹಾಭಾರತವೆಂಬ ತೈಲದಿಂದ ಭಗವದ್ಗೀತೆಯೆಂಬ ಜ್ಞಾನ ಜ್ಯೋತಿಯನ್ನು ಬೆಳಗಿಸಿದವರು ವೇದವ್ಯಾಸರು. ಈ ಮಹಿಮಾನ್ವಿತ ಗೀತೆಯನ್ನು ಮಹಾಭಾರತದ ಆತ್ಮ ಎಂದು ಹೇಳಲಾಗುವುದು.

ಪ್ರತಿ ಆಷಾಢ ಮಾಸದ ಹುಣ್ಣಿಮೆಯೆಂದು **ವ್ಯಾಸ ಪೌರ್ಣಮಿ** ಎಂದು ಆಚರಿಸಿ, ಆ ದಿನವನ್ನು ಗುರುಗಳಿಗೆ ಸಮರ್ಪಿಸುವ ಮೂಲಕ, ನಾವು ವ್ಯಾಸ ಮಹರ್ಷಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

# ಗುರುದೀಕ್ಷೆ – ಪಾಲಿಸುವ ವಿಧಾನ

## (ನಿತ್ಯಕರ್ಮವನ್ನಾಗಿಸಿಕೊಂಡು ಪ್ರತಿನಿತ್ಯ ಮಾಡಬೇಕಾಗಿರುವುದು)

* ಗುರುಮಂತ್ರ – ಕನಿಷ್ಠ ಒಂದು ಬಾರಿ ಪಾರಾಯಣ ಮಾಡಬೇಕು
* ಗಾಯತ್ರಿಮಂತ್ರ – ಕನಿಷ್ಠ 12 ಬಾರಿ ಪಾರಾಯಣ ಮಾಡಬೇಕು
* ವೇದ ಮಂತ್ರ – ಕನಿಷ್ಠ 3 ಬಾರಿ ಪಾರಾಯಣ ಮಾಡಬೇಕು
* ಗೀತಾ ಧ್ಯಾನ ಮಂತ್ರಗಳು – 1 ಬಾರಿ

  (ಗೀತಾ ಮಹಾತ್ಮೆ, ನ್ಯಾಸ, ಧ್ಯಾನ)
* ಗೀತಾ ಶ್ಲೋಕಗಳು – ಕನಿಷ್ಠ ಒಂದು ಅಧ್ಯಾಯ ಅರ್ಥ ಸಹಿತ ಕಡ್ಡಾಯ ಶ್ಲೋಕದೊಂದಿಗೆ (18 ಅಧ್ಯಾಯಗಳನ್ನು ಮಾಡುವುದು ಅತ್ಯುತ್ತಮ)
* ಪ್ರಾಣಾಯಾಮ
* ಧ್ಯಾನ – ಕನಿಷ್ಠ ಪ್ರತಿ ಬಾರಿ 30 ನಿಮಿಷಗಳಂತೆ ಪ್ರತಿ ನಿತ್ಯ 2 ಬಾರಿ
* ಶ್ರೀಮದ್ಭಗವದರ್ಪಣೆ
* ಓಂ ಶಾಂತಿಃ ಓಂ ಸ್ವಸ್ತಿಃ
* ಗೀತಾ ಜ್ಞಾನದ ಪ್ರಾಯೋಗಿಕತೆ

## ಗುರುಮಂತ್ರ

**ಗುರುರ್ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥**

ಬ್ರಹ್ಮನು ಸೃಷ್ಟಿಕರ್ತ, ವಿಷ್ಣುವು ಸೃಷ್ಟಿಯ ರಕ್ಷಕ ಮತ್ತು ಶಿವನು ನಮ್ಮ ತಪ್ಪುಗಳಿಗೆ ದಂಡಿಸುವಾತ (ಲಯಕಾರಕ). ನಾವು ಗುರುಗಳಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಸ್ವರೂಪವನ್ನು ಕಾಣಬೇಕು. ಸೃಷ್ಟಿ, ಪಾಲನೆ ಮತ್ತು ದಂಡನೆ – ಇವುಗಳನ್ನು ಮಾಡುವಾತ ಆ ಪರಬ್ರಹ್ಮ. ಆ ಪರಬ್ರಹ್ಮನನ್ನು ನಾವು ಗುರುಗಳಲ್ಲಿ ದರ್ಶಿಸಬೇಕು. ಅಂತಹ ಗುರುಗಳಿಗೆ ನಮಸ್ಕಾರಗಳು.

## ಗಾಯತ್ರಿ ಮಂತ್ರ

**ಓಂ ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್**

| | |
|---|---|
| ಓಂ | ಪ್ರಣವ |
| ಭೂರ್ಭುವಃ ಸ್ವಃ | – ಗಾಯತ್ರಿ ಮಂತ್ರದ, ವ್ಯಾಹೃತಿ |
| ತತ್ಸವಿತುರ್ವರೇಣ್ಯಂ | – ಋಗ್ವೇದ (ಪದ್ಯರೂಪ) |
| ಭರ್ಗೋ ದೇವಸ್ಯ ಧೀಮಹಿ | – ಯಜುರ್ವೇದ (ಗದ್ಯರೂಪ) |
| ಧಿಯೋ ಯೋ ನಃ ಪ್ರಚೋದಯಾತ್ | – ಸಾಮವೇದ (ಗಾನ ರೂಪ) |

ವೇದಗಳೆಂದರೆ ವಿಪುಲವಾದ ವೈದಿಕ ವಾಙ್ಮಯ. ವೇದವೆಂದರೆ ಅರಿವುಕೊಡುವಂತಹದ್ದು. ಎಲ್ಲರಿಗೂ ಅರಿವು ಕೊಡುವವನು ಆ ಭಗವಂತ. ಅಂತಹ ವೇದಗಳ ಸಾರ ಓಂಕಾರ – ಅದೇ ಪ್ರಣವ, ಮೂರು ವೇದಗಳಿಂದ ಮೂರು ಅಕ್ಷರಗಳು ಅ ಉ ಮ (ಓಂಕಾರ) ಮೂರು ವೇದಗಳ ಸಾರ ಒಂದು ಸೂಕ್ತ – ಪುರುಷಸೂಕ್ತ; ಪುರುಷಸೂಕ್ತದ ಸಾರ – ಗಾಯತ್ರಿ ಮಂತ್ರ.

### ಗಾಯತ್ರಿ ಮಂತ್ರ ವೇದಗಳ ಮಾತೆ

**ಅರ್ಥ:**

ಸತ್‌ಚಿತ್ ಆನಂದನಾದ ಓ ಪರಮಾತ್ಮನೇ, ನಮ್ಮ ಮೂರು ಅವಸ್ಥೆಗಳ (ಜಾಗೃತಿ, ಸ್ವಪ್ನ, ಸುಷುಪ್ತಿ) ಅಸ್ತಿತ್ವದಲ್ಲಿಯೂ ನಿನ್ನ ಉತ್ತಮ ಮತ್ತು ಉದಾತ್ತವಾದ ದೈವಿಕ ತೇಜಸ್ಸಿನ ಸತ್ಯದ ಅರಿವು ಸದಾ ಇರುವಂತೆ ನಮ್ಮಲ್ಲಿ ಆಧಾರವಾಗಿ ನಿಂತು, ಪ್ರೇರಕನಾಗಿ, ನಮ್ಮನ್ನು ಜಾಗೃತಗೊಳಿಸುವವನಾಗು ಎಂದು ಪ್ರಾರ್ಥಿಸುತ್ತೇವೆ.

# ವೇದ ಮಂತ್ರಗಳು

## ಪ್ರಜ್ಞಾನಂ ಬ್ರಹ್ಮನ್, ತತ್ ತ್ವಂ ಅಸಿ, ಅಹಂ ಬ್ರಹ್ಮಾಸ್ಮಿ, ಅಯಂ ಆತ್ಮನ್ ಬ್ರಹ್ಮನ್

ಉಪನಿಷತ್ತಿನ ಈ ನಾಲ್ಕು ಮಹಾವಾಕ್ಯಗಳು ಜೀವಾತ್ಮ (ಜೀವ + ಆತ್ಮ) ಮತ್ತು ಪರಮಾತ್ಮನ (ಆಧ್ಯಾತ್ಮಿಕ ವಾಸ್ತವ) ಸ್ವಭಾವವನ್ನು ವಿಸ್ತೃತವಾಗಿ ತೆರೆದಿಡುತ್ತವೆ. ಅವುಗಳ ಅಜ್ಞಾನ ಮತ್ತು ಜ್ಞಾನದ ಸ್ವರೂಪವನ್ನು ಮತ್ತು ಅವುಗಳ ಏಕತೆಯನ್ನು ತಿಳಿಯಪಡಿಸುತ್ತವೆ. ಈ ಆಧ್ಯಾತ್ಮ ದಾರಿಯನ್ನು ಗುರುಗಳ ಮುಖಾಂತರ ಅರಿತು ಆತ್ಮಾವಲೋಕನವನ್ನು ಮಾಡಿಕೊಂಡು ಯೋಗವನ್ನು ಸಾಧಿಸುವಂತೆ ಈ ವಾಕ್ಯಗಳು ಪ್ರತಿಪಾದಿಸುತ್ತವೆ. ಅದ್ವೈತ ವೇದಾಂತದ ಪ್ರಕಾರ ಈ ನಾಲ್ಕು ಮಹಾವಾಕ್ಯಗಳು (ಪ್ರತಿಯೊಂದು ವೇದಗಳ ಮೂಲದ ಒಂದೊಂದು ವಾಕ್ಯ) ಜೀವಾತ್ಮನ ಏಕತೆ ಅಂತಿಮವಾಗಿ ಪರಮಾತ್ಮನೊಂದಿಗೆ ಎಂಬುದನ್ನು ಸೂಚಿಸುತ್ತವೆ.

**‘ಪ್ರಜ್ಞಾನಂ ಬ್ರಹ್ಮನ್’** – ಋಗ್ವೇದದ ಐತ್ರೇಯೋಪನಿಷತ್ 3.3
ಪ್ರಜ್ಞೆಯೇ (ಅತ್ಯುನ್ನತ ಪ್ರಜ್ಞೆ / ಬುದ್ಧಿವಂತಿಕೆ/ ವಿವೇಕ)
ಬ್ರಹ್ಮ (ಸಂಪೂರ್ಣ / ಅನಂತ / ಅತ್ಯುನ್ನತ ವಾಸ್ತವ / ಅತ್ಯುತ್ತಮ ಸತ್ಯ)

**‘ತತ್ ತ್ವಂ ಅಸಿ’** – ಸಾಮವೇದದ ಛಾಂದೋಗ್ಯಉಪನಿಷತ್ 6.8.7
ತತ್ – ಅಂತಿಮ ವಾಸ್ತವ / ಅಕ್ಷರಬ್ರಹ್ಮ
ತ್ವಂ – ಜೀವಾತ್ಮ
ಅಸಿ – ಜೀವಾತ್ಮವು ಪರಮಾತ್ಮನ ಒಂದಂಶ

**‘ಅಹಂ ಬ್ರಹ್ಮಾಸ್ಮಿ’** – ಯಜುರ್ವೇದದ ಬೃಹದಾರಣ್ಯಕೋಪನಿಷತ್ 1.4.10
ನಾನೇ ಅಕ್ಷರಬ್ರಹ್ಮ (ಈ ಪಿಂಡಾಂಡವನ್ನು ಬ್ರಹ್ಮಾಂಡವೆಂಬ ಸತ್ಯವನ್ನರಿತು ಈ ಪಿಂಡಾಂಡದಲ್ಲಿರುವ ಜ್ಯೋತಿರೂಪಿ ಆತ್ಮನಲ್ಲಿ ಸ್ಥಿತರಾಗುವುದು)

**‘ಅಯಂ ಆತ್ಮನ್ ಬ್ರಹ್ಮನ್’** – ಅಥರ್ವವೇದದ ಮಾಂಡೂಕ್ಯಉಪನಿಷತ್ 1.2
ಆತ್ಮವೇ ಅಕ್ಷರಬ್ರಹ್ಮ – ಇದು ಅಂತಿಮ ವಾಸ್ತವ

# ಗೀತಾ ಮಹಾತ್ಮೆ

**ಧರೋವಾಚ :-** **ಭಗವನ್ ಪರಮೇಶಾನ ಭಕ್ತಿರವ್ಯಭಿಚಾರಿಣೀ ।**
**ಪ್ರಾರಬ್ಧಂ ಭುಜ್ಯಮಾನಸ್ಯ ಕಥಂ ಭವತಿ ಹೇ ಪ್ರಭೋ ॥ 1 ॥**

ಭೂದೇವಿಯು ಕೇಳಿದಳು:-
ಹೇ ಭಗವಂತ, ಪ್ರಾರಬ್ಧವನ್ನು ಅನುಭವಿಸುತ್ತಿರುವವರಿಗೆ ಅಸ್ಖಲಿತ(ನಿಶ್ಚಲವಾದ)ವಾದ ಭಕ್ತಿಯು ಹೇಗೆ ಉಂಟಾಗುವುದು ?

**ಶ್ರೀ ವಿಷ್ಣುರುವಾಚ :-** **ಪ್ರಾರಬ್ಧಂ ಭುಜ್ಯಮಾನೋ ಹಿ ಗೀತಾಭ್ಯಾಸರತಃ ಸದಾ ।**
**ಸ ಮುಕ್ತಃ ಸ ಸುಖೀ ಲೋಕೇ ಕರ್ಮಣಾನೋಪಲಿಪ್ಯತೇ ॥ 2 ॥**

ವಿಷ್ಣುವು ಹೇಳಿದನು:-
ದೇವಿ, ಪ್ರಾರಬ್ಧವನ್ನು ಅನುಭವಿಸುತ್ತಿದ್ದರೂ, ಗೀತೆಯನ್ನು ಬಿಡದೆ ಅಭ್ಯಾಸ ಮಾಡುವುದರಿಂದ ಕರ್ಮದ ಬಂಧನಕ್ಕೆ ಬೀಳದೆ ಮುಕ್ತರಾಗಬಲ್ಲರು. ಅವರೇ ಈ ಲೋಕದಲ್ಲಿ ಸುಖಿ.

**ಮಹಾಪಾಪಾದಿಪಾಪಾನಿ ಗೀತಾಧ್ಯಾನಂ ಕರೋತಿ ಚೇತ್ ।**
**ಕ್ವಚಿತ್ ಸ್ಪರ್ಶಂ ನ ಕುರ್ವಂತಿ ನಲಿನದಲಮಂಬುವತ್ ॥ 3 ॥**

ನೀರಿನಲ್ಲೇ ಇರುವ ಕಮಲಕ್ಕೆ ಹೇಗೆ ನೀರು ಅಂಟುವುದಿಲ್ಲವೋ ಹಾಗೆಯೇ ಗೀತಾಧ್ಯಾನ ತತ್ಪರರಿಗೆ ಪರ್ವತದಂತಹ ಪಾಪಗಳು ಇದ್ದರೂ, ಕಿಂಚಿತ್ತು ಸಹ ಪಾಪಗಳು ಅವರನ್ನು ಅಂಟುವುದಿಲ್ಲ.

**ಗೀತಾಯಾಃ ಪುಸ್ತಕಂ ಯತ್ರ ಯತ್ರ ಪಾಠಃ ಪ್ರವರ್ತತೇ ।**
**ತತ್ರ ಸರ್ವಾಣಿ ತೀರ್ಥಾನಿ ಪ್ರಯಾಗಾದೀನಿ ತತ್ರ ವೈ ॥ 4 ॥**

ಗೀತಾ ಗ್ರಂಥವಿರುವ ಮತ್ತು ಗೀತಾ ಪಾರಾಯಣ ಮಾಡುವ ಸ್ಥಳದಲ್ಲಿ ಪ್ರಯಾಗವೇ ಮೊದಲಾದ ಸರ್ವ ತೀರ್ಥಗಳೂ ನೆಲೆಸಿರುವವು.

**ಸರ್ವೇ ದೇವಾಶ್ಚ ಋಷಯೋ ಯೋಗಿನಃ ಪನ್ನಗಾಶ್ಚಯೇ ।**
**ಗೋಪಾಲಾ ಗೋಪಿಕಾ ವಾऽಪಿ ನಾರದೋದ್ಧವಪಾರ್ಷದ್ಯೈಃ ॥ 5 ॥**

ಗೀತಾಗೋಷ್ಠಿಯು ನಡೆಯುವ ಸ್ಥಳದಲ್ಲಿ ದೇವತೆಗಳು, ಋಷಿಗಳು, ಯೋಗಿಗಳು, ಪನ್ನಗರು, ಗೋಪಿಕೆಯರು, ಗೋಪರು, ನಾರದ ಉದ್ಧವಾದಿಗಳು ಉಪಸ್ಥಿತರಾಗುವರು.

**ಸಹಾಯೋ ಜಾಯತೇ ಶೀಘ್ರಂ ಯತ್ರ ಗೀತಾ ಪ್ರವರ್ತತೇ ।**
**ಯತ್ರ ಗೀತಾವಿಚಾರಶ್ಚ ಪಠನಂ ಪಾಠನಂ ಶ್ರುತಂ ।**
**ತತ್ರಾಹಂ ನಿಶ್ಚಿತಂ ಪೃಥ್ವಿ ನಿವಸಾಮಿ ಸದೈವ ಹಿ ॥ 6 ॥**

ಭೂದೇವಿಯೇ, ಗೀತೆಯನ್ನು ಎಲ್ಲಿ ಓದುವರೋ, ಕೇಳುವರೋ, ಹೇಳುವರೋ, ವಿಚಾರ ಮಾಡುವರೋ – ಅಲ್ಲಿ ಸಹಾಯವು ಅತಿ ಶೀಘ್ರದಲ್ಲಿ ಪ್ರಾಪ್ತಿಯಾಗುವುದು.

**ಗೀತಾಶ್ರಯೇऽಹಂ ತಿಷ್ಠಾಮಿ ಗೀತಾ ಮೇ ಚೋತ್ತಮಂ ಗೃಹಂ ।**
**ಗೀತಾಜ್ಞಾನಮುಪಾಶ್ರಿತ್ಯ ತ್ರೀನ್ಲೋಕಾನ್ ಪಾಲಯಾಮ್ಯಹಮ್ ॥ 7 ॥**

ನಾನು ಗೀತೆಯನ್ನು 'ಆಶ್ರಯಿಸಿ' ಇರುತ್ತೇನೆ ಗೀತೆ ನನಗೆ ಉತ್ತಮ ಗೃಹ. ಗೀತಾಜ್ಞಾನ ಪ್ರಭಾವದಿಂದ ನಾನು ಮೂರು ಲೋಕಗಳನ್ನು ಪರಿಪಾಲಿಸುತ್ತೇನೆ.

**ಗೀತಾ ಮೇ ಪರಮಾ ವಿದ್ಯಾ ಬ್ರಹ್ಮರೂಪಾ ನ ಸಂಶಯಃ ।**
**ಅರ್ಧಮಾತ್ರಾऽಕ್ಷರಾ ನಿತ್ಯಾ ಸ್ವಾನಿರ್ವಾಚ್ಯಪದಾತ್ಮಿಕಾ ॥ 8 ॥**

ಬ್ರಹ್ಮ ಸ್ವರೂಪವೂ, ಪ್ರಣವ ಸ್ವರೂಪವೂ, ಅನಿರ್ವಾಚ್ಯವೂ, ಶಾಶ್ವತವೂ ಆದ ಗೀತೆಯು ಪರಮವಿದ್ಯೆಯೆಂದು ನನ್ನ ಅಭಿಪ್ರಾಯ.

**ಚಿದಾನಂದೇನ ಕೃಷ್ಣೇನ ಪ್ರೋಕ್ತಾ ಸ್ವಮುಖತೋಽರ್ಜುನಮ್ ।**
**ವೇದತ್ರಯೀ ಪರಾನಂದಾ ತತ್ತ್ವಾರ್ಥ ಜ್ಞಾನ ಸಂಯುತಾ ॥ 9 ॥**

ವೇದಸಾರವಾದ ಈ ತತ್ತ್ವಶಾಸ್ತ್ರವನ್ನು ಚಿದಾನಂದ ಘನನಾದ ಶ್ರೀ ಕೃಷ್ಣ ಭಗವಂತನು ಅರ್ಜುನನಿಗೆ ಸ್ವಯಂ ಬೋಧಿಸಿದನು.

**ಯೋಽಷ್ಟಾದಶ ಜಪೇ ನಿತ್ಯಂ ನರೋ ನಿಶ್ಚಲಮಾನಸಃ ।**
**ಜ್ಞಾನಸಿದ್ಧಿಂ ಸ ಲಭತೇ ತತೋ ಯಾತಿ ಪರಂ ಪದಮ್ ॥ 10 ॥**

ನಿಶ್ಚಲ ಚಿತ್ತದಿಂದ ಪ್ರತಿನಿತ್ಯ 18 ಅಧ್ಯಾಯಗಳ ಗೀತಾ ಪಾರಾಯಣ ಮಾಡಿ, ತತ್ವಗಳ ಆಚರಣೆ ಮಾಡುವವರು ಜ್ಞಾನಸಿದ್ಧಿಯನ್ನು ಪಡೆದು ಮೋಕ್ಷವನ್ನು ಪಡೆಯುವರು.

**ಪಾಠೇಽಸಮರ್ಥ ಸಂಪೂರ್ಣೇಽ ತತೋಽರ್ಧಂ ಪಾಠಮಾಚರೇತ್ ।**
**ತದಾ ಗೋದಾನಜಂ ಪುಣ್ಯಂ ಲಭತೇ ನಾತ್ರ ಸಂಶಯಃ ॥ 11 ॥**

ಪ್ರತಿನಿತ್ಯ 18 ಅಧ್ಯಾಯಗಳನ್ನು ಆಚರಣೆ ಮಾಡಲು ವಿಫಲರಾದವರು, ಅರ್ಧವನ್ನು ಅಂದರೆ 9 ಅಧ್ಯಾಯಗಳನ್ನು ಎರಡು ದಿನಗಳಲ್ಲಿ ಆಚರಿಸಿ ಗೋದಾನದ ಫಲವನ್ನು ಪಡೆಯುವರು.

**ತ್ರಿಭಾಗಂ ಪಠಮಾನಸ್ತು ಗಂಗಾಸ್ನಾನಫಲಂ ಲಭೇತ್ ।**
**ಷಡಂಶಂ ಜಪಮಾನಸ್ತು ಸೋಮಯಾಗಫಲಂ ಲಭೇತ್ ॥ 12 ॥**

ಗೀತೆಯ ಮೂರನೇ ಒಂದು ಭಾಗ ಅಂದರೆ ಆರು ಅಧ್ಯಾಯಗಳನ್ನು, ಮೂರು ದಿನಗಳಲ್ಲಿ ಗೀತೆಯ ಪಾರಾಯಣ ಮಾಡಿ, ತತ್ವಗಳನ್ನು ಆಚರಿಸುವವರಿಗೆ ಗಂಗಾಸ್ನಾನದ ಫಲ ಲಭಿಸುತ್ತದೆ. ಗೀತೆಯ ಆರನೇ ಒಂದು ಭಾಗ ಅಂದರೆ ಮೂರು ಅಧ್ಯಾಯಗಳನ್ನು ಆರು ದಿನಗಳಲ್ಲಿ ಆಚರಿಸಿದವರಿಗೆ ಸೋಮಯಾಗದ ಫಲವು ಲಭಿಸುತ್ತದೆ.

**ಏಕಾಧ್ಯಾಯಂ ತು ಯೋ ನಿತ್ಯಂ ಪಠತೇ ಭಕ್ತಿಸಂಯುತಃ ।**
**ರುದ್ರಲೋಕಮವಾಪ್ನೋತಿ ಗಣೋ ಭೂತ್ವಾ ವಸೇಚ್ಚಿರಮ್ ॥ 13 ॥**

ಗೀತೆಯ ಒಂದು ಅಧ್ಯಾಯವನ್ನು 18 ದಿನಗಳಲ್ಲಿ ನಿತ್ಯವೂ ಆಚರಿಸಿದವರು ರುದ್ರಗಣಗಳೊಂದಿಗೆ ರುದ್ರಲೋಕದಲ್ಲಿ ವಾಸ ಮಾಡುತ್ತಾರೆ.

**ಅಧ್ಯಾಯಂ ಶ್ಲೋಕಪಾದಂ ವಾ ನಿತ್ಯಂ ಯಃ ಪಠತೇ ನರಃ ।**
**ಸ ಯಾತಿ ನರತಾಂ ಯಾವನ್ಮನ್ವಂತರಂ ವಸುಂಧರೇ ॥ 14 ॥**

ಹೇ ವಸುಂಧರಾ ದೇವಿ, ಅಧ್ಯಾಯ ಶ್ಲೋಕಗಳ ಒಂದು ಚರಣವನ್ನೇ ಆಗಲಿ (2800 ದಿನಗಳು) ಪಾರಾಯಣ ಮಾಡಿ, ತತ್ವಗಳನ್ನು ಆಚರಿಸುವವರಿಗೆ ಮನ್ವಂತರ ಕಾಲ ಮನುಷ್ಯ ಜನ್ಮವನ್ನು ಪಡೆಯುವರು.

**ಗೀತಾಯಾಃ ಶ್ಲೋಕದಶಕಂ ಸಪ್ತ ಪಂಚ ಚತುಷ್ಟಯಮ್ ।**
**ದ್ವೌತ್ರೀನೇಕಂ ತದರ್ಧಂ ವಾ ಶ್ಲೋಕಾನಾಂ ಯಃ ಪಠೇನ್ನರಃ ॥ 15 ॥**

**ಚಂದ್ರಲೋಕಮವಾಪ್ನೋತಿ ವರ್ಷಾಣಾಮಯುತಂ ಧ್ರುವಮ್ ।**
**ಗೀತಾಪಾಠಸಮಾಯುಕ್ತೋ ಮೃತೋ ಮಾನುಷತಾಂ ವ್ರಜೇತ್ ॥ 16 ॥**

ಗೀತೆಯ 10 ಶ್ಲೋಕಗಳು (70 ದಿನಗಳಲ್ಲಿ), 7 ಶ್ಲೋಕಗಳು (100 ದಿನಗಳಲ್ಲಿ), 5 ಶ್ಲೋಕಗಳು (140 ದಿನಗಳಲ್ಲಿ), 4 ಶ್ಲೋಕಗಳು (175 ದಿನಗಳಲ್ಲಿ), 2 ಶ್ಲೂಕಗಳು (350 ದಿನಗಳಲ್ಲಿ), 3 ಶ್ಲೋಕಗಳು (234 ದಿನಗಳಲ್ಲಿ), 1 ಶ್ಲೋಕ (700 ದಿನಗಳಲ್ಲಿ) 1/2 ಶ್ಲೋಕ (1400 ದಿನಗಳಲ್ಲಿ) ವನ್ನಾದರೂ ಸಹ ಪ್ರತಿನಿತ್ಯ ಆಚರಣೆ ಮಾಡುತ್ತಾ ಮರಣ ಹೊಂದಿದವರು ದೈವತ್ವವನ್ನು ಪಡೆದು 10 ಸಾವಿರ ವರ್ಷಗಳ ಕಾಲ ಚಂದ್ರಲೋಕದಲ್ಲಿ ಇದ್ದು ಮತ್ತೆ ಮನುಷ್ಯರಾಗಿ ಜನಿಸಿ ಗೀತಾಪಾರಾಯಣಾಸಕ್ತರಾಗಿರುತ್ತಾರೆ.

**ಗೀತಾಭ್ಯಾಸಂ ಪುನಃ ಕೃತ್ವಾ ಲಭತೇ ಮುಕ್ತಿಮುತ್ತಮಾಮ್ ।**
**ಗೀತೇತ್ಯುಚ್ಚಾರಸಂಯುಕ್ತೋ ಮ್ರಿಯಮಾಣೋ ಗತಿಂ ಲಭೇತ್ ॥ 17 ॥**

ಹೆಚ್ಚೇಕೆ, ಗೀತೆಯನ್ನು ಅಭ್ಯಾಸ ಮಾಡುವವರಿಗೆ ಮುಕ್ತಿಯು ಕರತಲಾಮಲಕ. ಗೀತೆಯನ್ನು ಉಚ್ಚರಿಸುತ್ತಾ ಮರಣ ಹೊಂದಿದರೂ ಸದ್ಗತಿಯು ಲಭಿಸುತ್ತದೆ.

**ಗೀತಾರ್ಥಶ್ರವಣಾಸಕ್ತೋ ಮಹಾಪಾಪಯುತೋಽಪಿ ವಾ ।**
**ವೈಕುಂಠಂ ಸಮವಾಪ್ನೋತಿ ವಿಷ್ಣುನಾ ಸಹ ಮೋದತೇ ॥ 18 ॥**

ಗೀತಾಶ್ರವಣ ತತ್ಪರರು ಮಹಾಪಾಪಿಗಳಾದರೂ ವೈಕುಂಠವನ್ನು ಹೊಂದಿ ಮಹಾವಿಷ್ಣುವಿನ ಜೊತೆಯಲ್ಲಿ ಸುಖವನ್ನು ಅನುಭವಿಸುತ್ತಾರೆ.

**ಗೀತಾರ್ಥಂ ಧ್ಯಾಯತೇ ನಿತ್ಯಂ ಕೃತ್ವಾ ಕರ್ಮಾಣಿ ಭೂರಿಶಃ ।**
**ಜೀವನ್ಮುಕ್ತಃ ಸ ವಿಜ್ಞೇಯೋ ದೇಹಾಂತೇ ಪರಮಂ ಪದಮ್ ॥ 19 ॥**

ಗೀತೆಯ ಅರ್ಥವನ್ನು ಅನುಸಂಧಾನ ಮಾಡುವವರು ವಿವಿಧ ಸತ್ಕರ್ಮಗಳನ್ನು ಆಚರಿಸುವವರಾಗಿ ದೇಹಾಂತ್ಯದಲ್ಲಿ ಪರಮ ಪದವಿಯನ್ನು ಪಡೆಯುವರು. ಅಂತಹವರು ಜೀವನ್ಮುಕ್ತರು.

**ಗೀತಾಮಾಶ್ರಿತ್ಯ ಬಹವೋ ಭೂಭುಜೋ ಜನಕಾದಯಃ ।**
**ನಿರ್ಧೂತಕಲ್ಮಷಾ ಲೋಕೇ ಗೀತಾ ಯಾತಾಃ ಪರಂ ಪದಮ್** ॥ 20 ॥

ಜನಕಾದಿ ರಾಜರ್ಷಿಗಳು ಗೀತೆಯನ್ನು ಆಶ್ರಯಿಸಿ, ಪ್ರಖ್ಯಾತರಾಗಿ, ಪಾಪರಹಿತರಾಗಿ, ಪರಮ ಪದವಿಯನ್ನು ಪಡೆಯಲು ಸಮರ್ಥರಾದರು.

**ಗೀತಾಯಾಃ ಪಠನಂ ಕೃತ್ವಾ ಮಹಾತ್ಮ್ಯಂ ನೈವಯಃ ಪಠೇತ್ ।**
**ವೃಥಾ ಪಾಠೋ ಭವೇತ್ತಸ್ಯ ಶ್ರಮ ಏವ ಹ್ಯುದಾಹೃತಃ** ॥ 21 ॥

ಗೀತಾ ಪಾರಾಯಣವನ್ನು ಮಾಡಿ ಈ ಮಾಹಾತ್ಮೆಯನ್ನು ಪಠಿಸದಿದ್ದರೆ ಅವರ ಶ್ರಮವೆಲ್ಲ ವ್ಯರ್ಥ.

**ಏತನ್ಮಾಹಾತ್ಮ್ಯಸಂಯುಕ್ತಂ ಗೀತಾಭ್ಯಾಸಂ ಕರೋತಿ ಯಃ ।**
**ಸ ತತ್ಫಲಮವಾಪ್ನೋತಿ ದುರ್ಲಭಾಂ ಗತಿ ಮಾಪ್ನುಯಾತ್** ॥ 22 ॥

ಆದುದರಿಂದ ಈ ಮಹಾತ್ಮೆಯೊಂದಿಗೆ ಗೀತೆಯನ್ನು ಪಾರಾಯಣ ಮಾಡುವವರು ಮೇಲೆ ಹೇಳಿದ ಫಲಗಳನ್ನು ಪಡೆಯುವರು.

**ಸೂತ ಉವಾಚ:– ಮಾಹಾತ್ಮ್ಯಮೇತದ್ಗೀತಾಯಾಃ ಮಯಾ ಪ್ರೋಕ್ತಂ ಸನಾತನಮ್ ।**
**ಗೀತಾಂತೇ ಚ ಪಠೇದ್ಯಸ್ತು ಯದುಕ್ತುಂ ತತ್ಫಲಂ ಲಭೇತ್** ॥ 23 ॥

ಸೂತರು ಹೇಳಿದರು :– ಸನಾತನವಾದ ಈ ಗೀತಾ ಮಹಾತ್ಮೆಯನ್ನು ಗೀತಾ ಪಾರಾಯಣದ ಆನಂತರ ಪಠಿಸುವವರು ಯಥೋಕ್ತ ಫಲವನ್ನು ಪಡೆಯುವರು

**"ಇತಿ ಶ್ರೀವಾರಾಹಪುರಾಣೇ ಧರಾ ವಿಷ್ಣು ಪ್ರೋಕ್ತಂ ಶ್ರೀ ಗೀತಾ ಮಾಹಾತ್ಮ್ಯಂ ಸಮಾಪ್ತಂ"**

ಹೀಗೆ ಶ್ರೀ ವರಾಹ ಪುರಾಣದಲ್ಲಿರುವ, ಭೂಮಿಗೆ ವಿಷ್ಣುವಿನಿಂದ ಹೇಳಲ್ಪಟ್ಟ ಶ್ರೀ ಗೀತಾಮಹಾತ್ಮೆಯು ಸಮಾಪ್ತವಾಯಿತು.

॥ **ಶ್ರೀ ಕೃಷ್ಣ ಪರಬ್ರಹ್ಮಾರ್ಪಣಮಸ್ತು** ॥

# ನ್ಯಾಸ

ಇಡುವಿಕೆ, ಪ್ರತಿಷ್ಠೆ ಮಾಡುವಿಕೆ ಅಥವಾ ಭಾವಿಸುವಿಕೆ. 'ನ್ಯಾಸಸ್ತು ದೇವತಾತ್ಮತ್ವಾತ್ಸ್ವಾತ್ಮನೋ ದೇಹಕಲ್ಪನಾ' – ದೇಹದ ಜಡತ್ವವನ್ನು ನೀಗಿಸಿ ದಿವ್ಯತ್ವವನ್ನು ತುಂಬುವುದು. ಮಾಂಸಮಯ ಶರೀರವನ್ನು ಮಂತ್ರಮಯವನ್ನಾಗಿ ಮಾಡುವುದೇ ನ್ಯಾಸದ ಮುಖ್ಯ ಅಭಿಪ್ರಾಯ. ಅಂದರೆ ಆಯಾಯ ಸ್ಥಾನಗಳಲ್ಲಿ ನ್ಯಾಸ ಮಾಡುವಾಗ ಆಯಾಯ ಸ್ಥಾನಗಳು ಪವಿತ್ರವಾಗಲಿ, ಅಂದರೆ ಆಯಾಯ ಪವಿತ್ರತೆಯು ಪ್ರತಿಷ್ಠಿತವಾಗಲಿ ಎಂಬ ಸದ್ಭಾವ. ಹೀಗೆ ಮಾಡಿದಾಗ ನಮಗೆ ಪರಮಾತ್ಮನೊಂದಿಗೆ ಸಂಪರ್ಕವೇರ್ಪಡುತ್ತದೆ.

# ಗೀತಾ ನ್ಯಾಸ

**॥ ಓಂ ಶ್ರೀ ಪರಮಾತ್ಮನೇ ನಮಃ ॥**

## ಶ್ರೀಮದ್ಭಗವದ್ಗೀತೆಯ ವಿನಿಯೋಗ

**ವಿನಿಯೋಗ** – ಮಂತ್ರವನ್ನು ಒಂದು ವಿಶಿಷ್ಟ ಉದ್ದೇಶಕ್ಕಾಗಿ, ಒಂದು ವಿಶಿಷ್ಟ ಪದ್ಧತಿಯನ್ನನುಸರಿಸಿ ಪ್ರಯೋಗಿಸುವುದಕ್ಕೆ ವಿನಿಯೋಗವೆಂದು ಹೆಸರು.

**ಓಂ ಅಸ್ಯ ಶ್ರೀಮದ್ಭಗವದ್ಗೀತಾ ಮಾಲಾಮಂತ್ರಸ್ಯ ಭಗವಾನ್ವೇದವ್ಯಾಸ ಋಷಿಃ ।** (ಶಿರಸ್ಸಿನಲ್ಲಿ ನ್ಯಾಸ)

ಗೀತೆಯ ಮಹಾತ್ಮೆ, ಗೀತಾ ಧ್ಯಾನ, ಕರನ್ಯಾಸ, ಹೃದಯನ್ಯಾಸ, ಅರ್ಥ ಸಹಿತ 700 ಶ್ಲೋಕಗಳ (18 ಆಧ್ಯಾಯಗಳ) ಪಾರಾಯಣ ಮತ್ತು ಗೀತಾ ಆರತಿ. ಇವೆಲ್ಲವನ್ನು ಅರ್ಥಪೂರ್ಣವಾಗಿ ಮಾಡಿದಾಗ ಭಗವದ್ಗೀತೆಯೆಂಬ ಮಾಲೆಯನ್ನು ಅಕ್ಷರ ಬ್ರಹ್ಮನಿಗೆ ಸಮರ್ಪಿಸಿದಂತಾಗುತ್ತದೆ. ಈ ರೀತಿ ಮಾಡುವುದು ನಮಗೆ ಆ ಪರಮಾತ್ಮನು ಕ್ಷೇತ್ರವೆಂಬ ಈ ಶರೀರವನ್ನು ನೀಡಿರುವುದಕ್ಕೆ ಕೃತಜ್ಞತೆಯನ್ನು ತಿಳಿಸಲು. ಪ್ರತಿದಿನ ಈ ಭಗವದ್ಗೀತೆಯ ಮಾಲೆಯನ್ನು ನಾವು ಆ ದೇವರಿಗೆ ಸಮರ್ಪಿಸಬೇಕು. ಈ ಮಾಲೆಯನ್ನು ನಮಗೆ ನೀಡಿದವರು ವೇದವ್ಯಾಸ ಋಷಿಗಳು. ಮೊಟ್ಟ ಮೊದಲು ತತ್ತ್ವಸಾಕ್ಷಾತ್ಕಾರ ಪಡೆದಾತನೇ ಆ ಮಂತ್ರದ ಋಷಿ. ಆರಂಭದಲ್ಲಿ ಗೀತೆಯ ತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಂಡ ಋಷಿಗಳು ವೇದವ್ಯಾಸರು.

**ಅನುಷ್ಟುಪ್ ಛಂದಃ** 1 (ಮುಖ(ಬಾಯಿ)ದಲ್ಲಿ ನ್ಯಾಸ)

ಸಂಸ್ಕೃತ ವ್ಯಾಕರಣಾಂಶಗಳಲ್ಲಿ ಒಂದಾದ ಛಂದಸ್ಸು, ಅಲಂಕಾರಯುಕ್ತವಾದ ಮಂತ್ರಾಕ್ಷರ ಸಂಯೋಗ. ವಿವಿಧ ಪ್ರಕಾರಗಳಲ್ಲಿರುವ ಛಂದಸ್ಸಿನಲ್ಲಿ ಭಗವದ್ಗೀತೆಯ ಶ್ಲೋಕಗಳು ಅನುಷ್ಟುಪ್ ಛಂದಸ್ಸಿನಲ್ಲಿ ಬರೆಯಲಾಗಿದೆ. ಇದು ನಮಗೆ ಉಚ್ಚಾರಾಂಶಗಳನ್ನು ತಿಳಿಸುತ್ತವೆ. ನಮ್ಮ ಪ್ರಜ್ಞೆಯು ಆಜ್ಞಾಚಕ್ರದಲ್ಲಿರುವಾಗ ಭಗವದ್ಗೀತೆಯ ಶ್ಲೋಕಗಳು ನಮಗೆ ಅರ್ಥವಾಗುತ್ತವೆ. ಈ ಚಕ್ರವು ನಮ್ಮ ಭ್ರೂಮಧ್ಯೆಯಲ್ಲಿದ್ದು, ಆಧ್ಯಾತ್ಮಿಕತೆಯ ಕಣ್ಣಾಗಿದೆ (Third eye) ನಮ್ಮ ಅಂತಃಪ್ರಜ್ಞೆಯನ್ನು ಜಾಗೃತಗೊಳಿಸುವ ದ್ವಾರ.

**ಶ್ರೀ ಕೃಷ್ಣ ಪರಮಾತ್ಮ ದೇವತಾ ।** (ಹೃದಯದಲ್ಲಿ ನ್ಯಾಸ)

ಮಂತ್ರದಲ್ಲಿ ವರ್ಣಿತವಾದ ದಿವ್ಯಶಕ್ತಿಯೇ ದೇವತಾ । ಗೀತೆಗೆ ಶ್ರೀಕೃಷ್ಣನೇ ದಿವ್ಯ ಶಕ್ತಿ.

**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ**
**ಇತಿ ಬೀಜಮ್** ।

ಮಂತ್ರೋತ್ಪತ್ತಿಯ ಆದಿಕಾರಣವೇ ಬೀಜ. ಶ್ರೀ ಕೃಷ್ಣನ ಉಪದೇಶಕ್ರಮದ ಮೊದಲನೆಯ ಶ್ಲೋಕವಾದ 'ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೆ ... ' ಎಂಬುದು ಗೀತೆಗೆ ಬೀಜ ರೂಪವಾಗಿದೆ.
ಅರ್ಥ:– ನಾವು ಯಾರಿಗಾಗಿ ಶೋಕಿಸಬೇಕಿಲ್ಲವೋ ಅಂತಹವರಿಗಾಗಿ ಶೋಕಿಸುತ್ತೀಯೆ ಮತ್ತು ಪಂಡಿತರಂತೆ ಮಾತುಗಳನ್ನು ಆಡುತ್ತೀಯೆ (2.11)

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ**
**ಇತಿ ಶಕ್ತಿಃ** ।

ಮಂತ್ರಾಧಿದೇವತೆಯು ತನ್ನ ದಿವ್ಯ ಶಕ್ತಿಯಿಂದ ಸಾಧಕನನ್ನು ಆಕರ್ಷಿಸಿ ಶಕ್ತನನ್ನಾಗಿ ಮಾಡುತ್ತದೆ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಇದು ಗೀತೆಯ ಶಕ್ತಿ.
ಅರ್ಥ:– ಎಲ್ಲಾ ಧರ್ಮಗಳನ್ನು ಅರ್ಥಾತ್ ಸಂಪೂರ್ಣ ಕರ್ಮಗಳ ಆಶ್ರಯವನ್ನು ಪರಿತ್ಯಜಿಸಿ, ಏಕಮಾತ್ರ ಸಚ್ಚಿದಾನಂದಘನ ವಾಸುದೇವನಾದ ನನ್ನಲ್ಲಿಯೇ ಅನನ್ಯ ಶರಣಾಗತಿಯನ್ನು ಪಡೆದುಕೋ (18.66)

**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚ:**
**ಇತಿ ಕೀಲಕಂ ।**

ಇದುವರೆಗೂ ಉಪದೇಶ ಮಾಡಿದ ಎಲ್ಲಾ ತತ್ತ್ವಗಳು ಕಳಚಿ ಹೋಗದಂತೆ, ಸ್ಥಿರವಾಗಿ ನಿಲ್ಲುವಂತೆ, ಭಯ ಸಂಶಯಾದಿಗಳು ಇಲ್ಲದಂತೆ ಭದ್ರಪಡಿಸುವಿಕೆ. 'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ' ಈ ಉಪಸಂಹಾರ ಶ್ಲೋಕವು ಗೀತೆಗೆ ಕೀಲಕ.
ಅರ್ಥ :– ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಮುಕ್ತಗೊಳಿಸುವೆನು. ನೀನು ದುಃಖಿಸಬೇಡ (ಚಿಂತಿಸಬೇಡ) (18.66)
ಇದು ಭಗವದ್ಗೀತೆಗೆ ಆಧಾರವಾದ ಶ್ಲೋಕ

## ॥ ಅಥ ಕರನ್ಯಾಸಃ ॥

**ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ (2.23)**
**ಇತಿ ಅಂಗುಷ್ಠಾಭ್ಯಾಂ ನಮಃ**

ಅರ್ಥ : ಈ ಆತ್ಮವನ್ನು ಶಸ್ತ್ರಗಳು 'ಕತ್ತರಿಸಲಾರವು, ಬೆಂಕಿ ಸುಡಲಾರದು.
ನಮ್ಮ ಹೆಬ್ಬೆರಳುಗಳನ್ನು ಸೇರಿಸಬೇಕು

**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ (2.23)**
**ಇತಿ ತರ್ಜನೀಭ್ಯಾಂ ನಮಃ**

ಅರ್ಥ : ಈ ಆತ್ಮವನ್ನು ನೀರು ನೆನೆಯಿಸಲಾರದು ಮತ್ತು ಗಾಳಿ ಒಣಗಿಸಲಾರದು
ತೋರುಬೆರಳುಗಳನ್ನು ಸೇರಿಸಬೇಕು

**ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ (2.23)**
**ಇತಿ ಮಧ್ಯಮಾಭ್ಯಾಂ ನಮಃ**

ಅರ್ಥ: ಈ ಆತ್ಮವನ್ನು ಕತ್ತರಿಸಲಾಗದು, ದಹಿಸಲಾಗದು, ನೆನೆಯಿಸಲಾಗದು ಮತ್ತು ಒಣಗಿಸಲೂ ಸಹ ಆಗದು ಎಂಬುದು ನಿಸ್ಸಂದೇಹವಾಗಿದೆ
– ಮಧ್ಯದ ಬೆರಳುಗಳನ್ನು ಜೋಡಿಸಬೇಕು

**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ (2.24)**
**ಇತಿ ಅನಾಮಿಕಾಭ್ಯಾಂ ನಮಃ**

ಅರ್ಥ : ಈ ಆತ್ಮನು ಶಾಶ್ವತ, ಸರ್ವವ್ಯಾಪಿ, ಅಚಲ, ಸ್ಥಿರವಾಗಿರುವವನು ಮತ್ತು ಸನಾತನನು
– ಉಂಗುರದ ಬೆರಳುಗಳನ್ನು ಜೋಡಿಸಬೇಕು

**ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ (11.5)**
**ಇತಿ ಕನಿಷ್ಠಿಕಾಭ್ಯಾಂ ನಮಃ**

ಅರ್ಥ : ಎಲೈ ಪಾರ್ಥ ನನಗೆ ನೂರಾರು, ಸಾವಿರಾರು ರೂಪಗಳಿವೆ
– ಕಿರುಬೆರಳುಗಳನ್ನು ಜೋಡಿಸಬೇಕು

**ನಾನಾ ವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ (11.5)**
**ಇತಿ ಕರತಲಕರಪೃಷ್ಠಾಭ್ಯಾಂ ನಮಃ**

ಅರ್ಥ : ನಾನಾ ಪ್ರಕಾರಗಳ ನಾನಾ ವರ್ಣ ಹಾಗೂ ಆಕೃತಿಗಳುಳ್ಳ ಅಲೌಕಿಕವಾದ ರೂಪಗಳನ್ನು ದರ್ಶಿಸು
ನಮ್ಮ ಕೈಗಳನ್ನು ಎರಡೂ ಕಡೆ ತಿರುಗಿಸಬೇಕು

॥ **ಇತಿ ಕರನ್ಯಾಸಃ** ॥

॥ **ಅಥ ಹೃದಯಾದಿನ್ಯಾಸಃ** ॥

**ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ**
**ಇತಿ ಹೃದಯಾಯ ನಮಃ**
[ಹೃದಯದ ಮೇಲೆ ಕೈಯ್ಯನ್ನಿಟ್ಟು ಹೇಳಬೇಕು]

**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ**
**ಇತಿ ಶಿರಸೇ ಸ್ವಾಹಾ ।**
[ಶಿರಸ್ಸಿನ ಮೇಲೆ ಕೈಯ್ಯನ್ನಿಟ್ಟು ಹೇಳಬೇಕು]

**ಅಚ್ಛೇದ್ಯೋಽಯಮದಾಹ್ಯೋಽ ಯಮಕ್ಲೇದ್ಯೋಽ ಶೋಷ್ಯ ಏವ ಚ**
**ಇತಿ ಶಿಖಾಯೈ ವಷಟ್ ।**
[ತಲೆಯ ಹಿಂಭಾಗ (ಸುಳಿಯ ಹತ್ತಿರ) ನಮ್ಮ ಕೈಯ್ಯನ್ನಿಡಬೇಕು]

**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನ**
**ಇತಿ ಕವಚಾಯ ಹುಮ್ ।**
[ಎರಡು ಕೈಗಳನ್ನು ವಿರುದ್ಧವಾದ ಭುಜಗಳ ಮೇಲೆ ಇಡಬೇಕು]

**ಪಶ್ಯಮೇ ಪಾರ್ಥ ರೂಪಾಣಿ ಶತಶೋಥ ಸಹಸ್ರಶ**
**ಇತಿ ನೇತ್ರತ್ರಯಾಯ ವೌಷಟ್ ।**
[ಮೂರನೇ ಕಣ್ಣನ್ನು ಒಳಗೊಂಡಂತೆ ಎರಡೂ ಕಣ್ಣುಗಳ ಮೇಲೆ ಕೈಗಳನ್ನು ಇಡುವುದು]

**ನಾನಾವಿಧಾನಿ ದಿವ್ಯಾನಿ ನಾನಾ ವರ್ಣಾ ಕೃತೀನಿ ಚ**
**ಇತಿ ಅಸ್ತ್ರಾಯ ಫಟ್ ।**
[ಕೃಷ್ಣನ ಒಂದು ಅಸ್ತ್ರವನ್ನು ನೆನಪಿಸಿಕೊಳ್ಳುವುದು]

॥ **ಶ್ರೀ ಕೃಷ್ಣಪ್ರೀತ್ಯರ್ಥೇ ಪಾಠೇ ವಿನಿಯೋಗಃ** ॥

# ಗೀತಾ ಧ್ಯಾನ

**|| ಅಥ ಶ್ರೀಮದ್ಭಗವದ್ಗೀತಾ ಧ್ಯಾನಾದಿ ||**

**ಶ್ರೀ ಗಣೇಶಾಯ ನಮಃ ಶ್ರೀ ಗೋಪಾಲ ಕೃಷ್ಣಾಯ ನಮಃ**

**ಓಂ ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ**
**ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಂ ।**
**ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾಧ್ಯಾಯಿನೀಂ**
**ಅಂಬತ್ವಾಮನುಸಂದಧಾಮಿ ಭಗವದ್ಗೀತೇ ಭವದ್ವೇಷಿಣೀಂ ॥ 1 ॥**

ಸ್ವಯಂ ಭಗವಾನ್ ನಾರಾಯಣನಿಂದಲೇ ಅರ್ಜುನನಿಗೆ ಬೋಧಿಸಲ್ಪಟ್ಟ, ಮಹಾಭಾರತದ ಮಧ್ಯದಲ್ಲಿ ಸನಾತನ ವ್ಯಾಸ ಮಹರ್ಷಿಯಿಂದ ರಚಿಸಲ್ಪಟ್ಟ ಅದ್ವೈತದ ಅಮೃತವನ್ನು ಮಳೆಗರೆವ, ಹದಿನೆಂಟು ಅಧ್ಯಾಯಗಳಿಂದ ಕೂಡಿರುವ ಭಗವತಿಯೇ, ಪುನರ್ಜನ್ಮಗಳನ್ನು ದಾಟಿಸುವ ತಾಯಿ ಭಗವದ್ಗೀತೆಯೇ, ನಿನ್ನ ಅಧ್ಯಯನ ಮಾಡುವೆನು.

**ನಮೋಸ್ತು ತೇ ವ್ಯಾಸ ವಿಶಾಲಬುದ್ಧೇ ಫುಲ್ಲಾರವಿಂದಾಯತಪತ್ರನೇತ್ರ ಯೇನ ತ್ವಯಾ**
**ಭಾರತತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ ॥ 2 ॥**

ಅತ್ಯಂತ ಪ್ರಾಜ್ಞನಾದ, ಬುದ್ಧಿಶಾಲಿಯಾದ, ಗೀತೆಯೆಂಬ ಜ್ಞಾನದ ಜ್ಯೋತಿಯನ್ನು ಮಹಾಭಾರತವೆಂಬ ತೈಲದಿಂದ ಬೆಳಗಿಸಿರುವ, ಪೂರ್ಣವಿಕಸನಗೊಂಡ ಕಮಲದಳಗಳಂತಹ ಕಣ್ಣುಗಳುಳ್ಳ ವ್ಯಾಸರಿಗೆ ನಮಿಸುವೆನು.

**ಪ್ರಪನ್ನ ಪಾರಿಜಾತಾಯ ತೋತ್ರವೇತ್ರೈಕ ಪಾಣಯೇ ।**
**ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ ॥ 3 ॥**

ಶರಣಾಗತರಿಗೆ ಕಲ್ಪವೃಕ್ಷದಂತೆ ಬಯಸಿದ್ದನ್ನು ಕೊಡುವ, ಭಗವದ್ಗೀತೆಯ ಅಮೃತವನ್ನು ಹಾಲು ಕರೆದಂತೆ ಕರೆದಿರುವ ಕೃಷ್ಣನಿಗೆ ನಮಸ್ಕಾರಗಳು.

**ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್ ।**
**ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥ 4 ॥**

ವಸುದೇವನ ಮಗನಾದ, ಕಂಸ ಚಾಣೂರರನ್ನು ಮರ್ದಿಸಿದ, ದೇವಕಿಗೆ ಪರಮಾನಂದದಾಯಕನಾದ, ಸಮಸ್ತ ಜಗತ್ತಿಗೆ ಗುರುವಾದ ಕೃಷ್ಣನಿಗೆ ಪ್ರಣಾಮಗಳು.

**ಭೀಷ್ಮದ್ರೋಣತಟಾ ಜಯದ್ರಥಜಲಾ ಗಾಂಧಾರ ನೀಲೋತ್ಪಲಾ**
**ಶಲ್ಯಗ್ರಾಹವತೀ ಕೃಪೇಣ ವಹನೀ ಕರ್ಣೇನ ವೇಲಾಕುಲಾ ।**
**ಅಶ್ವತ್ಥಾಮವಿಕರ್ಣಘೋರಮಕರಾ ದುರ್ಯೋಧನಾವರ್ತಿನೀ**
**ಸೋತ್ತೀರ್ಣಾ ಖಲು ಪಾಂಡವೈ ರಣನದೀ ಕೈವರ್ತಕಃ ಕೇಶವಃ ॥ 5 ॥**

ಭೀಷ್ಮ ಮತ್ತು ದ್ರೋಣರೆಂಬ ನದಿತೀರಗಳಿರುವ, ಜಯದ್ರಥನೆಂಬ ಜಲವಿರುವ ಗಾಂಧಾರನೆಂಬ ನೀಲಿ ಕಮಲವಿರುವ, ಶಲ್ಯನೆಂಬ ಬೃಹತ್ ಮೀನಿರುವ, ಕೃಪನೆಂಬ ಪ್ರವಾಹವಿರುವ, ಕರ್ಣನೆಂಬ ದೊಡ್ಡ ಅಲೆಯಿರುವ, ಅಶ್ವಾತ್ಥಾಮ ಮತ್ತು ವಿಕರ್ಣರೆಂಬ ಮೊಸಳೆಗಳಿರುವ, ದುರ್ಯೋಧನನೆಂಬ ಸುಳಿಯಿರುವ, ಯುದ್ಧವೆಂಬ ನದಿಯನ್ನು ಪಾಂಡವರು, ಕೃಷ್ಣನೆಂಬ ಅಂಬಿಗನ ಕೃಪೆಯಿಂದ ಸಹಜವಾಗಿ ದಾಟಿದರು.

**ಪಾರಾಶರ್ಯವಚಃ ಸರೋಜಮಮಲಂ ಗೀತಾರ್ಥಗಂಧೋತ್ಕಟಂ**
**ನಾನಾಖ್ಯಾನಕಕೇಸರಂ ಹರಿಕಥಾ ಸಂಬೋಧನಾ ಬೋಧಿತಂ ।**
**ಲೋಕೇ ಸಜ್ಜನಷಟ್ಪದೈರಹರಹಃ ಪೇಪೀಯಮಾನಂ ಮುದಾ**
**ಭೂಯಾದ್ಭಾರತಪಂಕಜಂ ಕಲಿಮಲಪ್ರಧ್ವಂಸಿ ನಃ ಶ್ರೇಯಸೇ ॥ 6 ॥**

ಪರಾಶರನ ಮಗನಾದ ವ್ಯಾಸನ ವಚನಗಳೆಂಬ ಸರೋವರದಲ್ಲಿ ಹುಟ್ಟಿದ ಮಹಾಭಾರತವೆಂಬ ನಿರ್ಮಲವಾದ ಕಮಲವು ಅರ್ಥಗರ್ಭಿತವಾದ ಗೀತೆಯೆಂಬ ಸುಗಂಧದಿಂದ, ಅನೇಕ ವೃತ್ತಾಂತಗಳೆಂಬ ಪರಾಗ ಕೇಸರಿಯಿಂದ ಕೂಡಿ, ಹರಿಯ ಕಥೆಯ ಬೋಧನೆಯಿಂದ ವಿಕಸನಗೊಂಡು, ಪ್ರತಿನಿತ್ಯವೂ ಲೋಕದ ಸಜ್ಜನರೆಂಬ ದುಂಬಿಗಳಿಂದ ಸಂತೋಷವಾಗಿ ಹೀರಲ್ಪಟ್ಟು ಕಲಿಯುಗದ ಕಶ್ಮಲವನ್ನು ತೆಗೆದು ನಮಗೆ ಶ್ರೇಯಸ್ಸನ್ನು ಉಂಟು ಮಾಡಲಿ.

**ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ।**
**ಯತ್ಕೃಪಾ ತಮಹಂ ವಂದೇ ಪರಮಾನಂದಮಾಧವಂ ॥ 7 ॥**

ಯಾರ ದಯೆಯಿಂದ ಮೂಕನು ಮಾತನಾಡುವನೋ, ಕುಂಟನು ಪರ್ವತವನ್ನೇರುವನೋ, ಅಂತಹ ಪರಮಾನಂದದಾಯಕ ಮಾಧವನಿಗೆ ನನ್ನ ಪ್ರಣಾಮಗಳು

**ಗೀತಾಶಾಸ್ತ್ರಮಿದಂ ಪುಣ್ಯಂ ಯಃ ಪಠೇತ್ಪ್ರಯತಃ ಪುಮಾನ್ ।**
**ವಿಷ್ಣೋಃ ಪದಮವಾಪ್ನೋತಿ ಭಯಶೋಕಾದಿವರ್ಜಿತಃ ॥ 1 ॥**

ಭಗವದ್ಗೀತೆಯನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಪಾರಾಯಣ ಮಾಡುವವರು ಭಯ ಮತ್ತು ಶೋಕದಿಂದ ಮುಕ್ತರಾಗಿ ವಿಷ್ಣುವಿನ ವಾಸಸ್ಥಾನವಾದ ವೈಕುಂಠವನ್ನು ಹೊಂದುವ ಪುಣ್ಯವನ್ನು ಪಡೆಯುವರು.

**ಗೀತಾಧ್ಯಯನಶೀಲಸ್ಯ ಪ್ರಾಣಾಯಾಮಪರಸ್ಯ ಚ ।**
**ನೈವ ಸಂತಿ ಹಿ ಪಾಪಾನಿ ಪೂರ್ವಜನ್ಮ ಕೃತಾನಿ ಚ ॥ 2 ॥**

ಗಂಭೀರವಾಗಿ ಶ್ರದ್ಧೆಯಿಂದ ಯಾರು ಈ ಗೀತೆಯನ್ನು ಅಧ್ಯಯನ ಮಾಡುವರೋ, ಅಂತಹ ಮಾನವರಿಗೆ, ಆ ಭಗವಂತನ ಕೃಪೆಯಿಂದ ಹಿಂದಿನ ಜನ್ಮದ  ಪಾಪಗಳು (ಅವರ ಭಕ್ತಿಯ ಮೇಲೆ) ಯಾವುದೇ ಪರಿಣಾಮ ಬೀರುವುದಿಲ್ಲ.

**ಮಲನಿರ್ಮೋಚನಂ ಪುಂಸಾಂ ಜಲಸ್ನಾನಂ ದಿನೇ ದಿನೇ ।**
**ಸಕೃದ್ಗೀತಾಂಭಸಿ ಸ್ನಾನಂ ಸಂಸಾರ ಮಲನಾಶನಮ್ ॥ 3 ॥**

ಶಾರೀರಿಕ ಶೌಚಕ್ಕಾಗಿ ಪ್ರತಿದಿನವೂ ನೀರಿನಿಂದ ಸ್ನಾನ ಮಾಡುವಂತೆ, ಈ ಪ್ರಾಪಂಚಿಕ ವಿಷಯಗಳಿರುವ ಸಂಸಾರದ ಕಶ್ಮಲವನ್ನು ಹೋಗಲಾಡಿಸಲು ಭಗವದ್ಗೀತೆಯೆಂಬ ಗಂಗೆಯಲ್ಲಿ ಮೀಯಬೇಕು.

**ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರವಿಸ್ತರೈಃ ।**
**ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಃಸೃತಾ ॥ 4 ॥**

ಭಗವದ್ಗೀತೆಯು ಸ್ವಯಂ ಆ ಭಗವಂತನ ಮುಖಾರವಿಂದದ ಮೂಲಕವೇ ಹೇಳಲ್ಪಟ್ಟಿದೆ. ಎಲ್ಲಾ ಶಾಸ್ತ್ರಗ್ರಂಥಗಳನ್ನು ಈ ಕಲಿಯುಗದಲ್ಲಿ ಅಭ್ಯಾಸ ಮಾಡಲು ಸಾಧ್ಯವಿಲ್ಲವಾದುದರಿಂದ ಎಲ್ಲಾ ವೇದಗಳ ಸಾರವಾದ ಈ ಭಗವದ್ಗೀತೆಯನ್ನೇ ನಿಯಮಿತವಾಗಿ ಶ್ರದ್ಧೆ ಮತ್ತು ಭಕ್ತಿಯಿಂದ, ಶ್ರವಣ ಮತ್ತು ವಾಚನ ಮಾಡುವುದು ಅವಶ್ಯಕ ಕರ್ತವ್ಯವಾಗಿದೆ.

**ಭಾರತಾಮೃತಸರ್ವಸ್ವಂ ವಿಷ್ಣೋರ್ವಕ್ತ್ರಾದ್ವಿನಿಃಸೃತಂ ।**
**ಗೀತಾ ಗಂಗೋದಕಂ ಪೀತ್ವಾ ಪುನರ್ಜನ್ಮ ನ ವಿದ್ಯತೇ ॥ 5 ॥**

ಮಹಾಭಾರತದ ಸಾರವಾದ ಈ ಗೀತೆಯು ಪರಮಾತ್ಮನಾದ ವಿಷ್ಣುವಿನ ಮುಖಾರವಿಂದದಿಂದ ಹೊರಹೊಮ್ಮಿರುವುದು. ಯಾರು, ಈ ಗೀತೆಯನ್ನು ಶ್ರದ್ಧೆ ಮತ್ತು ಭಕ್ತಿಗಳಿಂದ ಪಾರಾಯಣ ಮಾಡಿ, ಗೀತೆಯೆಂಬ ಗಂಗೆಯನ್ನು ಕುಡಿಯುವರೋ, ಅವರ ಜನನ – ಮರಣ ಚಕ್ರಗಳು ಕೊನೆಗೊಂಡು, ಈ ಲೌಕಿಕ ಪ್ರಪಂಚದಲ್ಲಿ, ಪುನರ್ಜನ್ಮವನ್ನು ಪಡೆಯುವುದಿಲ್ಲ.

**ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।**
**ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥ 6 ॥**

ಎಲ್ಲಾ ಉಪನಿಷತ್ತುಗಳು ಗೋವುಗಳಾದರೆ, ಅವುಗಳ ಹಾಲು ಕರೆದವನೇ ಗೋಪಾಲಕ ಕೃಷ್ಣ, ಅರ್ಜುನನೇ ಕರುವು, ಶುದ್ಧ ಮನಸ್ಸಿನವರೇ ಕುಡಿಯುವವರು ಮತ್ತು ಭಗವದ್ಗೀತೆಯ ಅಮೃತವೇ ಹಾಲು.

**ಏಕಂ ಶಾಸ್ತ್ರಂ ದೇವಕೀಪುತ್ರಗೀತಮೇಕೋ ದೇವೋ ದೇವಕೀಪುತ್ರ ಏವ ।**
**ಏಕೋ ಮಂತ್ರಸ್ತಸ್ಯ ನಾಮಾನಿ ಯಾನಿ ಕರ್ಮಾಪ್ಯೇಕಂ ತಸ್ಯ ದೇವಸ್ಯ ಸೇವಾ ॥ 7 ॥**

ಇರುವುದೊಂದೇ ಶಾಸ್ತ್ರ – ದೇವಕೀ ಪುತ್ರನಾದ ಕೃಷ್ಣನು ಹಾಡಿರುವ ಗೀತಾಶಾಸ್ತ್ರ
ಇರುವನೊಬ್ಬನೇ ಪೂಜಾರ್ಹ ದೇವ – ದೇವಕೀ ಪುತ್ರ ಪರಮಾತ್ಮ ಕೃಷ್ಣ
ಇರುವುದೊಂದೇ ಮಂತ್ರ – ಆತನ ಪವಿತ್ರ ನಾಮಗಳು
ಇರುವುದೊಂದೇ ಕರ್ತವ್ಯ – ಪರಮಪೂಜ್ಯ ದೇವನಾದ ಶ್ರೀ ಕೃಷ್ಣ ದೇವರ ಸೇವೆ

**ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ**
**ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।**
**ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃಧ್ಯಾನಗಮ್ಯಂ**
**ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ ॥**

ಅತಿಶಯ ಶಾಂತಮೂರ್ತಿಯೇ, ಶೇಷಶಯನನೇ, ಪದ್ಮನಾಭನೇ, ದೇವಾದಿ ದೇವತೆಗಳ ಒಡೆಯನೇ, ಆಕಾಶಸದೃಶ ಸರ್ವತ್ರ ವ್ಯಾಪಕನೇ, ನೀಲಮೇಘಶ್ಯಾಮನೇ, ಅತಿಶಯ ಸರ್ವಾಂಗ ಸುಂದರನೇ, ಯೋಗಿಗಳ ಧ್ಯಾನಕ್ಕೆ ಒಲಿಯುವವನೇ, ಲೋಕಗಳ ಲೋಕನಾಥನೇ, ಜನನ – ಮರಣ ರೂಪೀ ಭಯನಾಶಕನೇ, ಶ್ರೀಲಕ್ಷ್ಮೀಪತಿಯೇ, ಕಮಲನಯನನಾದ ವಿಷ್ಣುವೇ, ಪರಮಾತ್ಮನೇ ನಿನಗೆ ನಾನು ಶಿರಸಾ ಪ್ರಣಾಮ ಮಾಡುತ್ತೇನೆ.

**ಯಂ ಬ್ರಹ್ಮಾ ವರುಣೇಂದ್ರ ರುದ್ರಮರುತಃ ಸ್ತುನ್ವಂತಿದಿವ್ಯೈಃ ಸ್ತವೈಃ**
**ವೇದೈಃ ಸಾಂಗಪದಕ್ರಮೋಪನಿಷದೈರ್ಗಾಯಂತಿ ಯಂ ಸಾಮಗಾಃ ।**
**ಧ್ಯಾನಾವಸ್ಥಿತ ತದ್ಗತೇನ ಮನಸಾ ಪಶ್ಯಂತಿ ಯಂ ಯೋಗಿನೋ**
**ಯಸ್ಯಾಂತಂ ನ ವಿದುಃ ಸುರಾಸುರಗಣಾ ದೇವಾಯ ತಸ್ಮೈ ನಮಃ ॥**

ಬ್ರಹ್ಮ, ವರುಣ, ಇಂದ್ರ, ರುದ್ರ ಮತ್ತು ಮರುದ್ಗಣಗಳು ದಿವ್ಯಸ್ತೋತ್ರಗಳ ಮೂಲಕ ನಿನ್ನನ್ನು ಸ್ತುತಿಸುತ್ತಾರೆ. ಸಾಮವೇದದ ಗಾಯಕರು ಅಂಗ, ಪದ, ಕ್ರಮ ಮತ್ತು ಉಪನಿಷತ್ತುಗಳ ಸಹಿತ ವೇದಗಳ ಮೂಲಕ ನಿನ್ನನ್ನು ಹಾಡುತ್ತಾರೆ. ಯೋಗಿಗಳು ಧ್ಯಾನದಲ್ಲಿ ತಲ್ಲೀನರಾಗಿ ಮನದಾಳದಲ್ಲಿ ನಿನ್ನ ದರ್ಶನ ಮಾಡುತ್ತಾರೆ. ದೇವತೆಗಳು ಮತ್ತು ಅಸುರರು ಯಾರೂ ಸಹ ನಿನ್ನ ಅಂತ್ಯವನ್ನು ಅರಿಯರು ಅಂತಹ ಪರಮ ಪುರುಷ ನಾರಾಯಣನೇ, ನಿನಗೆ ನನ್ನ ನಮಸ್ಕಾರಗಳು.

## ಗೀತಾ ಶ್ಲೋಕಗಳು (ಅರ್ಥ ಸಹಿತ)

ಗೀತಾ ಪ್ರೆಸ್‌ನಿಂದ ಪ್ರಕಾಶಿತವಾಗಿರುವಂತಹ ಶ್ರೀಮದ್ಭಗವದ್ಗೀತಾ ಪುಸ್ತಕದಲ್ಲಿ ಅಭ್ಯಾಸ ಮಾಡುವುದು

## ಕಡ್ಡಾಯ ಶ್ಲೋಕ

ಶ್ರೀಭಗವಾನುವಾಚ :– **ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ 6.35 ॥**

ಭಗವಂತನು ಹೇಳಿದನು – ಎಲೈ ಮಹಾಬಾಹು ! ಮನಸ್ಸು ಚಂಚಲ ಮತ್ತು ವಶವಾಗಲು ಅತಿ ಕಷ್ಟವಾಗಿದೆ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಕುಂತೀ ಪುತ್ರನೇ ಅದು ಅಭ್ಯಾಸದಿಂದ ಮತ್ತು ವೈರಾಗ್ಯದಿಂದ ವಶವಾಗುತ್ತದೆ.

## ಪ್ರಾಣಾಯಾಮ

ಯೋಗದ ಎಂಟು ಅಂಗಗಳಲ್ಲಿ ಪ್ರಾಣಾಯಾಮವು ಒಂದು. ಪ್ರಾಣ + ಆಯಾಮ = ಪ್ರಾಣಾಯಾಮ.

ಪ್ರಾಣಾಯಾಮ ಮಾಡಲು ಕುಳಿತುಕೊಳ್ಳುವಾಗ ನಮ್ಮ ಅಂತರಂಗ ಮತ್ತು ಬಹಿರಂಗ ಶುದ್ಧವಾಗಿರಬೇಕು. ನಾವು ಕುಳಿತುಕೊಳ್ಳುವ ಭಂಗಿ ನೇರವಾಗಿರಬೇಕು. ಒಂದೊಂದು ಉಸಿರಿಗೂ 'ಓಂ' ಎಂಬ ಪ್ರಣವಾಕ್ಷರವನ್ನು ಉಚ್ಚರಿಸಬೇಕು. ನಮ್ಮ ದೃಷ್ಟಿ ಭ್ರೂ ಮಧ್ಯೆ ನಾಸಿಕಾಗ್ರದಲ್ಲಿರಬೇಕು. ಕನಿಷ್ಠ 12 ಬಾರಿ ಈ ರೀತಿ ಮಾಡಬೇಕು.

## ಧ್ಯಾನ (ಗುರುಗಳಿಂದ ದೀಕ್ಷೆಯನ್ನು ಪಡೆಯುವುದು)

ಇಷ್ಟ ದೇವತಾ ಆಹ್ವಾನ, ಸ್ಥಾಪನೆ ಮತ್ತು ದೀಕ್ಷಾ ಮಂತ್ರ ಧ್ಯಾನ

ಇದೊಂದು ಸಂಯಮದ ಮಧ್ಯಾಂಗ, ಮಂತ್ರಾಧಿದೇವತೆಯ ಎಲ್ಲಾ ಶಾಸ್ತ್ರೋಕ್ತ ಸ್ವರೂಪಗಳನ್ನು ಭಾವನೆಯಲ್ಲಿ ಬಲವಾಗಿ ಮೂಡಿಸಿ ಚಿತ್ತದಲ್ಲಿ ಹಿಡಿದು ನಿಲ್ಲಿಸುವುದಕ್ಕೆ ಧ್ಯಾನವೆಂದು ಸಂಕ್ಷೇಪವಾಗಿ ಹೇಳಬಹುದು.

ಧ್ಯಾನ ಎಂದರೆ ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಪ್ರಾಣ, ಪ್ರಜ್ಞೆ ಎಲ್ಲವನ್ನೂ ಅಕ್ಷರ ಬ್ರಹ್ಮನಲ್ಲಿ ಯುಕ್ತವಾಗಿಸುವ ಪ್ರಕ್ರಿಯೆ.

## ಭಗವದರ್ಪಣೆ

**ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುಧ್ವಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।**
**ಕರೋಮಿ ಯದ್ಯತ್ ಸಕಲಂ ಪರಸ್ಮೈ ಪರಬ್ರಹ್ಮಣಾಯ ಸಮರ್ಪಯಾಮಿ ॥**

ನನ್ನ ಶರೀರದಿಂದ, ವಾಚಿಕದಿಂದ, ಮನಸ್ಸಿನಿಂದ, ಇಂದ್ರಿಯಗಳಿಂದ, ಬುದ್ಧಿಯಿಂದ ಮಾಡಿದ ಯಾವುದೇ ಕೆಲಸಗಳು ವೈಯಕ್ತಿಕ ಜ್ಞಾನದಿಂದಿರಬಹುದು ಅಥವಾ ಪ್ರಕೃತಿಯ ಸ್ವಭಾವದಿಂದಿರಬಹುದು – ಎಲ್ಲವನ್ನೂ ಪರಬ್ರಹ್ಮನಿಗೆ ಸಮರ್ಪಿಸುವೆನು.

**ಪ್ರಾಣಾಯ ಸ್ವಾಹಾ । ಅಪಾನಾಯ ಸ್ವಾಹಾ । ವ್ಯಾನಾಯ ಸ್ವಾಹಾ ।**
**ಉದಾನಾಯ ಸ್ವಾಹಾ । ಸಮಾನಾಯ ಸ್ವಾಹಾ । ಪರಬ್ರಹ್ಮಣೇ ಸ್ವಾಹಾ ॥**

ಪಂಚಭೂತಗಳಲ್ಲಿರುವ ಜೀವಿಗಳಿಗೆ ನೈವೇದ್ಯವನ್ನು ಸಮರ್ಪಿಸುವ ಪ್ರಕ್ರಿಯೆ.

ಪ್ರಾಣಾಯ – ಗಾಳಿ
ಅಪಾನಾಯ – ಭೂಮಿ
ವ್ಯಾನಾಯ – ಆಕಾಶ
ಉದಾನಾಯ – ನೀರು
ಸಮಾನಾಯ – ಬೆಂಕಿ

**॥ ಹರಿ ಓಂ ತತ್ ಸತ್ ॥**

ಹರಿ – ಯಾವುದೇ ರೂಪವನ್ನು ಧರಿಸುವ ಪರಮಾತ್ಮನನ್ನು ಕಾಣುವುದು
ಓಂ – ಪ್ರಣವ ಶಬ್ದ
ತತ್ – ಅಕ್ಷರ ಬ್ರಹ್ಮ
ಸತ್ – ಪರಮ ಸತ್ಯ

**ಓಂ ಶಾಂತಿಃ ಓಂ ಸ್ವಸ್ತಿಃ**

ಶಾಂತಿಯೆಂದರೆ ಆ ಪರಬ್ರಹ್ಮ. ಸ್ವಸ್ತಿಯೆಂದರೆ ಕಲ್ಯಾಣವಾಗಲಿ (ಲೋಕಾ ಸಮಸ್ತ ಸುಖಿನೋಭವಂತು)
ಆ ಪರಬ್ರಹ್ಮನು ಸರ್ವರಿಗೂ ಕಲ್ಯಾಣವನ್ನುಂಟುಮಾಡಲಿ.

## ಗೀತಾ ಜ್ಞಾನದ ಪ್ರಾಯೋಗಿಕತೆ

**'ವಸುಧೈವ ಕುಟುಂಬಕಂ'** – ಸೃಷ್ಟಿಯ ಸಮತೋಲನೆಯನ್ನು ಕಾಪಾಡುವುದು ಆದ್ಯ ಕರ್ತವ್ಯವಾಗಬೇಕು. ಅದುವೇ ಆ ಅಕ್ಷರ ಬ್ರಹ್ಮನಿಗೆ ನಾವು ತೋರಿಸುವ ಗೌರವ. ಈ ಸೃಷ್ಟಿಯೆಲ್ಲವೂ ವಾಸುದೇವನು ವಾಸಿಸುವ ಕುಟುಂಬ. ನಾವು ಪಡೆದುಕೊಂಡದ್ದನ್ನು ಕುಟುಂಬ ಸದಸ್ಯರೊಂದಿಗೆ ಹಂಚಿಕೊಳ್ಳುವುದು ನಮ್ಮ ಕರ್ತವ್ಯ.

# ಗೀತೆಯ ಭೂಮಿಕೆ

ಸಂಜಯನು, ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ನಡೆಯುವ ಎಲ್ಲಾ, ವಿಷಯಗಳನ್ನು ವೇದವ್ಯಾಸರಿಂದ (ಗೀತೆಯ ಕರ್ತೃ) ಪ್ರಸಾದಿತವಾದ ದಿವ್ಯದೃಷ್ಟಿಯ ಮೂಲಕ ಅಂಧನಾದ ಧೃತರಾಷ್ಟ್ರನಿಗೆ ನಿರೂಪಿಸುತ್ತಿರುವ ವ್ಯಾಖ್ಯಾನಕಾರ. ಅಧರ್ಮಿ ರಾಜನಾದ ಧೃತರಾಷ್ಟ್ರ ಮತ್ತು ಆತನ ಪುತ್ರನಾದ ದುರ್ಯೋಧನನ ದುರಾಸೆಯ ಕಾರಣದಿಂದ ಈ ಯುದ್ಧವು ಹಸ್ತಿನಾಪುರದ ಪಾಂಡುವಿನ ಪುತ್ರನಾದ ಯುದಿಷ್ಠಿರನ ರಾಜಸಿಂಹಾಸನದ ಹಕ್ಕಿಗಾಗಿ ನಡೆದಿತ್ತು. ಅರ್ಜುನ ಮತ್ತು ಕೃಷ್ಣ, ಇಬ್ಬರು ಸ್ನೇಹಿತರು. ಶ್ರೀ ಕೃಷ್ಣನು ಅಧರ್ಮವನ್ನು ನಾಶಮಾಡಿ ಧರ್ಮವನ್ನು ಸ್ಥಾಪಿಸಲು ಈ ಭೂಮಿಯಲ್ಲಿ ಅವತರಿಸಿದ್ದನು. ಶ್ರೀ ಕೃಷ್ಣನು ಆ ಪರಮಾತ್ಮನ ನಿಗೂಢವಾದ ಆಧ್ಯಾತ್ಮಿಕ ಶಕ್ತಿ ಮತ್ತು ಮಹಿಮೆಗಳುಳ್ಳವನು. ಕುರುಕ್ಷೇತ್ರ ಯುದ್ಧರಂಗವು ಕೃಷ್ಣನದ್ದಾಗಿರಲಿಲ್ಲ. ಅದು ಅರ್ಜುನನ ಯುದ್ಧರಂಗ.

ವಿಷಾದದಿಂದ ಇದ್ದ ಅರ್ಜುನನಿಗೆ ಶ್ರೀಕೃಷ್ಣನು, ತಾನು ಆತನ ರಥಕ್ಕೆ ಮಾತ್ರ ಸಾರಥಿಯಾಗಿರದೆ, ಆತನ ಜೀವನ ರಥಕ್ಕೆ ಸಾರಥಿಯಾಗುವನು. ಆತನಿಗೆ ಮಾರ್ಗದರ್ಶಕನಾಗಿ ನಿಂತು ಪ್ರೇರಕ ಶಕ್ತಿಯಾದನು. ಕೃಷ್ಣನಿಗೆ ಶರಣಾಗಿ ಅರ್ಜುನನು ಹಿಂದೆಂದೂ ಕೇಳಿರದ ಗಾಢವಾದ ಪ್ರಶ್ನೆಗಳನ್ನು ಕೇಳುವನು. ಈ ಲೌಕಿಕ ಪ್ರಪಂಚದಲ್ಲಿ ಪ್ರತಿನಿತ್ಯ ಗ್ರಹಿಸುವ ಸತ್ಯಕ್ಕಿಂತ ಆಳವಾದ ಸತ್ಯವನ್ನು ತಿಳಿಯಲಿಚ್ಛಿಸುತ್ತಾನೆ. ಕ್ರಿಯಾತ್ಮಕ ಜೀವನವೊಂದೇ ಸಾಲದು ಎಂದು ಭಾವಿಸಿ, ಜನನ – ಮರಣಗಳ ಬಗ್ಗೆ, ಆತ್ಮದ ಬಗ್ಗೆ ಅವ್ಯಾಹತವಾದ / ಸನಾತನವಾದ ಪ್ರಶ್ನೆಗಳನ್ನು ಕೇಳುವನು. ಅರ್ಜುನನಿಗೆ ಧರ್ಮಬೋಧನೆ ಮಾಡುವುದರ ಮುಖಾಂತರ ಶ್ರೀ ಕೃಷ್ಣನು ಸಮಸ್ತ ಮಾನವ ಕುಲಕ್ಕೆ ಉಪನಿಷತ್ತಿನ ಸಾರಸಂಗ್ರಹ ರೂಪವಾದ ಗೀತೆಯ ಮುಖಾಂತರ ಜೀವನ ತತ್ತ್ವಗಳನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪ್ರಚುರ ಪಡಿಸುವನು.

ಕೃಷ್ಣನು ಗೀತೆಯನ್ನು ಹೇಳಲು ಆರಂಭಿಸಿದಾಗ ನಾವು ಯುದ್ಧ ಭೂಮಿಯನ್ನು ಬಿಟ್ಟು ತತ್ತ್ವಶಾಸ್ತ್ರ ಮತ್ತು ಅತೀಂದ್ರಿಯವಾದ ದಿವ್ಯಜ್ಞಾನದಲ್ಲಿ ಪ್ರವೇಶಿಸುತ್ತೇವೆ.

ಕುರುಕ್ಷೇತ್ರದಲ್ಲಿ ಮಾಡಬೇಕಾಗಿರುವ ಯುದ್ಧವು ವೈಯಕ್ತಿಕವಾದುದಲ್ಲವೆಂದು, ಇದು ಧರ್ಮದ ಸ್ಥಾಪನೆಗಾಗಿ, ಧರ್ಮ ಮತ್ತು ಅಧರ್ಮದ ಮಧ್ಯೆ ನಡೆಯುವ ಯುದ್ಧವೆಂದು ಶ್ರೀಕೃಷ್ಣನು ಅರ್ಜುನನಿಗೆ ಮನವರಿಕೆ ಮಾಡಿಸುವನು. ಯುದ್ಧದ ದೃಷ್ಟಿಯಿಂದ ಯುದ್ಧ ಮಾಡದೇ, ಕರ್ತವ್ಯ ದೃಷ್ಟಿಯಿಂದ ಆಧ್ಯಾತ್ಮಿಕ ಹೋರಾಟವನ್ನು ನಡೆಸೆಂದು ಸಲಹೆ ನೀಡುವನು. ಈ ಹೋರಾಟವನ್ನು ನಡೆಸುವುದಕ್ಕೆ ಪೂರ್ವಭಾವಿಯಾಗಿ ಅರ್ಜುನನು ತನ್ನಲ್ಲೇ ಅಂತರಂಗದ ಹೋರಾಟವನ್ನು ನಡೆಸುವುದು ಅನಿವಾರ್ಯವಾಯಿತು. (ಸನಾತನ ಧರ್ಮವಾದ ಸಮಾಜ ಧರ್ಮವನ್ನು ಕಾಪಾಡಬೇಕಾದ ಸ್ವಧರ್ಮದ ಕರ್ತವ್ಯ ಮತ್ತು ವೈಯಕ್ತಿಕ ಸನಾತನ ಧರ್ಮ–ಇವುಗಳ ನಡುವೆ).

ನಿತ್ಯನಿರಂತರ ಹೋರಾಟ ನಡೆಸುತ್ತಿರುವ ಈ ಕಲಿಯುಗ ಪುರುಷರಿಗೆ ಗೀತೆಯ ಮಾರ್ಗದರ್ಶನ ಅತ್ಯಗತ್ಯವಾಗಿದೆ. ನಮ್ಮಲ್ಲಿರುವ ಪ್ರಬಲವಾದ ಸಾಮರ್ಥ್ಯವನ್ನು, ನಮ್ಮ ಕರ್ತವ್ಯ ನಿರ್ವಹಣೆಯಾದ ಆ ಭಗವಂತನ ಮತ್ತು ದುರ್ಬಲರ ನಿಸ್ವಾರ್ಥ ಸೇವೆಗೆಂದು ಬಳಸುವ ಆಯ್ಕೆಯನ್ನು ನಮಗೇ ಬಿಟ್ಟಿರುವನು. ಸಾಮಾನ್ಯ ಮನುಷ್ಯರಾದ ನಮಗೆ, ನಮ್ಮ ಕರ್ತವ್ಯದಲ್ಲಿ ಸಂದೇಹ ಮತ್ತು ಗೊಂದಲಗಳಿದ್ದರೆ, ಆ ಪರಮಾತ್ಮನಲ್ಲಿ ದಾರಿ ತೋರಿಸಲು ಪ್ರಾರ್ಥಿಸಬೇಕು. ನಾವು ಯಾವಾಗ ಧೈರ್ಯ ಮತ್ತು ಭರವಸೆಯನ್ನು ಕಳೆದುಕೊಂಡು ಆತ್ಮಸ್ಥೈರ್ಯ ಕುಂದಿ ಹತಾಶರಾಗುವೆವೋ ಆಗ ನಾವು ದೃಢತೆ ಮತ್ತು ಮುಂದಿನ ದಾರಿಗಾಗಿ ಆ ಪರಮಾತ್ಮನ ಮೊರೆ ಹೋಗಬೇಕು.

ಗೀತೆಯನ್ನು ಓದಿ, ಶ್ಲೋಕಗಳನ್ನು ಅರ್ಥಮಾಡಿಕೊಂಡು, ಅದರಲ್ಲಿ ಆ ಭಗವಂತನು ನೀಡಿರುವ ಸಂದೇಶವನ್ನು ಮನನ ಮಾಡಿ ಪಾಲಿಸಿದಾಗ ನಮ್ಮ ನಡೆ ಆ ಪರಮಾತ್ಮನೆಡೆಗೆ ಇರುತ್ತದೆ.

# ಗೀತೆಯ ಅಧ್ಯಾಯಗಳ ಸಾರಂಶ

## ಅಧ್ಯಾಯ – 1

### ಅರ್ಜುನ ವಿಷಾದ ಯೋಗಃ

ವಿಷಾದ ಎಂದರೆ ದುಃಖ, ಜುಗುಪ್ಸೆ, ಖಿನ್ನತೆ ಅಥವಾ ಚಿಂತೆ. ಈ ಅಧ್ಯಾಯದಲ್ಲಿ ನಾವು ಅರ್ಜುನನ ವಿಷಾದಕ್ಕೆ ಕಾರಣವನ್ನು ತಿಳಿಯಬಹುದು.

ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ನಿರೂಪಿಸುತ್ತಿರುವ ಸಂಜಯನಲ್ಲಿ, ಅಂಧನಾದ ಧೃತರಾಷ್ಟ್ರನು ಕೇಳುವ ಅಜ್ಞಾನದ ಪ್ರಶ್ನೆಯೊಂದಿಗೆ ಈ ಅಧ್ಯಾಯವು ಆರಂಭವಾಗುತ್ತದೆ.

ಕುರುಕ್ಷೇತ್ರ ಯುದ್ಧದಲ್ಲಿ ಉಭಯ ಸೈನ್ಯಗಳಲ್ಲಿಯೂ ಅತಿರಥ – ಮಹಾರಥರು ಭಾಗವಹಿಸಿದ್ದರು. ಯುದ್ಧಾಪೇಕ್ಷಿಗಳಾಗಿ ಎರಡೂ ಸೈನ್ಯದವರು ಎದುರಾದಾಗ, ಯುದ್ಧಾರಂಭಕ್ಕೆ ಮೊದಲು ತನ್ನ ರಥವನ್ನು ಎರಡೂ ಸೈನ್ಯಗಳ ಮಧ್ಯೆ ನಿಲ್ಲಿಸುವಂತೆ ಅರ್ಜುನನು ಶ್ರೀ ಕೃಷ್ಣನಿಗೆ ಹೇಳುವನು. ವಿಷಾದವೆಂದರೆ, ತನ್ನ ಮಾರ್ಗದರ್ಶಕರಾದ ಮತ್ತು ಏಳಿಗೆಗೆ ಕಾರಣರಾದ ಭೀಷ್ಮ–ದ್ರೋಣರು, ಗುರು–ಹಿರಿಯರು, ಸೋದರ ಸಂಬಂಧಿಗಳು, ಸ್ನೇಹಿತರು ಎಲ್ಲರೂ ಎದುರಾಳಿಗಳ ಸೈನ್ಯದಲ್ಲಿದ್ದರು. ಇದನ್ನು ನೋಡಿದ ಗಾಂಡೀವಧಾರಿ ಅರ್ಜುನನು ಆತ್ಮಸ್ಥೈರ್ಯವನ್ನು ಕಳೆದುಕೊಂಡು, ಈ ಯುದ್ಧವನ್ನು ಮಾಡಿದರೆ ಕುಲಧರ್ಮಕ್ಕೆ ಪೆಟ್ಟುಬಿದ್ದು ವರ್ಣಸಂಕರಕ್ಕೆ ಕಾರಣನಾಗುವೆನೆಂದು ಖಿನ್ನನಾಗಿ ವಿಷಾದವನ್ನು ಹೊಂದಿ ಯುದ್ಧದಿಂದ ವಿಮುಖತೆಯನ್ನು ಹೊಂದುತ್ತಾನೆ. ಅವನ ಈ ವಿಷಾದವೇ ಯೋಗವಾಗಿ ಪರಿಣಮಿಸಿ, ಭಗವಂತನ ಧರ್ಮಬೋಧನೆಯ ಅಂಕುರಕ್ಕೆ ಕಾರಣವಾಗುತ್ತದೆ.

ಈ ಅಧ್ಯಾಯದ ಆರಂಭದ ಶ್ಲೋಕ

**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।**
**ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥**

ಈ ಶ್ಲೋಕವು ಗೂಡಾರ್ಥಗಳನ್ನು ಒಳಗೊಂಡಿದೆ. ಇಲ್ಲಿ ಅಂಧನಾದ ಅಜ್ಞಾನಿ ಧೃತರಾಷ್ಟ್ರನು ಜ್ಞಾನಿಯಾದ ಸಂಜಯನನ್ನು ಪ್ರಶ್ನಿಸುತ್ತಿರುವನು. ಈ ಶ್ಲೋಕದ ಅರ್ಥ–ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಾಪೇಕ್ಷಿಗಳಾಗಿ ನೆರೆದಿರುವ ನನ್ನ ಮತ್ತು ಪಾಂಡುವಿನ ಪುತ್ರರು ಏನು ಮಾಡಿದರು? ಇದು ಲಿಖಿತವಾದ ಅರ್ಥ. ಈ ಕಲಿಯುಗದಲ್ಲಿ ಪ್ರತಿಯೊಬ್ಬರೂ ತಮಗೆ ತಾವೇ ಇದನ್ನು ಅನ್ವಯಿಸಿಕೊಳ್ಳಬಹುದು. ನಮ್ಮ ದೇಹವು ಒಂದು ಧರ್ಮಕ್ಷೇತ್ರ. ಇಲ್ಲಿ ನಿತ್ಯ ನಿರಂತರ ನಮ್ಮ ಭಾವನೆಗಳಲ್ಲಿಯೇ ಪಾಂಡವರನ್ನು ಪ್ರತಿನಿಧಿಸುವ ಧರ್ಮಕ್ಕೂ, ಕೌರವರನ್ನು ಪ್ರತಿನಿಧಿಸುವ ಅಧರ್ಮಕ್ಕೂ ಯುದ್ಧ ನಡೆಯುತ್ತಲೇ ಇರುತ್ತದೆ. ಪಾಂಡವರು ಸಾರ್ವತ್ರಿಕತೆಯನ್ನು, ಸದ್ಗುಣಗಳನ್ನು, ಪರಮಾತ್ಮನ ಆಶ್ರಿತರನ್ನು ಪ್ರತಿನಿಧಿಸಿದರೆ, ಕೌರವರು ಸ್ವಾರ್ಥ, ಐಹಿಕ ಪ್ರಪಂಚ, ರಾಕ್ಷಸತ್ವ, ದುರ್ಗುಣಗಳನ್ನು ಪ್ರತಿನಿಧಿಸುವರು. ಅಂತಹ ಸಂದರ್ಭದಲ್ಲಿ ನಾವು ಜ್ಞಾನದ ಮೊರೆ ಹೋಗಬೇಕು. ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅವರವರ ಸಂದರ್ಭಕ್ಕೆ ಅನುಸಾರವಾಗಿ ಯಾವುದಾದರೊಂದು ಗೊಂದಲ ಅಥವಾ ಸಮಸ್ಯೆಯನ್ನು ಎದುರಿಸುತ್ತಿರುತ್ತಾರೆ. ನಾವು ಸಂಪೂರ್ಣಜ್ಞಾನ ಸ್ವರೂಪವಾದ ಭಗವದ್ಗೀತೆಯನ್ನು ಪರಿಶೀಲಿಸಿದಾಗ, ಅವುಗಳಿಗೆ ಪರಿಹಾರ ದೊರೆತು ನಮ್ಮ ಗೊಂದಲ/ಸಮಸ್ಯೆಗಳು ಬಗೆಹರಿಯುವವು.

ಅರ್ಜುನನ ಸಮಸ್ಯೆ ಮತ್ತು ಗೊಂದಲಗಳ ಸುರಿಮಳೆಯೇ ಈ ಮೊದಲನೆಯ ಅಧ್ಯಾಯ. ಮುಂದಿನ ಹದಿನೇಳು ಅಧ್ಯಾಯಗಳು ಆತನ ಸಮಸ್ಯೆಗಳಿಗೆ ಭಗವಂತನು ನೀಡುವ ಉತ್ತರ ರೂಪದಲ್ಲಿವೆ.

# ಅಧ್ಯಾಯ – 2
## ಸಾಂಖ್ಯ ಯೋಗಃ

ಸಾಂಖ್ಯವೆಂದರೆ ಜೀವನ ತತ್ತ್ವಗಳು/ವಿವೇಕ ಜ್ಞಾನ. ಈ ಅಧ್ಯಾಯವು ಭಗವದ್ಗೀತೆಯ ಮುಂದಿನ ಹದಿನಾರು ಅಧ್ಯಾಯಗಳ ಒಂದು ಸಂಕ್ಷಿಪ್ತ ರೂಪ.

ಯುದ್ಧದಿಂದ ವಿಮುಖತೆಯನ್ನು ಹೊಂದಿದ ಅರ್ಜುನನು ಯುದ್ಧ ಮಾಡುವುದಿಲ್ಲ ಎಂದು ಕೈಚೆಲ್ಲಿ ಕುಳಿತಾಗ, ಆತನನ್ನು ಹತಾಶೆಯಿಂದ ಹೊರತಂದು ಆತ್ಮಸಾಕ್ಷಾತ್ಕಾರ ಮಾಡಿಸುವ ಕೆಲಸ ಶ್ರೀ ಕೃಷ್ಣನದ್ದಾಗುತ್ತದೆ. ಅರ್ಜುನನ ಮನಃಸ್ಥಿತಿಯನ್ನು ಅರ್ಥ ಮಾಡಿಕೊಂಡ ಶ್ರೀ ಕೃಷ್ಣನು, ಜ್ಞಾನದ ಮುಖಾಂತರ ಅರ್ಜುನನನ್ನು ಸಹಜಸ್ಥಿತಿಗೆ ತರಬೇಕೆಂದು, ಆತನಿಗೆ ಆತ್ಮಜ್ಞಾನ, ಸ್ವಧರ್ಮಾಚರಣೆ, ನಿಷ್ಕಾಮ ಕರ್ಮ, ಸ್ಥಿತಪ್ರಜ್ಞತೆಯ ಬಗ್ಗೆ ವಿವರಿಸಿ ಸಮತ್ವದಿಂದ ಕಾರ್ಯಮಗ್ನನಾಗುವಂತೆ ಸೂಚಿಸುವನು.

ಕಳಂಕರಹಿತನಾದ ಅರ್ಜುನನು ಕ್ರಿಯಾಶೀಲನು, ಕೆಚ್ಚೆದೆಯವನು, ಉದಾತ್ತನು, ಬುದ್ಧಿವಂತನು, ಚಾಣಾಕ್ಷನು ಮತ್ತು ವಸ್ತುಸ್ಥಿತಿಯ ಬಗ್ಗೆ ತಿಳುವಳಿಕೆಯಿರುವವನು. ಅಂತಹ ಅರ್ಜುನನು ಗುರು–ಹಿರಿಯರನ್ನು, ಬಂಧು–ಮಿತ್ರರನ್ನು ಎದುರಾಳಿಗಳಲ್ಲಿ ನೋಡಿದಾಗ, ಮೋಹಕ್ಕೊಳಗಾಗಿ, ಧರ್ಮದ ಬಗ್ಗೆ ಗೊಂದಲಕ್ಕೀಡಾಗುವನು. ಆಗ ಆತನು ಶ್ರೀಕೃಷ್ಣನಲ್ಲಿ ಶರಣಾಗತಿಯನ್ನು ಹೊಂದಿ, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಗೊಂದಲವನ್ನು ನಿವಾರಿಸಬೇಕೆಂದು ಪ್ರಾರ್ಥಿಸುವನು ಶಿಷ್ಯನಿಗೆ ಮೂಲಭೂತವಾದ ಅಗತ್ಯ ಶರಣಾಗತಿ. ಅರ್ಜುನನು ಶ್ರೀ ಕೃಷ್ಣನಿಗೆ ಸಂಪೂರ್ಣ ಶರಣಾಗತನಾಗಿ ಶಿಷ್ಯತ್ವವನ್ನು ಪಡೆದನು. ಅಕ್ಷರ ಬ್ರಹ್ಮನ ಸಗುಣ ರೂಪನಾದ ಶ್ರೀ ಕೃಷ್ಣನನ್ನು ಗುರುವನ್ನಾಗಿ ಪಡೆದ ಅರ್ಜುನನೇ ಧನ್ಯನು.

ಮೊದಲನೆಯದಾಗಿ ಶ್ರೀಕೃಷ್ಣನು ಆತ್ಮತತ್ವವನ್ನು ಹೇಳುವುದರ ಮುಖಾಂತರ ಆಧ್ಯಾತ್ಮಿಕವಾಗಿ ಅರ್ಜುನನ ಗೊಂದಲವನ್ನು ನಿವಾರಿಸುವನು. ಆತ್ಮವು ಶಾಶ್ವತ ಮತ್ತು ಅಮರ ಎಂಬ ವಿಷಯವನ್ನು ವೇದಜ್ಞಾನವಿರುವ ಅರ್ಜುನನಿಗೆ ನೆನಪಿಸುವನು. ಕಾಲದ ಮತ್ತು ಮೃತ್ಯುವಿನ ಅವಧಿಗೆ ಒಳಪಡದ, ಪುನರ್ಜನ್ಮವಿರುವ ಜೀವಾತ್ಮದ ಬಗ್ಗೆ ವಿವರಿಸುವನು.

**ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾಭವಿತಾವಾನ ಭೂಯಃ ।**
**ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ ॥**

ಆತ್ಮದ ನಿತ್ಯತೆಯನ್ನು ಮತ್ತು ಶರೀರದ ಅನಿತ್ಯತೆಯನ್ನು ಬಿಡಿಸಿ ಹೇಳಿ, ವಸ್ತ್ರಗಳನ್ನು ಬದಲಾಯಿಸುವಂತೆ ಆತ್ಮವು ಶರೀರವನ್ನು ಬದಲಾಯಿಸುತ್ತದೆಯಾದ್ದರಿಂದ, ಈ ಶರೀರಕ್ಕಾಗಿ ದುಃಖಿಸುವುದು ಸರಿಯಲ್ಲವೆಂದು ಹೇಳುವನು. ದ್ವಂದ್ವವನ್ನು ಗೆದ್ದವನೇ ಇದನ್ನು ಅರ್ಥಮಾಡಿಕೊಳ್ಳಬಲ್ಲವನಾದ್ದರಿಂದ, ನೀನು ನಿರ್ದ್ವಂದ್ವನಾಗೆಂದು ಹೇಳುವನು.

ನಂತರ ಶ್ರೀ ಕೃಷ್ಣನು ಲೌಕಿಕ ಜ್ಞಾನದ ಬಗ್ಗೆ ವಿವರಿಸುತ್ತ, ಸ್ವಧರ್ಮವನ್ನು ಕುರಿತು ಹೇಳುವನು. ಅರ್ಜುನನು ಕ್ಷತ್ರಿಯನಾದ್ದರಿಂದ ಸಮಾಜರಕ್ಷಣೆಗಾಗಿ ಯುದ್ಧ ಮಾಡುವುದು ಆತನ ಸ್ವಧರ್ಮವಾಗುತ್ತದೆ. ಧರ್ಮಬದ್ಧವಾದ ಯುದ್ಧವನ್ನು ಮಾಡದಿದ್ದರೆ, ಕೀರ್ತಿಯನ್ನು ಕಳೆದುಕೊಂಡು ಧರ್ಮಭ್ರಷ್ಟತೆಯನ್ನು ಹೊಂದುವನೆಂದು ಹೇಳಿ, ಅದು ಮರಣಕ್ಕಿಂತಲೂ ಘೋರವಾದುದೆಂದು ಹೇಳುವನು. ಕ್ಷತ್ರಿಯನು ತನ್ನ ಸ್ವಧರ್ಮಾಚರಣೆಯಾದ ಯುದ್ಧದಲ್ಲಿ ಮರಣ ಹೊಂದಿದರೆ ವೀರಸ್ವರ್ಗ, ಗೆದ್ದರೆ ರಾಜ್ಯಪ್ರಾಪ್ತಿ, ಇದು ಲೌಕಿಕ ಜ್ಞಾನ.

ಈ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ದೃಷ್ಟಿಯಿಂದ ಅರ್ಜುನನ ದ್ವಂದ್ವವನ್ನು ನಿವಾರಿಸಿದ ಶ್ರೀಕೃಷ್ಣನು, ಈ ಯುದ್ಧದ ಅನಿವಾರ್ಯತೆಯನ್ನು ಹೇಳಿ, ಈ ಕರ್ಮಬಂಧನದಿಂದ ಹೊರಬರುವ ನಿಷ್ಕಾಮಕರ್ಮ ಮಾರ್ಗದ ತತ್ತ್ವವನ್ನು ಮತ್ತು ಅದರ ಮಹತ್ವವನ್ನು ತಿಳಿಸುತ್ತಾನೆ. **'ಯೋಗಃ ಕರ್ಮಸು ಕೌಶಲಮ್'** ಎಂದು ಹೇಳುವ ಮುಖಾಂತರ ಇಲ್ಲಿ ಶ್ರೀ ಕೃಷ್ಣನು ಪ್ರಕೃತಿಯ ಗುಣಸ್ವಭಾವಗಳಿಗೆ ಹೊರತಾಗಿ ನಿಪುಣತೆಯಿಂದ ಮಾಡಬೇಕಾದ ಕರ್ಮ ಮತ್ತು ಯೋಗ ಸಿದ್ಧಾಂತವನ್ನು ಹೇಳುವನು. ಬೈರಾಗಿಯಂತೆ ಪ್ರಪಂಚವನ್ನು ತೊರೆಯದೆ, ಜ್ಞಾನ ಪೂರ್ವಕವಾಗಿ ಕ್ರಿಯಾಶೀಲತೆಯನ್ನು ಹೊಂದಿ ಕಾರ್ಯತತ್ಪರನಾಗಲು ಪ್ರೇರೇಪಿಸುವನು.

ಗೀತೆಯು ಪ್ರಾಪಂಚಿಕ ಜೀವನದ ಸುಖವನ್ನು ಹೇಳುವುದಿಲ್ಲ. ಬದಲಾಗಿ ಈ ಪ್ರಾಪಂಚಿಕ ಜೀವನದಲ್ಲಿ ಇರಬೇಕಾದ ನಿರ್ಮೋಹವನ್ನು ತಿಳಿಸುತ್ತದೆ. ಧರ್ಮಗ್ರಂಥಗಳ ಆಧಾರದ ಮೇಲೆ ಜ್ಞಾನೋದಯವನ್ನು ಕಲಿಸದೆ ನೇರವಾಗಿ ಅತೀಂದ್ರಿಯವಾದ ಅನುಭವವನ್ನು ನೀಡುವುದು.

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**

**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥**

ಕರ್ಮಗಳನ್ನು ಮಾಡುವುದರಲ್ಲಿ ಮನುಷ್ಯರಿಗೆ ಅಧಿಕಾರ ಇರುತ್ತದೆಯೇ ಹೊರತು, ಕರ್ಮಫಲಗಳ ಮೇಲಿರುವುದಿಲ್ಲ. ಕರ್ಮಗಳನ್ನು ಮಾಡುವಾಗ ಬುದ್ಧಿಯೋಗವನ್ನು ಅನ್ವಯಿಸಿದರೆ ಕರ್ಮಬಂಧನದಿಂದ ಬಿಡುಗಡೆ ಹೊಂದುವರೆಂದು, ಅಂತಹ ಜ್ಞಾನಿಗಳು ಜನ್ಮ ಬಂಧನದಿಂದ ಮುಕ್ತರಾಗಿ ನಿರ್ವಿಕಾರ ಪರಮಪದವನ್ನು ಹೊಂದುವರೆಂದು ಹೇಳುವನು.

ಮೋಹವೆಂಬ ಮಾಯೆಯನ್ನು ದಾಟಿದಾಗ, ಪುರುಷನಿಗೆ ತಾನು ಆತ್ಮನು, ನಾಶವಾಗುವ ಶರೀರವಲ್ಲ ಎಂಬ ವೈರಾಗ್ಯವು ಸಿದ್ಧಿಸುತ್ತದೆ. ವಿಚಲಿತಗೊಳ್ಳದ ಮನಸ್ಸು ಪರಮಾತ್ಮನಲ್ಲಿ ಸ್ಥಿರವಾದಾಗ, ಯೋಗವು ಸಿದ್ಧಿಸುವುದೆಂದು ಶ್ರೀಕೃಷ್ಣನು ಹೇಳಿದಾಗ, ಅರ್ಜುನನು ಅಂತಹ ಸ್ಥಿರವಾದ ಅಚಲ ಮನಸ್ಸುಳ್ಳ ಯೋಗಿಯು ಹೇಗಿರುವನೆಂದು ಪ್ರಶ್ನಿಸುವನು.

ಆಗ ಶ್ರೀಕೃಷ್ಣನು ಅರ್ಜುನನಿಗೆ ಸ್ಥಿತಪ್ರಜ್ಞನ ಬಗ್ಗೆ ಹೇಳುವನು. ಸ್ಥಿತ್ರಪ್ರಜ್ಞನು ನಿತ್ಯ ಜೀವನದಲ್ಲಿ ತನ್ನ ಬುದ್ಧಿವಂತಿಕೆಯಿಂದ ಆಧ್ಯಾತ್ಮಿಕ ನೆಲೆಯನ್ನು ಸ್ಥಿರಗೊಳಿಸಿಕೊಂಡಿರುತ್ತಾನೆ. ಮೋಹವಿಲ್ಲದೆ ಸಮಚಿತ್ತತೆಯಿಂದ ಕೂಡಿದ ಸ್ಥಿತಪ್ರಜ್ಞನಿಗೆ ತಾನು ನಾಶವಾಗುವ ಶರೀರವಲ್ಲ, ಶಾಶ್ವತವಾದ ಮತ್ತು ಎಲ್ಲರಲ್ಲೂ ಇರುವ ಆತ್ಮವೆಂಬ ಅರಿವು ಇರುತ್ತದೆ. ಆತನು ತನ್ನ ಇಂದ್ರಿಯ, ಮನಸ್ಸು, ಅಹಂಕಾರಗಳನ್ನು ಸಾವಿನ ಸಮಯದಲ್ಲೂ ಸಹ ವಶದಲ್ಲಿಟ್ಟುಕೊಳ್ಳುವ ಪ್ರಾವೀಣ್ಯತೆಯನ್ನು ಹೊಂದಿ ಪರಮಶಾಂತಿಯನ್ನು ಪಡೆಯುವನು. ಇದು ಬ್ರಹ್ಮವನ್ನು ಪಡೆದುಕೊಂಡ ಪುರುಷನ ಸ್ಥಿತಿಯಾಗಿದೆ.

ಹೀಗೆ ಅರ್ಜುನನು ಸ್ವಧರ್ಮ ಆಚರಣೆಯಾದ ಯುದ್ಧವನ್ನು ಮಾಡುವಾಗ ಸಮತ್ವ ಬುದ್ಧಿಯೋಗದಿಂದ ಕೂಡಿ ಸ್ಥಿತಪ್ರಜ್ಞನಾಗಿ ತನ್ನ ಕಾರ್ಯಾಚರಣೆಯನ್ನು ಜ್ಞಾನದಿಂದ ಮಾಡಿದರೆ, ಆತನು ಕರ್ಮಬಂಧನದಿಂದ ಮುಕ್ತನಾಗುವನೆಂದು ಹೇಳಿ ಶ್ರೀ ಕೃಷ್ಣನು ಉತ್ತಮ ಮಾರ್ಗದರ್ಶನವನ್ನು ಕೊಡುವನು.

# ಅಧ್ಯಾಯ – 3

## ಕರ್ಮ ಯೋಗಃ

ಶಾಸ್ತ್ರವಿಧಿತ ಕರ್ತವ್ಯ ಕರ್ಮಗಳನ್ನು ನಿಷ್ಕಾಮದಿಂದ, ಅನಾಸಕ್ತಿಯಿಂದ ಫಲಗಳ ಅಪೇಕ್ಷೆಯಿಲ್ಲದೆ ಸಮತ್ವ ಬುದ್ಧಿಯಿಂದ ಭಗವದರ್ಥ ಕರ್ಮಗಳನ್ನು ಮಾಡುವುದೇ ಕರ್ಮಯೋಗ.

ಶ್ರೀ ಕೃಷ್ಣನು ಅರ್ಜುನನಿಗೆ ಮಾರ್ಗದರ್ಶನವನ್ನು ಮಾಡುತ್ತಾ ಜ್ಞಾನದ ಶ್ರೇಷ್ಠತೆಯನ್ನು ಹೇಳಿ, ಕರ್ಮ ಮಾರ್ಗವನ್ನು ಸೂಚಿಸುವನು. ಆಗ ಅರ್ಜುನನಿಗೆ ದ್ವಂದ್ವ ಉಂಟಾಗುತ್ತದೆ. ಜ್ಞಾನವೇ ಶ್ರೇಷ್ಠವೆಂದ ಮೇಲೆ ಯುದ್ಧವೆಂಬ ಕರ್ಮವನ್ನು ಮಾಡಲು ಪ್ರೇರೇಪಿಸಲು ಕಾರಣವೇನೆಂದು ಕೇಳುವನು. ಜ್ಞಾನಿಗಳಂತೆ ಸಂನ್ಯಾಸ ಯೋಗವನ್ನು ಏತಕ್ಕಾಗಿ ಆಶ್ರಯಿಸಬಾರದು ಎಂಬುದು ಅರ್ಜುನನ ಪ್ರಶ್ನೆ. ಅದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಕರ್ಮಯೋಗದ ಶ್ರೇಷ್ಠತೆಯನ್ನು ಕುರಿತು ಹೇಳುವನು.

ಮನುಷ್ಯನು ಕರ್ಮಗಳನ್ನು ಮಾಡದೆ ನಿಷ್ಕಾಮತೆಯನ್ನು, ಅಂದರೆ ಯೋಗನಿಷ್ಠೆಯನ್ನು ಪಡೆಯಲಾರನು ಮತ್ತು ಕೇವಲ ಕರ್ಮತ್ಯಾಗ ಮಾಡುವುದರಿಂದ ಸಾಂಖ್ಯನಿಷ್ಠೆಯನ್ನು ಪಡೆಯುವುದಿಲ್ಲ. ಕರ್ಮ ಬಂಧನದಿಂದ ಹೊರಬರುವುದೆಂದರೆ ಕರ್ಮಗಳನ್ನು ತ್ಯಾಗ ಮಾಡುವುದಲ್ಲ, ಬದಲಾಗಿ ಮಾಡಬೇಕಾದ ಶಾಸ್ತ್ರವಿಧಿತ ಕರ್ತವ್ಯ ಕರ್ಮಗಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ನಿಷ್ಕಾಮದಿಂದ ಭಗವದರ್ಪಣಾ ಬುದ್ಧಿಯಿಂದ ಮಾಡುವುದು. ಇದೇ ನಿಷ್ಕಾಮಕರ್ಮ. ಈ ರೀತಿ ಮಾಡಿದಾಗ ಆಗಾಮಿ ಕರ್ಮಗಳು ಕ್ಷಯಿಸಿ, ಸಾಧನೆಯ ಹಾದಿ ತೆರೆದುಕೊಳ್ಳುತ್ತದೆ. ಸಕಾಮ ಕರ್ಮಗಳು ಮನುಷ್ಯನನ್ನು ಬಂಧಿಸುವಂತೆ ಮಾಡಿದರೆ, ನಿಷ್ಕಾಮ ಕರ್ಮಗಳು ಆತನನ್ನು ವಿಮೋಚನೆಯತ್ತ ಕೊಂಡೊಯ್ಯುತ್ತವೆ.

ಬ್ರಹ್ಮನು ಜೀವಿಗಳನ್ನು ಸೃಷ್ಟಿಸಿದಾಗಲೇ ಯಜ್ಞರೂಪೀ ಕರ್ಮಗಳನ್ನು ಸೃಷ್ಟಿಸಿರುವನು. ಆದರೆ ಸಾಮಾನ್ಯ ಜನರು ಯಜ್ಞರೂಪೀ ಕರ್ಮಗಳನ್ನಲ್ಲದೆ ಇತರ ಕರ್ಮಗಳಿಂದ ಬಂಧಿತರಾಗಿರುವರು. ಯಾರು ಯಜ್ಞರೂಪಿ ಕರ್ಮಗಳನ್ನು ಮಾಡದೇ ಇರುವರೋ, ಮಾಡಿದರೂ ಸಹ ಯಜ್ಞ ಫಲಗಳನ್ನು ಹಂಚದೆ ತಮ್ಮ ಹಿತಕ್ಕಾಗಿಯೇ ಅದನ್ನು ಬಳಸುವರೋ, ಅವರು ಕಳ್ಳರೇ ಸರಿ ಎಂದೂ ಸಹ ಹೇಳುವನು. ಶರೀರ ನಿರ್ವಹಣೆ ಮಾಡಲು ಕರ್ಮದ ಅವಶ್ಯಕತೆಯಿದೆ ಎಂದು ತಿಳಿಸಿ, ನಿಷ್ಕಾಮ ಕರ್ಮಗಳಲ್ಲದೆ ಸಾಧನೆಯ ಹಾದಿಗೆ ಅನ್ಯಮಾರ್ಗವಿಲ್ಲ ಎಂದು ಹೇಳಿ ಅರ್ಜುನನಿಗೆ ಆಸಕ್ತಿರಹಿತನಾಗಿ ಯಜ್ಞದ ನಿಮಿತ್ತವಾಗಿಯೇ ಕರ್ತವ್ಯ ಕರ್ಮಗಳನ್ನು ಮಾಡಲು ನಿರ್ದೇಶಿಸುವನು. ಯಾವ ರೀತಿ ಜ್ಞಾನೀ ಪುರುಷನು ಗುಣವಿಭಾಗ ಮತ್ತು ಕರ್ಮವಿಭಾಗಗಳ ತತ್ತ್ವವನ್ನು ಅರಿತು, ಪರಮಾತ್ಮನಲ್ಲಿ ಸ್ಥಿರವಾಗಿದ್ದು, ತಾನು ಮಾಡುವ

ಸ್ವಧರ್ಮಾಚರಣೆಯ ಕರ್ಮಗಳಲ್ಲಿ ಆಸಕ್ತಿರಹಿತನಾಗಿರುತ್ತಾನೆಯೋ, ಅದೇ ರೀತಿ ನೀನೂ ಸಹ ನಿನ್ನ ಸ್ವಧರ್ಮಾಚರಣೆಯಾದ ಯುದ್ಧವನ್ನು ಅನಾಸಕ್ತಿಯಿಂದ ಮಾಡು ಎಂದು ಶ್ರೀಕೃಷ್ಣನು ಅರ್ಜುನನಿಗೆ ತಿಳಿಸುವನು. ಏಕೆಂದರೆ ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಗುಣರಹಿತವಾದ ಸ್ವಧರ್ಮವು ಉತ್ತಮ ಎಂದು ತಿಳಿಯಪಡಿಸುವನು.

ಶ್ರೀಕೃಷ್ಣನು ಅರ್ಜುನನಿಗೆ ಸೃಷ್ಟಿ ಚಕ್ರವನ್ನು ವಿವರಿಸಿ ಹೇಳುವನು. ಪರಮೇಶ್ವರನಿಂದ ಸೃಷ್ಟಿಗೊಳಗಾದ ಪ್ರಾಣಿಗಳ ಉತ್ಪನ್ನ ಅನ್ನದಿಂದ, ಅನ್ನವು ಮಳೆಯಿಂದ, ಮಳೆಯು ಯಜ್ಞಗಳಿಂದ, ಯಜ್ಞಗಳು ವಿಹಿತವಾದ ಕರ್ಮಗಳಿಂದ. ಕರ್ಮಗಳು ವೇದಗಳಿಂದ, ವೇದಗಳು ಆ ಪರಮಾತ್ಮನಿಂದ. ಈ ರೀತಿಯಾದ ಸೃಷ್ಟಿಚಕ್ರದಲ್ಲಿ ಆ ಪರಮಾತ್ಮನ ನಿಯಮದ ಪ್ರಕಾರ ನಾವು ಬಾಳಿದಾಗ, ಈ ಪ್ರಪಂಚವನ್ನು ಆನಂದಿಸಲು ಸಾಧ್ಯ. ಈ ಜ್ಞಾನವಿಲ್ಲದೆ ಸ್ವಾರ್ಥ ಜೀವನ ನಡೆಸುವವನು ಆಧ್ಯಾತ್ಮಿಕ ನೆಲೆಯಲ್ಲಿ ಸೋಲುವನು. ಈ ಜ್ಞಾನವನ್ನು ಪಡೆದವನು ಜ್ಞಾನೋದಯವನ್ನು ಹೊಂದಿ ಆಧ್ಯಾತ್ಮಿಕವಾಗಿ ಮುನ್ನಡೆಯುವನು.

ಜನಕ ಮಹಾರಾಜರನ್ನು ಉದಾಹರಿಸುವ ಮೂಲಕ ಹೇಗೆ ಕರ್ಮಯೋಗದ ಮೂಲಕ ಪರಮಸಿದ್ಧಿಯನ್ನು ಪಡೆಯಬಹುದೆಂದು ಶ್ರೀಕೃಷ್ಣನು ಹೇಳುವನು. ತನ್ನನ್ನೇ ಉದಾಹರಿಸಿಕೊಂಡ ಶ್ರೀ ಕೃಷ್ಣನು, ಯಾವುದೇ ಕರ್ಮಗಳನ್ನು ಮಾಡುವ ಅವಶ್ಯಕತೆಯಿಲ್ಲದಿದ್ದರೂ ಸಹ, ತಾನು ವಿಹಿತ ಕರ್ಮಗಳನ್ನು ಮಾಡುವುದರ ಮುಖಾಂತರ ಮೂಢಜನರನ್ನು ಸರಿಯಾದ ಮಾರ್ಗಕ್ಕೆ ಕರೆತರಲು ಕರ್ಮಾಚರಣೆಗಳನ್ನು ಮಾಡುತ್ತಿರುವುದಾಗಿ ಹೇಳುವನು. ಇದೇ ರೀತಿ ಜ್ಞಾನಿಗಳೂ ಸಹ ಲೋಕಹಿತಕ್ಕಾಗಿ ಕರ್ಮಗಳನ್ನು ಮಾಡುತ್ತಾರೆ ಎಂಬ ಕರ್ಮಸಿದ್ಧಾಂತದ ಮರ್ಮವನ್ನು ತಿಳಿಸುವನು.

ಶ್ರೀಕೃಷ್ಣನು ಹೇಳುವನು, ರಜೋಗುಣದಿಂದ ಬರುವ ಈ ಕಾಮವು ನಮ್ಮ ಇಂದ್ರಿಯ, ಮನಸ್ಸು ಮತ್ತು ಬುದ್ಧಿಯಲ್ಲಿ ನೆಲೆಸಿರುತ್ತದೆ. ಜ್ಞಾನ ವಿಜ್ಞಾನಗಳನ್ನು ನಾಶಪಡಿಸುವ ಈ ಕಾಮವನ್ನು ಇಂದ್ರಿಯಗಳ ವಶದಿಂದ ಗೆಲ್ಲಬೇಕು. ದೇಹಕ್ಕಿಂತ ಇಂದ್ರಿಯಗಳು ಶ್ರೇಷ್ಠ. ಇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಆತ್ಮವು ಶ್ರೇಷ್ಠ ಎಂದು ಹೇಳುವನು.

**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥**

ನಾವು ಶ್ರೇಷ್ಠವಾದ ಆತ್ಮವನ್ನು ಅರಿತುಕೊಂಡು, ಬುದ್ಧಿಯ ಮೂಲಕ ಮನಸ್ಸನ್ನು ವಶಪಡಿಸಿಕೊಂಡು ಕಾಮರೂಪಿ ದುರ್ಜಯವಾದ ಶತ್ರುವನ್ನು ಸಂಹರಿಸಬೇಕು.

# ಅಧ್ಯಾಯ – 4

## ಜ್ಞಾನ ಕರ್ಮ ಸಂನ್ಯಾಸ ಯೋಗಃ

ಕರ್ಮಗಳು ಮತ್ತು ಅವುಗಳ ಸಂನ್ಯಾಸದ ಬಗ್ಗೆ ಜ್ಞಾನವನ್ನು ನೀಡುವುದೇ ಜ್ಞಾನ ಕರ್ಮ ಸಂನ್ಯಾಸ ಯೋಗ. ಕರ್ಮಗಳು ಸಂನ್ಯಾಸವಾಗಬೇಕಾದರೆ, ಕರ್ಮಗಳನ್ನು ಯಜ್ಞರೂಪದಿಂದ ಮಾಡಬೇಕು. ಯಾವುದೇ ಅಪೇಕ್ಷೆ ಇಲ್ಲದೆ, ಕರ್ತೃತ್ವವನ್ನು ತ್ಯಜಿಸಿ ಈ ಸೃಷ್ಟಿಯನ್ನು ಸಂರಕ್ಷಿಸುವ ಕ್ರಿಯೆಯೇ ಯಜ್ಞ, ಇದುವೇ ನಾವು ದೇವರಿಗೆ ತೋರಿಸುವ ಪ್ರೀತಿ ಮತ್ತು ಭಕ್ತಿ.

ಈ ಅಧ್ಯಾಯವು ಕೃಷ್ಣನು ತಾನು ಯಾರೆಂದು ತಿಳಿಸುವುದರ ಮುಖಾಂತರ ಆರಂಭವಾಗುತ್ತದೆ. ಅರ್ಜುನನು, ದುಷ್ಕರವಾದ ಯುದ್ಧಭೂಮಿಯಲ್ಲಿ ಇದ್ದುದರಿಂದ, ಆತನ ಪ್ರಜ್ಞೆಯು ಕುಂಠಿತಗೊಂಡು ಗೊಂದಲದಲ್ಲಿರುತ್ತದೆ. ಆದುದರಿಂದ ಶ್ರೀಕೃಷ್ಣನು, ಅರ್ಜುನನಿಗೆ ವೇದಜ್ಞಾನವನ್ನು ಸ್ಮರಣೆಗೆ ತರಬೇಕೆಂದುಕೊಂಡನು. ವೇದಜ್ಞಾನದ ಪರಂಪರೆಯನ್ನು ತಿಳಿಸಿ, ಅದರ ಉಪ್ಪತ್ತಿಯನ್ನು ಹೇಳುವನು. ಅವರಿಬ್ಬರ ಅನೇಕ ಜನ್ಮಗಳು ಹಾದುಹೋಗಿರುವುದಾಗಿ ತಿಳಿಸಿ, ತನ್ನ ದಿವ್ಯವಾದ ಅವತಾರವು ಯೋಗಮಾಯೆಯಿಂದ ಕೂಡಿರುವುದಾಗಿ ಹೇಳುವನು.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

ಧರ್ಮದ ಹಾನಿ ಮತ್ತು ಅಧರ್ಮದ ವೃದ್ಧಿಯಾದಾಗ, ಜಗತ್ತಿನ ಉದ್ಧಾರಕ್ಕಾಗಿ; ದುಷ್ಟರನ್ನು ವಿನಾಶ ಮಾಡಿ, ಶಿಷ್ಟರನ್ನು ರಕ್ಷಿಸಿ ಧರ್ಮವನ್ನು ಸ್ಥಾಪಿಸಲು ಪರಮಾತ್ಮನು ಸಾಕಾರ ರೂಪದಿಂದ ಜನರ ಮುಂದೆ ಪ್ರಕಟನಾಗವನು. ಆತನು ಸಹೃದಯ ಪ್ರೇಮಿ ಮತ್ತು ಪತಿತಪಾವನ.

ಇಂತಹ ಪರಮಾತ್ಮನನ್ನು ಉಪಾಸಿಸುವ ಭಕ್ತರು ಜ್ಞಾನರೂಪಿ ತಪಸ್ಸಿನಿಂದ ಪವಿತ್ರರಾಗಿ, ಜೀವನ್ಮುಕ್ತರಾಗಿ ಆತನನ್ನೇ ಹೊಂದುವರು. ಇತರ ದೇವತೆಗಳ ಉಪಾಸನೆಯನ್ನು ಮಾಡುವವರು ಲೌಕಿಕವಾದ ಫಲಗಳನ್ನು ಪಡೆದು ಪುನರ್ಜನ್ಮ ಪಡೆಯುವರು.

ಇಲ್ಲಿ ಕೃಷ್ಣನು ಕರ್ಮ, ಅಕರ್ಮ, ವಿಕರ್ಮಗಳ ಬಗ್ಗೆ ಹೇಳಿ; ಮುಮುಕ್ಷುಗಳು ಮಾಡುವ ಕರ್ಮಗಳ ದಿವ್ಯತೆಯನ್ನು ಹೇಳುವನು. ಅರ್ಜುನನನ್ನು ಅದೇ ಹಾದಿಯಲ್ಲಿ ನಡೆಯುವಂತೆ ತಿಳಿಸುವನು. ಸ್ವತಃ ಆ ಭಗವಂತನು ನಾಲ್ಕು ವರ್ಣಾಶ್ರಮಗಳನ್ನು ರಚಿಸಿದರೂ, ಅದರ ಕರ್ತೃತ್ವ ಆತನದಲ್ಲವೆಂದು ಹೇಳಿ ಆತನ ಕರ್ಮವನ್ನೇ ಉದಾಹರಿಸಿಕೊಂಡಿರುವನು. ಇದನ್ನು ತತ್ತ್ವತಃ ಅರ್ಥ ಮಾಡಿಕೊಂಡವರು, ಕರ್ಮ ಬಂಧನದಿಂದ ಬಿಡುಗಡೆ ಪಡೆಯುವರು. ಅದೃಷ್ಟ–ದುರಾದೃಷ್ಟದ ಬಗ್ಗೆ ಆಸಕ್ತಿಯಿಂದಿರದೆ, ಪ್ರಾಮಾಣಿಕವಾಗಿ ಕಾರ್ಯಮಗ್ನನಾಗುವಂತೆ ಹೇಳಿ, ಜ್ಞಾನಿ ಪುರುಷನ ಲಕ್ಷಣಗಳನ್ನು ತಿಳಿಸುವನು.

ಯಾವ ಪುರುಷನು ಕರ್ಮದಲ್ಲಿ ಅಕರ್ಮವನ್ನು ಹಾಗು ಅಕರ್ಮದಲ್ಲಿ ಕರ್ಮವನ್ನು ನೋಡುವನೋ ಅವನೇ ಬುದ್ಧಿವಂತ. ಅಂತಹ ಪುರುಷನು ಸರ್ವಕರ್ಮಗಳನ್ನು ಮಾಡುವವನಾಗಿದ್ದಾನೆ ಎಂದು ಜ್ಞಾನಿಗಳು ಹೇಳುವರು.

ಜ್ಞಾನಿಯಾದ ಯೋಗಿಯು ತನಗೆ ದೊರೆತದ್ದರಲ್ಲೇ ಸಂತುಷ್ಟನಾಗಿ ದ್ವಂದ್ವಗಳಿಗೆ ಅತೀತನಾಗಿರುತ್ತಾನೆ. ಸಮಭಾವದಿಂದ ಪರಮಾತ್ಮನಲ್ಲಿ ನಿತ್ಯತೃಪ್ತನಾಗಿ ಸರ್ವಕರ್ಮಗಳ ಫಲಗಳ ಆಸಕ್ತಿಯನ್ನು ತ್ಯಜಿಸಿರುತ್ತನಾದ್ದರಿಂದ ಆತನ ಕರ್ಮಗಳೆಲ್ಲವೂ ಅಕರ್ಮಗಳಾಗಿ ಹೋಗುತ್ತವೆ.

ಜ್ಞಾನಿಯಾದ ಯೋಗಿಯು ದೇಹಾಭಿಮಾನವಿಲ್ಲದೆ ಮಮತಾರಹಿತನಾಗಿ ನಿರಂತರವಾಗಿ ತನ್ನ ಚಿತ್ತವನ್ನು ಪರಮಾತ್ಮನಲ್ಲಿ ತೊಡಗಿಸಿ ಯಜ್ಞಗಳಿಗಾಗಿಯೇ ಕರ್ಮವನ್ನು ಮಾಡುವನು. ಇಂತಹ ಕರ್ಮಗಳು ಜ್ಞಾನರೂಪಿ ಅಗ್ನಿಯಿಂದ ಸುಟ್ಟು ಹೋಗುವುವು.

ಜ್ಞಾನಿಯಾದ ಯೋಗಿ ಪುರುಷನು ತಾನು ಮಾಡುವ ಯಜ್ಞದಲ್ಲಿ ಕರ್ತೃ, ಕ್ರಿಯೆ, ಅಗ್ನಿ, ಸ್ರುವ, ದ್ರವ್ಯ ಹೀಗೆ ಪ್ರತಿಯೊಂದರಲ್ಲೂ ಬ್ರಹ್ಮನನ್ನೇ ನೋಡುವುದರಿಂದ, ಆತನಿಗೆ ಬರುವ ಫಲವೂ ಸಹ ಬ್ರಹ್ಮವೇ ಆಗಿರುತ್ತದೆ. ಕೆಲವರು ಪರಮಾತ್ಮ ರೂಪೀ ಅಗ್ನಿಯಲ್ಲಿ, ಆತ್ಮರೂಪವನ್ನು ಹವನ ಮಾಡುವುದರ ಮೂಲಕ ಅಭೇದ ದರ್ಶನ ರೂಪ ಯಜ್ಞವನ್ನು ಮಾಡುತ್ತಾರೆ. ಇದೇ ರೀತಿ ಇನ್ನೂ ಕೆಲವು ಯಜ್ಞಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ಯೋಗಯಜ್ಞ, ದೇವಯಜ್ಞ, ಜ್ಞಾನಯಜ್ಞ, ಇಂದ್ರಿಯ ಸಂಯಮ ಯಜ್ಞ, ವಿಷಯ ಹವನ ರೂಪೀ ಯಜ್ಞ, ಅಂತಃಕರಣ ಸಂಯಮ ಯಜ್ಞ, ದ್ರವ್ಯಯಜ್ಞ, ತಪಃಯಜ್ಞ, ಸ್ವಾಧ್ಯಾಯ ಯಜ್ಞ ಹೀಗೆ ಇನ್ನೂ ಅನೇಕ ರೀತಿಯ ಯಜ್ಞಗಳನ್ನು ಕೈಗೊಳ್ಳುವುದರಿಂದ ಕರ್ಮಬಂಧನದಿಂದ ಬಿಡುಗಡೆ ಪಡೆಯಬಹುದೆಂದು ತಿಳಿದು ಬರುತ್ತದೆ. ಚತುರ್ವಿಧ ಪ್ರಾಣಾಯಾಮಗಳನ್ನೂ ಸಹ ಯಜ್ಞರೂಪವಾಗಿ ಮಾಡಬಹುದೆಂದು ತಿಳಿದು ಬರುತ್ತದೆ. ಈ ಎಲ್ಲಾ ಯಜ್ಞಗಳಿಗಿಂತಲೂ ಜ್ಞಾನಯಜ್ಞವು ಬಹಳ ಶ್ರೇಷ್ಠ. ಸಮಸ್ತ ಕರ್ಮಗಳೂ ಜ್ಞಾನದಲ್ಲಿ ಪರಿಸಮಾಪ್ತಿಯಾಗತ್ತದೆ. ಎಲ್ಲಾ ಯಜ್ಞಗಳಿಗೂ ಮೂಲಭೂತವಾಗಿ ಇರಬೇಕಾದುದು ನಿಸ್ವಾರ್ಥತೆ/ತ್ಯಾಗ. ಆ ಪರಮಾತ್ಮನಿಂದಲೇ

ಉತ್ಪತ್ತಿಯಾದ ಯಜ್ಞದಲ್ಲಿ ಆ ಭಗವಂತನು ಸದಾ ಸ್ಥಿತನಾಗಿರುತ್ತಾನೆ. ಇಹದಲ್ಲಿಯಾಗಲೀ, ಪರದಲ್ಲಿಯಾಗಲೀ ನಮ್ಮನ್ನು ನಾವು ಉದ್ಧರಿಸಿಕೊಳ್ಳಲು ನಿಸ್ವಾರ್ಥ ಸೇವೆ ಅಗತ್ಯವಾದುದು. ಯಜ್ಞಶೇಷವಾದ ಅಮೃತವನ್ನು ಸ್ವೀಕರಿಸುವವರು ಸನಾತನ ಪರಬ್ರಹ್ಮ ಪರಮಾತ್ಮನನ್ನು ಪಡೆಯುವರು.

ಇಂತಹ ಜ್ಞಾನವನ್ನು ತತ್ತ್ವದರ್ಶಿಗಳಾದ ಜ್ಞಾನಿಗಳ ಬಳಿ ಶರಣಾಗಿ ನಿರ್ಮಲವಾದ ಮನಸ್ಸಿನಿಂದ ಪ್ರಶ್ನೆ ಮಾಡುವುದರ ಮೂಲಕ ಪಡೆಯಬಹುದು. ಜ್ಞಾನವನ್ನು ಪಡೆದವರು ಸಮಸ್ತ ಪ್ರಾಣಿಗಳನ್ನು ಮೊದಲು ತಮ್ಮಲ್ಲಿ ನಂತರ ತಮ್ಮನ್ನೊಳಗೊಂಡು, ಎಲ್ಲವನ್ನೂ ಆ ಪರಬ್ರಹ್ಮನಲ್ಲಿ ನೋಡುವರು. ಈ ಜ್ಞಾನರೂಪೀ ದೋಣಿಯ ಮೂಲಕ ನಾವು ಖಂಡಿತವಾಗಿಯೂ ಸಂಪೂರ್ಣ ಪಾಪ ಸಮುದ್ರವನ್ನು ಸುಲಭವಾಗಿ ದಾಟಿ ಹೋಗಬಹುದು. ತತ್ತ್ವಜ್ಞಾನವು ಅಗ್ನಿಯಂತೆ ಕರ್ಮಗಳನ್ನು ಭಸ್ಮ ಮಾಡುತ್ತದೆ. ಇದರಿಂದ ಕರ್ಮ ಬಂಧನದಿಂದ ಮುಕ್ತಿಯಾಗುತ್ತದೆ. ಆದುದರಿಂದ ಈ ಜಗತ್ತಿನಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರಗೊಳಿಸುವಂತಹುದು ಮತ್ತೊಂದಿಲ್ಲ. ಈ ಜ್ಞಾನವನ್ನು ದೀರ್ಘಕಾಲದ ಕರ್ಮಯೋಗದಿಂದ ಶುದ್ಧವಾದ ಅಂತಃಕರಣವುಳ್ಳ ಮನುಷ್ಯನು ತನ್ನಿಂದ ತಾನೇ ಆತ್ಮನಲ್ಲಿ ಪಡೆದುಕೊಳ್ಳುವನು. ಇಂತಹ ಶ್ರದ್ಧಾವಂತ ಸಾಧುಸತ್ಪುರುಷನು ವಿಳಂಬವಿಲ್ಲದೆ ಭಗವತ್‌ಪ್ರಾಪ್ತಿ ಹಾಗು ಪರಮಶಾಂತಿಯನ್ನು ಹೊಂದುವನು. ಅವಿವೇಕಿ, ಸಂಶಯಿ, ಶ್ರದ್ಧಾರಹಿತನಾದ ಮನುಷ್ಯನಿಗೆ, ಇಹ–ಪರ ಲೋಕಗಳೂ ಇಲ್ಲ ಹಾಗು ಸುಖವೂ ಇಲ್ಲ.

ನಮ್ಮ ಅಜ್ಞಾನವನ್ನು ವಿವೇಕವೆಂಬ ಜ್ಞಾನರೂಪೀ ಖಡ್ಗದಿಂದ ಕತ್ತರಿಸಿ ಸಮತ್ವ ರೂಪೀ ಕರ್ಮಯೋಗದಲ್ಲಿ ಸ್ಥಿತರಾದಾಗ, ಆ ಪರಮಾತ್ಮನನ್ನು ಪಡೆಯಲು ಸಾಧ್ಯ. ಜ್ಞಾನವು ಮನುಷ್ಯನ ಕರ್ಮಗಳನ್ನು ಶುದ್ಧೀಕರಿಸುವ ಸಾಧನ.

# ಅಧ್ಯಾಯ – 5

## ಕರ್ಮ ಸಂನ್ಯಾಸ ಯೋಗಃ

ಅಹಂಕಾರ ಮತ್ತು ಕರ್ತೃತ್ವವನ್ನು ತ್ಯಜಿಸಿ, ಫಲದ ಅಪೇಕ್ಷೆಯಿಲ್ಲದೆ ಭಗವದರ್ಪಣಾ ಬುದ್ಧಿಯಿಂದ ಶಾಸ್ತ್ರವಿಧಿತ ಕರ್ತವ್ಯ ಕರ್ಮಗಳನ್ನು ಮಾಡುವುದೇ ಕರ್ಮ ಸಂನ್ಯಾಸಯೋಗ.

ಕರ್ಮಗಳ ಸಂನ್ಯಾಸ ಮತ್ತು ಕರ್ಮ ಯೋಗದ ಬಗ್ಗೆ ಸ್ಪಷ್ಟತೆಯನ್ನು ಕೇಳಿದ ಅರ್ಜುನನಿಗೆ ಶ್ರೀಕೃಷ್ಣನು ಕರ್ಮತತ್ತ್ವವನ್ನು ಬಿಡಿಸಿ ಹೇಳುವನು.

ಕರ್ಮಯೋಗ ಮತ್ತು ಜ್ಞಾನಯೋಗ ಮೇಲ್ನೋಟಕ್ಕೆ ಭಿನ್ನವೆಂದು ಕಂಡುಬಂದರೂ, ಅವೆರಡೂ ಒಂದಕ್ಕೊಂದು ಪೂರಕ. ಜ್ಞಾನದ ಅನುಷ್ಠಾನವೇ ಆಧ್ಯಾತ್ಮದ ಪರಾಕಾಷ್ಠತೆ. ಪರಾಕಾಷ್ಠತೆಯಿಲ್ಲದ ಕರ್ಮ ಜೀವನವು ಎಂದಿಗೂ ಪರಿಪೂರ್ಣತೆಯನ್ನು ಪಡೆಯುವುದಿಲ್ಲ. ಈ ಪರಾಜ್ಞಾನವು ಬ್ರಹ್ಮಜ್ಞಾನವಾಗಿದ್ದು ಎಲ್ಲೆಡೆ ಅಸ್ತಿತ್ವದಲ್ಲಿರುವ ಅತೀಂದ್ರಿಯ ಪ್ರಜ್ಞೆ.

ಕರ್ಮಯೋಗವು ಶ್ರೇಷ್ಠ ಮತ್ತು ಸುಲಭವಾದ ಮಾರ್ಗ. ಕರ್ಮಯೋಗವಿಲ್ಲದೆ ಮನಸ್ಸು, ಇಂದ್ರಿಯಗಳು ಮತ್ತು ಶರೀರದಿಂದ ನಡೆಯುವ ಎಲ್ಲ ಕರ್ಮಗಳಲ್ಲಿ ಕರ್ತೃತ್ವದ ತ್ಯಾಗ ಕಠಿಣವಾಗುತ್ತದೆ. ಕರ್ಮಯೋಗದ ಮೂಲಕ ಶುದ್ಧವಾದ ಅಂತಃಕರಣವನ್ನು ಹೊಂದಿ ಜಿತೇಂದ್ರಿಯನಾದ ಈ ಯೋಗಿಯು, ಸಮಸ್ತ ಪ್ರಾಣಿಗಳಲ್ಲಿ ಭಗವಂತನ ಸ್ವರೂಪವನ್ನು ಚಿಂತಿಸಿ, ಶೀಘ್ರವಾಗಿ ಪರಮಾತ್ಮನನ್ನು ಪಡೆಯುವನು. ಲೋಕ ಕಲ್ಯಾಣಕ್ಕಾಗಿ ಬಾಳಿದಾಗ ಮಾತ್ರ ಇಂತಹ ಸ್ಥಿತಿಗೆ ಏರಲು ಸಾಧ್ಯ.

ಅಕ್ಷರ ಬ್ರಹ್ಮನು ಯಾರ ಶುಭ–ಅಶುಭ ಕರ್ಮಫಲಗಳನ್ನು ಸ್ವೀಕರಿಸುವುದಿಲ್ಲ. ಫಲತ್ಯಾಗದ ಕರ್ಮಗಳಿಂದ ಕರ್ಮಯೋಗಿಯ ವ್ಯಕ್ತಿತ್ವಕ್ಕೆ ಧಕ್ಕೆ ಬಾರದೇ ಇರಬಹುದು. ಆದರೆ, ಎಂದು ಆತನಿಗೆ ಮುಂಜಾನೆಯ ಸೂರ್ಯೋದಯದಂತೆ ಜ್ಞಾನೋದಯವಾಗುತ್ತದೆಯೋ ಅಂದು ಆತನು ಜ್ಞಾನಪೂರ್ವಕವಾಗಿ ತನ್ನ ಕರ್ಮಗಳನ್ನು ಮಾಡಿ, ಮನಸ್ಸು, ಇಂದ್ರಿಯಗಳು ಮತ್ತು ದೇಹದ ಮೂಲಕ ನಡೆಯುವ ಎಲ್ಲ ಕರ್ಮಗಳಲ್ಲಿಯೂ ಕರ್ತೃತ್ವವನ್ನು ತ್ಯಜಿಸುವನು. ಅಂತಹ ಜ್ಞಾನಿಯು ಕರ್ಮಗಳನ್ನು ಮಾಡುವಾಗ, ಆಸಕ್ತಿರಹಿತನಾಗಿ ಸಮತ್ವ ಬುದ್ಧಿಯಿಂದ ಭಗವದರ್ಪಿತ ಕರ್ಮಗಳನ್ನು ಮಾಡಿ ಯೋಗವನ್ನು ಸಿದ್ಧಿ ಮಾಡಿಕೊಳ್ಳುವನು. ಆಗ ಅಂತಹ ಜ್ಞಾನಿಗೆ ತಾವರೆಯ ಎಲೆಯ ಮೇಲಿನ ನೀರಿನಂತೆ ಯಾವುದೇ ಪಾಪಗಳು ಅಂಟುವುದಿಲ್ಲ.

ಯೋಗಿ ಪುರುಷನು ಶುದ್ಧಾಂತಃಕರಣನಾಗಿ, ಯಾವುದೇ ಕರ್ಮ ಮಾಡದೆ ಮತ್ತು ಮಾಡಿಸದೆ, ನವದ್ವಾರಗಳುಳ್ಳ ಶರೀರ ರೂಪಿ ಪುರದಲ್ಲಿ ಎಲ್ಲ ಕರ್ಮಗಳನ್ನು ಮನಸ್ಸಿನಿಂದ ತ್ಯಜಿಸಿ, ಆನಂದ ಪೂರ್ವಕ ಸಚ್ಚಿದಾನಂದ ಘನ ಪರಮಾತ್ಮನ ಸ್ವರೂಪದಲ್ಲಿ ಸ್ಥಿತನಾಗಿರುತ್ತಾನೆ. ಇಂತಹ ಜ್ಞಾನಿ ಪುರುಷನು ಬ್ರಾಹ್ಮಣ, ಹಸು, ಆನೆ, ನಾಯಿ ಮತ್ತು ಚಾಂಡಾಲರನ್ನು ಸಮದೃಷ್ಟಿಯಿಂದಲೇ ನೋಡುತ್ತಾನೆ. ಇಂತಹ ಯೋಗಿಯು ಪಾಪರಹಿತನಾಗಿ ಜ್ಞಾನವನ್ನು ಪಡೆದು ಭಗವಂತನಲ್ಲಿ ನಿತ್ಯ ಐಕ್ಯತೆಯನ್ನು ಹೊಂದಿ, ಸಮತ್ವ ಭಾವದಲ್ಲಿ ಧ್ಯಾನರೂಪೀ ಯೋಗದಲ್ಲಿದ್ದು, ಧ್ಯಾನ ಜನಿತ ಸಾತ್ವಿಕ ಆನಂದವನ್ನು ಪಡೆದು ಅಕ್ಷಯವಾಗುವ ಆನಂದವನ್ನು ಅನುಭವಿಸುತ್ತಾನೆ. ಇಂತಹ ಯೋಗಿಯು ಎಲ್ಲ ಪ್ರಾಣಿಗಳ ಹಿತದಲ್ಲೇ ನಿರತನಾಗಿ ದ್ವಂದ್ವವನ್ನು ಗೆಲ್ಲಲ್ಪಟ್ಟು ನಿಶ್ಚಲವಾದ ಮನಸ್ಸನ್ನು ಪರಮಾತ್ಮನಲ್ಲಿರಿಸಿ, ಬ್ರಹ್ಮವೇತ್ತನಾಗಿ ಶಾಂತಬ್ರಹ್ಮನನ್ನು ಪಡೆಯುವನು.

**ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।**
**ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರ ಚಾರಿಣೌ ॥**
**ಯತೇಂದ್ರಿಯಮನೋ ಬುದ್ಧಿರ್ಮುನಿ ಮೋಕ್ಷಪರಾಯಣಃ ।**
**ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥**

ಯೋಗಿ ಪುರುಷನು ಹೊರಗಿನ ವಿಷಯಗಳನ್ನು ಹೊರಗಡೆಯೇ ತ್ಯಜಿಸಿ, ದೃಷ್ಟಿಯನ್ನು ಭ್ರೂಮಧ್ಯದಲ್ಲಿ ಸ್ಥಿರವಾಗಿಸಿ, ಮೂಗಿನಲ್ಲಿ ಹರಿದಾಡುವ ಪ್ರಾಣ ಮತ್ತು ಅಪಾನ ವಾಯುವನ್ನು ಸಮವಾಗಿಸಿ, ಗೆದ್ದುಕೊಂಡ ಇಂದ್ರಿಯ, ಮನಸ್ಸು, ಬುದ್ಧಿಗಳುಳ್ಳ ಮೋಕ್ಷ ಪರಾಯಣನಾದ ಈತನು ಇಚ್ಛೆ, ಭಯ, ಕ್ರೋಧಗಳ ರಹಿತನಾಗಿ ಈ ಜನ್ಮದಲ್ಲೇ ಸಮಸ್ತ ಜಗತ್ತನ್ನು ಗೆದ್ದು ಜೀವನ್ಮುಕ್ತನಾಗುವನು.

ಜೀವನ್ಮುಕ್ತನಾದ ಇಂತಹ ಭಕ್ತನು ಪರಮಾತ್ಮನನ್ನೇ ಎಲ್ಲ ಯಜ್ಞ, ತಪಸ್ಸಿನ ಭೋಕ್ತಾರನೆಂದು, ಸಮಸ್ತ ಲೋಕಗಳ ಒಡೆಯ, ಸಮಸ್ತ ಪ್ರಾಣಿಗಳ ಸುಹೃದ, ಸ್ವಾರ್ಥರಹಿತ ದಯಾಳು ಮತ್ತು ಪ್ರೇಮಿ ಎಂದು ಅರಿತುಕೊಂಡು ಶಾಂತಿಯನ್ನು ಪಡೆದು, ಬ್ರಾಹ್ಮಿ ಸ್ಥಿತಿಯನ್ನು ಹೊಂದುವನು.

# ಅಧ್ಯಾಯ – 6

## ಆತ್ಮ ಸಂಯಮ ಯೋಗಃ

ಈ ಯೋಗದ ಮತ್ತೊಂದು ಹೆಸರು ಧ್ಯಾನಯೋಗವೆಂದು ಹೇಳಬಹುದು. ಧ್ಯಾನಯೋಗದಲ್ಲಿ ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿಯನ್ನು ಸಂಯಮ ಮಾಡುವುದು ಪರಮ ಅವಶ್ಯಕವಾಗಿದೆ. ಧ್ಯಾನ ಎಂದರೆ ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಪ್ರಾಣ ಮತ್ತ ಪ್ರಜ್ಞೆಯನ್ನು ಅಕ್ಷರ ಬ್ರಹ್ಮನಲ್ಲಿ ಸಮನ್ವ.ಯಗೊಳಿಸಿ, ಪರಮಾತ್ಮನಲ್ಲಿ ಯುಕ್ತರಾಗುವ ಪ್ರಕ್ರಿಯೆ. ಈ ಧ್ಯಾನದ ಪ್ರಕ್ರಿಯೆಯು ಪರಮಾತ್ಮನಲ್ಲಿ ಯುಕ್ತರಾಗಲು ಇರುವ ಏಕಮಾತ್ರವಾದ ಸಾಧನ.

ಈ ಅಧ್ಯಾಯದಲ್ಲಿ ಯೋಗಾರೂಢನಾಗಲು ಪ್ರಯತ್ನಪಡುವ ಮನುಷ್ಯನ ಲಕ್ಷಣಗಳಿಂದ ಹಿಡಿದು ಪರಮ ಯೋಗಿಯ ಲಕ್ಷಣಗಳವರೆಗೆ ವಿವರಿಸಲಾಗಿದೆ.

ಕರ್ಮಯೋಗದ ತುದಿಯನ್ನು ಮುಟ್ಟಿದ ಮೇಲೆ, ನಂತರದ ಹಾದಿ ಶಮ/ಶಾಂತಿಯ ಚಿಂತನೆ, ನಾವು ಆಧ್ಯಾತ್ಮಿಕವಾಗಿ ಸಾಕ್ಷಾತ್ಕಾರವನ್ನು ಪಡೆದ ನಂತರ ನಮಗೆ ಅತ್ಯಗತ್ಯವಾದುದು ಮನೋಬಲ, ಸಂಕಲ್ಪಶಕ್ತಿ, ತೀವ್ರವಾದ ಪ್ರಯತ್ನ ಮತ್ತು ಸ್ವಾವಲಂಬನೆ.

ಧ್ಯಾನ ಮಾಡುವಾಗ ನಾವು ಅನುಸರಿಸಬೇಕಾದ ಆಸನ, ಧಾರಣೆ, ಸ್ಥಳ, ವಿಧಿ, ಆಹಾರ, ವಿಹಾರ, ಶಯನಾದಿಗಳ ನಿಯಮಗಳನ್ನು ಈ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಇದು ಯೋಗಾಸನ ಅಥವಾ ಭಂಗಿಗಳ ಬಗ್ಗೆ ವಿವರಗಳಲ್ಲ. ಆಹಾರದಲ್ಲಾಗಲಿ, ನಿದ್ರೆಯಲ್ಲಾಗಲಿ ಅಥವಾ ಯಾವುದೇ ವಿಷಯದಲ್ಲಾಗಲಿ ಜೀವನದಲ್ಲಿ ವಿಪರೀತವಾಗದಂತೆ ಮಿತಗೊಳಿಸಿಕೊಳ್ಳಬೇಕು. ಮನಸ್ಸು, ಇಂದ್ರಿಯಗಳ ಸಹಿತ ಶರೀರವನ್ನು ಹತೋಟಿಯಲ್ಲಿಟ್ಟುಕೊಂಡು, ಸಂಗ್ರಹ ಮಾಡದೆ, ಆಶಾರಹಿತರಾಗಿ ಏಕಾಂತದಲ್ಲಿ ಕುಳಿತು, ಆತ್ಮನನ್ನು ನಿರಂತರ ಪರಮಾತ್ಮನಲ್ಲಿ ತೊಡಗಿಸಬೇಕು. ನಮ್ಮ ಇಂದ್ರಿಯಗಳು ನಮಗೆ ಮಿತ್ರರೋ ಅಥವಾ ಶತೃಗಳೋ ಎಂಬುದು ನಮಗೆ ಅದರ ಮೇಲೆ ಇರುವ ಹಿಡಿತವನ್ನು ಅವಲಂಬಿಸಿರುತ್ತದೆ. ಏಕಾಗ್ರ ಮನಸ್ಸನ್ನು ಸಾಧಿಸಲು ಅಂತರಂಗದ ಶಿಸ್ತು ಅಗತ್ಯ. ಸಂಪೂರ್ಣ ಏಕಾಗ್ರತೆಯಿಂದ ನಾವು ಇದನ್ನು ಸಾಧಿಸಬೇಕು. ಗಾಳಿಯಿಲ್ಲದ ಸ್ಥಳದಲ್ಲಿ ದೀಪವು ಯಾವ ರೀತಿ ಅಲುಗಾಡದೆ ಸ್ಥಿರವಾಗಿರುತ್ತದೆಯೋ, ನಮ್ಮ ಮನಸ್ಸು ನಿಶ್ಚಲವಾದಾಗ, ಯೋಗ ಯುಕ್ತರಾಗಿ ಶಾಶ್ವತವಾದ ಆನಂದವನ್ನು ನೀಡುವ ಆ ಬ್ರಹ್ಮನನ್ನು ಹೊಂದುತ್ತೇವೆ. ಇಂತಹ ಸ್ಥಿತಿಯನ್ನು ಹೊಂದಿದಾಗ ನಮಗೆ ಕಲ್ಲು, ಮಣ್ಣು ಮತ್ತು ಬಂಗಾರವು ಸಮಾನವಾಗಿ ಕಾಣುತ್ತದೆ. ಸಮತ್ವವನ್ನು ಹೊಂದಿ, ಶಾಂತತೆಯನ್ನು ಪಡೆಯುವುದರಿಂದ ನಮ್ಮ ಜ್ಞಾನದಲ್ಲಿ ಪರಮಾತ್ಮನಲ್ಲದೆ ಬೇರೇನೂ ಇರುವುದಿಲ್ಲ. ಮನಸ್ಸಿಗೆ ಆಹಾರ – ಧ್ಯಾನ; ಬುದ್ಧಿಗೆ ಆಹಾರ – ಜ್ಞಾನ.

ಇಂತಹ ಯುಕ್ತತೆಯನ್ನು ಸಾಧಿಸಿದ ಮನುಷ್ಯನು ಯೋಗಿಯಾಗುವನು. ಯೋಗಿಯು ಆತ್ಮನನ್ನು ಸಮಸ್ತ ಪ್ರಾಣಿಗಳಲ್ಲಿ ಸ್ಥಿತ ಮತ್ತು ಸಮಸ್ತ ಪ್ರಾಣಿಗಳು ಆತ್ಮನಲ್ಲಿ ಕಲ್ಪಿತನಾಗಿ ನೋಡುವನು. ಅಂತಹ ಯೋಗಿಗೆ ಎಲ್ಲರ ಆತ್ಮರೂಪಿ ವಾಸುದೇವನಾದ ಪರಮಾತ್ಮನು ಅದೃಶ್ಯನಾಗುವುದಿಲ್ಲ. ಅದೇ ರೀತಿ ಪರಮಾತ್ಮನಿಗೆ ಯೋಗಿಯು ದೃಶ್ಯನಾಗಿರುತ್ತಾನೆ ಹಾಗು ಪರಮಶ್ರೇಷ್ಠನಾಗಿರುತ್ತಾನೆ.

ಇಂತಹ ನಿಷ್ಠಾವಂತ ಪರಮಶ್ರೇಷ್ಠ ಯೋಗಿಯಾಗಲು ಪ್ರಯತ್ನ ಪಡುವವನ ಚಂಚಲ ಮನಸ್ಸಿನ ಬಗ್ಗೆ ಮತ್ತು ಯೋಗ ಭ್ರಷ್ಠತೆಯ ಬಗ್ಗೆ ಅರ್ಜುನನು ಪ್ರಶ್ನಿಸಿದಾಗ, ಶ್ರೀ ಕೃಷ್ಣನು

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥**

ಎಂದು ಹೇಳುವನು. ಅಭ್ಯಾಸ ಮತ್ತು ವೈರಾಗ್ಯದಿಂದ ಮನಸ್ಸನ್ನು ನಿಗ್ರಹಿಸಬಹುದು. ಆಧ್ಯಾತ್ಮದಲ್ಲಿ ಯಾವ ಸಾಧನೆಯೂ ನಿಷ್ಪ್ರಯೋಜನವಾಗುವುದಿಲ್ಲ ಎಂದು ಹೇಳಿ, ಪುನರ್ಜನ್ಮ ಸಿದ್ಧಾಂತದ ವಿಜ್ಞಾನವನ್ನು ತಿಳಿಸುವನು. ತಪಸ್ವಿಗಳಿಗಿಂತ, ಶಾಸ್ತ್ರ ಜ್ಞಾನಿಗಳಿಗಿಂತ, ಸಕಾಮ ಕರ್ಮಗಳನ್ನು ಮಾಡುವವರಿಗಿಂತ ಯೋಗಿಯು ಅತ್ಯಂತ ಶ್ರೇಷ್ಠನಾಗಿರುವನು.

ಯೋಗಿಗಳಲ್ಲಿ ಶ್ರದ್ಧಾವಂತ ಯೋಗಿಯು ಅಕ್ಷರಬ್ರಹ್ಮನಲ್ಲಿ ತನ್ನ ಅಂತರಾತ್ಮವನ್ನು ಸ್ಥಾಪಿಸಿ, ಆತನನ್ನು ಅಖಂಡವಾಗಿ ಭಜಿಸಿ ಪರಮಶ್ರೇಷ್ಠನೆಂದು ಮಾನ್ಯನಾಗುವನು. ಈ ತುಟ್ಟತುದಿಯನ್ನು ತಲುಪಲು ಅನೇಕ ಜನ್ಮಗಳ ಪ್ರಯತ್ನವಿರಬೇಕು.

# ಅಧ್ಯಾಯ – 7

## ಜ್ಞಾನ ವಿಜ್ಞಾನ ಯೋಗಃ

ಜ್ಞಾನ ಎಂದರೆ ತಿಳುವಳಿಕೆ. ವಿಜ್ಞಾನ ಎಂದರೆ ಆ ತಿಳುವಳಿಕೆಯನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳುವುದು. ಜ್ಞಾನವು ಅವ್ಯಕ್ತರೂಪವಾದರೆ, ವಿಜ್ಞಾನವು ವ್ಯಕ್ತ ರೂಪ. ಈ ಜ್ಞಾನವನ್ನು ಪಡೆಯಲು ಸಹಸ್ರಾರು ಪುರುಷರಲ್ಲಿ ಕೆಲವರು ಪ್ರಯತ್ನಿಸುವರು. ಅವರಲ್ಲಿ ಅತ್ಯಂತ ಕೆಲವರು ಕಠಿಣ ಪರಿಶ್ರಮ ವಹಿಸಿ ಈ ಜ್ಞಾನವನ್ನು ಪಡೆದುಕೊಳ್ಳುವರು. ಈ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಸೃಷ್ಟಿರಚನೆಯ ಜ್ಞಾನವನ್ನು ವಿಜ್ಞಾನ ಸಹಿತ ನಮಗೆ ನೀಡಿರುವನು.

**ಭೂಮಿರಾಪೋ ನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।**
**ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿ ರಷ್ಟಧಾ ॥**
**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।**
**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥**

ಈ ಅಸಾಧಾರಣವಾದ ಜಗತ್ತು ಜಡ ಮತ್ತು ಜೀವ ಪ್ರಕೃತಿಯಿಂದ ನಿರ್ಮಿತವಾಗಿದೆ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ ಮತ್ತು ಅಹಂಕಾರಗಳು ಜಡ ಪ್ರಕೃತಿಯಾಗಿವೆ. ಜಗತ್ತು ಧರಿಸಿರುವ ಸಚೇತನವು ಜೀವ ಪ್ರಕೃತಿ, ಈ ಎರಡರ ಸಮ್ಮಿಲನವೇ ಈ ಸೃಷ್ಟಿ. ಸರ್ವ ಪ್ರಾಣಿಗಳು, ಈ ಎರಡೂ ಪ್ರಕೃತಿಯಿಂದಲೇ ಉಂಟಾಗಿವೆ. ನೂಲಿನಲ್ಲಿ ಯಾವ ರೀತಿ ಮಣಿಗಳು ಪೋಣಿಸಿರುತ್ತವೋ, ಈ ಸಂಪೂರ್ಣ ಜಗತ್ತು ಆ ಅಕ್ಷರಬ್ರಹ್ಮನಲ್ಲಿ ಪೋಣಿಸಲ್ಪಟ್ಟಿದೆ.

ಭಗವಂತನು ಪೃಥ್ವಿಯಲ್ಲಿ ಪವಿತ್ರ ಪರಿಮಳ ಗಂಧ ರೂಪವಾಗಿ, ಜಲದಲ್ಲಿ ರಸವಾಗಿ, ಸೂರ್ಯ–ಚಂದ್ರರ ತೇಜಸ್ಸಾಗಿ, ಆಕಾಶದಲ್ಲಿ ಶಬ್ದವಾಗಿ, ವೇದಗಳಲ್ಲಿ **'ಓಂಕಾರ'**ವಾಗಿ, ವಾಯುವಿನಲ್ಲಿ ಸ್ಪರ್ಶವಾಗಿ, ಸಮಸ್ತ ಪ್ರಾಣಿಗಳ ಸನಾತನ ಬೀಜ ರೂಪವಾಗಿ ನೆಲೆಸಿರುವನು.

ಭಗವಂತನಿಂದಲೇ ಉಂಟಾದ ಈ ಮಾಯಾ ಪ್ರಪಂಚದಲ್ಲಿ ಸ್ವಾರ್ಥ ಮತ್ತು ಮೋಹವೆಂಬ ಬಂಧನಗಳು ಹಗಲುಗನಸಿನ ರೀತಿ. ಇದು ಅಜ್ಞಾನದಿಂದ ಮೂಡುವ ಭ್ರಮೆ. ಇದರ ಪರಿಣಾಮವೇ ದ್ವಂದ್ವ. ಈ ದ್ವಂದ್ವಕ್ಕೆ ಒಳಗಾಗುವ ಅಜ್ಞಾನಿಗಳು, ಜನ್ಮರಹಿತನಾದ ಅವಿನಾಶಿಯಾದ, ಪರಮೇಶ್ವರನಾದ, ಮನಸ್ಸು–ಇಂದ್ರಿಯಗಳಿಗೆ ಅತೀತನಾಗಿರುವ ಸಚ್ಚಿದಾನಂದ ಪರಮಾತ್ಮನನ್ನು ಅರಿಯುವುದಿಲ್ಲ. ಶ್ರೀಕೃಷ್ಣನನ್ನು ಜನನ–ಮರಣವಿರುವ ವ್ಯಕ್ತಿಯೆಂಬ ಭಾವದಿಂದ ನೋಡುವರು. ಶ್ರದ್ಧೆ ಮತ್ತು ಭಕ್ತಿಯಿಲ್ಲದ ಇಂತಹವರಿಗೆ, ತನ್ನ ಯೋಗಮಾಯೆಯಿಂದ ಅಡಗಿರುವ ಸ್ವರೂಪ ದರ್ಶನವನ್ನು ಅಕ್ಷರಬ್ರಹ್ಮನು ನೀಡುವುದಿಲ್ಲ.

ಭೋಗಗಳ ಕಾಮನೆಯಿಂದ ಜ್ಞಾನವು ಅಪಹೃತವಾಗಿ, ತಮ್ಮ ಸ್ವಭಾವ ಪ್ರೇರಿತರಾಗಿ, ಇಷ್ಟಾರ್ಥ ಸಿದ್ಧಿಗಾಗಿ–ಆಯಾ ದೇವತೆಗಳನ್ನು ಪೂಜಿಸುವರು. ಇಂತಹವರ ಶ್ರದ್ಧೆಯನ್ನು ಸ್ಥಿರಗೊಳಿಸುವುದು ಆ ಪರಮಾತ್ಮನೇ.

ಭಕ್ತರು ಭಗವಂತನನ್ನು ನಾಲ್ಕು ವಿಧಗಳಿಂದ ಆಶ್ರಯಿಸಿದವರಾಗಿದ್ದಾರೆ. ಆರ್ತರು ತಮ್ಮ ಕಷ್ಟಗಳನ್ನು ಕಳೆದುಕೊಳ್ಳಲು ಪರಮಾತ್ಮನನ್ನು ಬೇಡಿದರೆ, ಅರ್ಥಾರ್ಥಿಗಳು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಆತನ ಮೊರೆ ಹೋಗುವರು. ಜಿಜ್ಞಾಸಿಗಳು ತತ್ತ್ವಶಾಸ್ತ್ರಗಳ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಿದರೆ, ಜ್ಞಾನಿಗಳು ಶುದ್ಧ ಭಕ್ತಿಯಿಂದ ಆ ಪರಮಾತ್ಮನನ್ನು ಕಾಣುವರು. ಇವರಲ್ಲಿ ಅನನ್ಯ ಪ್ರೇಮವುಳ್ಳ ಜ್ಞಾನೀ ಭಕ್ತನು ಭಗವಂತನಿಗೆ ಅತ್ಯಂತ ಪ್ರಿಯನು.

ಜ್ಞಾನಿಯು ತನ್ನ ಅನೇಕ ಜನ್ಮಗಳ ಕೊನೆಯ ಜನ್ಮದಲ್ಲಿ 'ಎಲ್ಲವೂ ವಾಸುದೇವನಾಗಿದ್ದಾನೆ' ಎಂದು ತಿಳಿದುಕೊಂಡು ಭಗವಂತನನ್ನು ಭಜಿಸುವನು, ಅಂತಹ ಮಹಾತ್ಮನು ಅತ್ಯಂತ ದುರ್ಲಭನು.

ಭಗವಂತನ ಮಾಯೆಯು ಅಪಾಯ, ಆಕರ್ಷಣೀಯ ಮತ್ತು ವಿಶ್ವಾಸಘಾತಕವಾಗಬಲ್ಲದು. ತ್ರಿಗುಣಗಳಿಂದ ಸುತ್ತುವರಿದಿರುವ ಈ ಮಾಯೆಯನ್ನು ದಾಟಲು, ನಾವು ಭಕ್ತಿಯೆಂಬ ಹಡಗನ್ನು ಉಪಯೋಗಿಸಿ ಬುದ್ಧಿವಂತ ನಾವಿಕರಾಗಬೇಕು.

ಭೂತ, ವರ್ತಮಾನ ಮತ್ತು ಭವಿಷ್ಯತ್ತನ್ನು ಬಲ್ಲ ಅಕ್ಷರಬ್ರಹ್ಮನನ್ನು ಅರಿಯಲು ಶ್ರದ್ಧೆ ಮತ್ತು ಭಕ್ತಿ ಇರಬೇಕು. ಇದಕ್ಕೆ ತೊಡಕಾಗಿರುವುದು ಮಾಯಾಲೋಕದಿಂದ ಉಂಟಾಗಿರುವ ದ್ವಂದ್ವ ಮೋಹ. ಈ ಮಾಯಾಲೋಕದಿಂದ ಹೊರಬರಬೇಕಾದರೆ ಮಾನವರು ಮಾಡಬೇಕಾದ ಮೊದಲ ಕರ್ತವ್ಯ ನೈಷ್ಕರ್ಮ್ಯತೆ. ನಿಷ್ಕಾಮ ಭಾವದಿಂದ ಶ್ರೇಷ್ಠಕರ್ಮಗಳನ್ನು ಆಚರಿಸಿದಾಗ, ಪಾಪಗಳನ್ನು ದಾಟಿ, ರಾಗ–ದ್ವೇಷ ಜನಿತ ದ್ವಂದ್ವ ಮೋಹದಿಂದ ಮುಕ್ತರಾಗಿ, ದೃಢನಿಶ್ಚಯದಿಂದ ಅಕ್ಷರಬ್ರಹ್ಮನಿಗೆ ಶರಣಾಗಿ, ಆತನನ್ನೇ ಭಜಿಸುವರು. ಆತನಲ್ಲಿ ಶರಣಾಗಿ, ಮುಪ್ಪು ಮತ್ತು ಸಾವಿನಿಂದ ಬಿಡುಗಡೆ ಹೊಂದಲು ಪ್ರಯತ್ನ ಮಾಡುವ ಪುರುಷರು ಆ ಬ್ರಹ್ಮನನ್ನು, ಸಂಪೂರ್ಣ ಆಧ್ಯಾತ್ಮವನ್ನು ಹಾಗೂ ಸಮಸ್ತ ಕರ್ಮಗಳನ್ನು ತಿಳಿದಿರುತ್ತಾರೆ.

ಯುಕ್ತಚಿತ್ತರಾದ ಪುರುಷರು ಎಲ್ಲರ ಆತ್ಮರೂಪಿಯಾಗಿರುವ ಅಕ್ಷರಬ್ರಹ್ಮನನ್ನು ಅಧಿಭೂತ, ಅಧಿದೈವ ಮತ್ತು ಅಧಿಯಜ್ಞಗಳೆಂಬ ಅರಿವಿನೊಂದಿಗೆ ಅಂತ್ಯ ಕಾಲದಲ್ಲಿಯೂ ಇದ್ದು, ಆತನನ್ನೇ ಪಡೆಯುತ್ತಾರೆ.

# ಅಧ್ಯಾಯ – 8

## ಅಕ್ಷರಬ್ರಹ್ಮ ಯೋಗಃ

ಅಕ್ಷರಬ್ರಹ್ಮನೆಂದರೆ ಅವಿನಾಶಿ, ಅನಂತ, ಸಮಷ್ಠಿ, ತತ್, ಶಾಶ್ವತ, ಸರ್ವೋಚ್ಚ, ಸ್ವಯಂ ಪ್ರಜ್ವಲಿತ, ಸೂಕ್ಷ್ಮಾತಿಸೂಕ್ಷ್ಮ, ಅವ್ಯಕ್ತ, ಸರ್ವವ್ಯಾಪಕ, ಶಕ್ತಿ, ಸಂಪೂರ್ಣ ಪ್ರಜ್ಞೆ / ಬೆಳಕು / ಅಸ್ತಿತ್ವ / ನಿಜಾಂಶ.

ಅರ್ಜುನನ ಏಳು ಪ್ರಶ್ನೆಗಳಿಂದ ಆರಂಭವಾಗುವ ಈ ಅಧ್ಯಾಯದಲ್ಲಿ ನಾವು, ಅಕ್ಷರಬ್ರಹ್ಮ ಯಾರು? ಆತನ ಕರ್ಮವೇನು? ಅಧಿಭೂತ, ಅಧಿದೈವ, ಅಧ್ಯಾತ್ಮ ಎಂದರೇನು? ಅಧಿಯಜ್ಞವು ಶರೀರದಲ್ಲಿ ಯಾವ ರೀತಿಯಲ್ಲಿ ಇರುವುದು ? ಪ್ರಯಾಣ ಕಾಲದಲ್ಲಿ ಪರಮಾತ್ಮನನ್ನು ಸ್ಮರಿಸುವುದು ಹೇಗೆ? ಅಂತಹ ಸ್ಮರಣೆಯುಳ್ಳವರ ಗತಿ ಎಲ್ಲವನ್ನೂ ತಿಳಿಯಬಹುದಾಗಿದೆ.

'ಕ್ಷರ' ಎಂದರೆ ನಾಶವಾಗುವಂತಹುದು, 'ಅಕ್ಷರ' ಎಂದರೆ ಅವಿನಾಶಿ, ಅಂದರೆ ಅಕ್ಷರನಾಗಿರುವಂತಹ ಬ್ರಹ್ಮನೇ ಅಕ್ಷರಬ್ರಹ್ಮ. ಜೀವಿಗಳ ಭೌತಿಕ ಶರೀರವನ್ನು ಸೃಷ್ಟಿಸುವ, ಪೋಷಿಸುವ, ಲಯವಾಗಿಸಿಕೊಳ್ಳುವ ಆತನ ಯಜ್ಞವೇ, ಅಕ್ಷರಬ್ರಹ್ಮನ ಕರ್ಮ. ನಿರಂತರವಾಗಿ ಬದಲಾಗುವ ಭೌತಿಕ ಪ್ರಕೃತಿಯು ಅಧಿಭೂತವಾಗಿದೆ. ದೇವತೆಗಳೆಲ್ಲರನ್ನೂ ಒಳಗೊಂಡಿರುವ ಹಿರಣ್ಯಮಯ ಗರ್ಭನಾದ ಬ್ರಹ್ಮನೇ ಅಧಿದೈವ. ಅಕ್ಷರಬ್ರಹ್ಮನ ಒಂದಂಶದಿಂದ ಬಂದಿರುವ ಆತ್ಮವು ಅಧಿಭೂತವಾದ ಶರೀರಗಳಲ್ಲಿ ಅಧಿಆತ್ಮವಾಗಿ ನೆಲೆಸಿರುವುದು. ತ್ಯಾಗ ದೇವತೆಯಾಗಿ, ಯಜ್ಞಗಳ ಪ್ರಭುವಾಗಿ ಪ್ರತಿಯೊಬ್ಬರಲ್ಲೂ ಅಕ್ಷರಬ್ರಹ್ಮನು ಸಾಕ್ಷಿ ರೂಪದಿಂದ ನೆಲೆಸಿರುವನು. ನಾವು ಮಾಡುವ ಯಾವುದೇ ಒಂದು ಕರ್ಮಕ್ಕೂ ಮತ್ತು ತ್ಯಾಗಕ್ಕೂ ಆತನೇ ಸಾಕ್ಷಿ. ಮೋಕ್ಷಕ್ಕೆ ಯಜ್ಞವೇ ಅತ್ಯಂತ ಮುಖ್ಯವಾದ ಸಾಧನೆ. ಅಂತ್ಯಕಾಲದಲ್ಲಿ ಯಾವ ಯಾವ ಪುರುಷರು ಯಾವ ಯಾವ ಭಾವದಲ್ಲಿ ದೇಹವನ್ನು ತ್ಯಜಿಸುವರೋ, ಅದಕ್ಕೆ ಅನುಗುಣವಾಗಿ ಮುಂದಿನ ಜನ್ಮದಲ್ಲಿ ಜನಿಸುವರು. ಆದ್ದರಿಂದ ಅಂತ್ಯಕಾಲದಲ್ಲಿಯೂ ನಾವು ಆ ಪರಮಾತ್ಮನನ್ನು ಸ್ಮರಿಸಬೇಕಾದರೆ ನಿರಂತರವಾಗಿ, ಅವ್ಯಭಿಚಾರಿಣಿ ಭಕ್ತಿಯೊಂದಿಗೆ, ಚಿಂತನೆಯನ್ನು ಮಾಡುತ್ತಾ, ಮನನ ಮಾಡುತ್ತಾ ಪರಮಾತ್ಮನ ಸ್ಮರಣೆಯಲ್ಲಿದ್ದರೆ ನಮಗೆ ಅದೇ ಭಾವನೆಯಿದ್ದು, ಆತನನ್ನು ಪಡೆಯಲು ಸಹಾಯವಾಗುತ್ತದೆ.

ವಿದ್ವಾಂಸರು, ಸಂನ್ಯಾಸಿ ಮಹಾತ್ಮರು ಮತ್ತು ಬ್ರಹ್ಮ ಜ್ಞಾನಿಗಳು, ಎಲ್ಲಾ ಇಂದ್ರಿಯಗಳ ದ್ವಾರಗಳನ್ನು ತಡೆದು, ಮನಸ್ಸನ್ನು ಹೃದಯದಲ್ಲಿ ಸ್ಥಿರಗೊಳಿಸಿ, ಗೆದ್ದಿರುವ ಮನಸ್ಸಿನಿಂದ ಪ್ರಾಣವನ್ನು ಮಸ್ತಕದಲ್ಲಿ ಸ್ಥಾಪಿಸಿ ಪರಮಾತ್ಮ ಸಂಬಂಧೀ ಯೋಗಧಾರಣೆಯಲ್ಲಿ ಸ್ಥಿತರಾಗಿ, 'ಓಂ' ಎಂಬ ಏಕಾಕ್ಷರ ರೂಪೀ ಬ್ರಹ್ಮವನ್ನು ಉಚ್ಚರಿಸುತ್ತಾ ಮತ್ತು ಅದರ ಅರ್ಥಸ್ವರೂಪದ ನಿರ್ಗುಣ ಬ್ರಹ್ಮನಾದ ಆ ಪರಮಾತ್ಮನನ್ನು ಚಿಂತಿಸುತ್ತಾ ದೇಹವನ್ನು ತ್ಯಜಿಸಿ ಪರಮೋನ್ನತ ಗತಿಯನ್ನು ಪಡೆಯುವರು. ಅನನ್ಯ ಭಕ್ತನೂ ಸಹ ನಿತ್ಯ ನಿರಂತರ ಆ ಪರಮಾತ್ಮನಲ್ಲಿ ಯುಕ್ತನಾಗಿ, ಆತನನ್ನೇ ಸೇರುವನು.

**ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।**
**ಏಕಯಾ ಯಾತ್ಯನಾ ವೃತ್ತಿಮನ್ಯ ಯಾವರ್ತತೇ ಪುನಃ ॥**

ಇಂತಹ ಯೋಗಿಗಳು ಉತ್ತರಾಯಣದ ಶುಕ್ಲಪಕ್ಷದ ಹಗಲಿನಲ್ಲಿ ಶರೀರವನ್ನು ತ್ಯಜಿಸಿದರೆ, ಜ್ಯೋತಿರ್ಮಯ ಅಗ್ನಿ ಅಭಿಮಾನೀ ದೇವತೆಯಾಗಿರುವ ಸನಾತನವಾದ ದೇವಯಾನ ಎಂಬ ಅರ್ಚಿ ಮಾರ್ಗದ ಮೂಲಕ ಮರಳಿ ಬರಲಾರದ ಪರಮ ಪದವನ್ನು ಪಡೆಯುವರು. ದಕ್ಷಿಣಾಯನದ ಕೃಷ್ಣಪಕ್ಷದ ಇರುಳಿನಲ್ಲಿ ಶರೀರವನ್ನು ತ್ಯಜಿಸಿದರೆ, ಹೊಗೆಯು ಅಭಿಮಾನೀ ದೇವತೆಯಾಗಿರುವ ಪಿತೃಯಾನ ಎಂಬ ಧೂಮ ಮಾರ್ಗದಲ್ಲಿ ಹೋದವರು ಚಂದ್ರತೇಜವನ್ನು ಪಡೆದು ಸ್ವರ್ಗದಲ್ಲಿ ಪುಣ್ಯಗಳನ್ನು ಅನುಭವಿಸಿ ಮತ್ತೆ ಜನ್ಮವನ್ನು ಪಡೆಯುತ್ತಾರೆ. ಈ ಎರಡೂ ಮಾರ್ಗಗಳನ್ನು ತತ್ತ್ವದಿಂದ ತಿಳಿದ ಯೋಗೀ ಪುರುಷನು ಮೋಹಕ್ಕೊಳಗಾಗದೆ ಸದಾ ಭಗವಂತನಲ್ಲಿ, ಯುಕ್ತನಾಗಿ ಯಜ್ಞ, ದಾನ ಮತ್ತು ತಪಸ್ಸುಗಳನ್ನು ಮಾಡುವುದರಲ್ಲಿ ಹೇಳಲಾದ ಪುಣ್ಯಫಲಗಳನ್ನು ನಿಸ್ಸಂದೇಹವಾಗಿ ದಾಟಿಹೋಗುವನು.

ಅಕ್ಷರಬ್ರಹ್ಮ ಯೋಗದಲ್ಲಿ ಸೃಷ್ಟಿಕರ್ತ ಬ್ರಹ್ಮನ ಕಾಲಾವಧಿಯನ್ನು ಹೇಳುವುದರ ಮೂಲಕ ಕಾಲಚಕ್ರದ ವಿವರಣೆಯನ್ನು ಸಹ ಮಾಡಲಾಗಿದೆ. ಬ್ರಹ್ಮಲೋಕದವರೆಗಿನ ಎಲ್ಲಾ ಲೋಕಗಳು ಮತ್ತೆ ಮರಳಿ ಪುನರ್ಜನ್ಮ ಪಡೆಯುವಂತಹ ಲೋಕಗಳೇ ಆಗಿವೆ. ಇದನ್ನು ದಾಟಿದವರಿಗೆ ಪುನರ್ಜನ್ಮವೆನ್ನುವುದಿಲ್ಲ.

ಒಂದು ಸಾವಿರ ಚತುರ್ಯುಗಗಳು ಸೇರಿ ಬ್ರಹ್ಮನ ಒಂದು ಹಗಲು ಮತ್ತು ಒಂದು ಸಾವಿರ ಚತುರ್ಯುಗಗಳು ಸೇರಿ ಬ್ರಹ್ಮನ ಒಂದು ರಾತ್ರಿ. ಹಗಲಿನ ಆರಂಭದಲ್ಲಿ ವ್ಯಕ್ತವಾಗುವ ಜೀವಿಗಳು, ರಾತ್ರಿಯಾದಾಗ ಅವ್ಯಕ್ತವಾಗುತ್ತದೆ. ಆದರೆ ಈ ಅವ್ಯಕ್ತಕ್ಕಿಂತಲೂ ಅತೀತವಾದ ಯಾವ ಅವ್ಯಕ್ತ ಭಾವವಿದೆಯೋ, ಆ ಸಚ್ಚಿದಾನಂದ ಘನ ಪೂರ್ಣಬ್ರಹ್ಮ ಪರಮ ಪುರುಷನು ಎಲ್ಲಾ ಭೂತಗಳು ಇಲ್ಲವಾದರೂ, ನಾಶವಾಗುವುದಿಲ್ಲ. ಆ ಪರಮ ಪರುಷನೇ / ಪರಮ ಪುರುಷನ ಧಾಮವೇ ಅಕ್ಷರ ಬ್ರಹ್ಮ. ಅದನ್ನೇ ಅವ್ಯಕ್ತ, ಅಕ್ಷರ ಎಂದು ಹೇಳುತ್ತಾರೆ. ಆ ಸನಾತನ ಅವ್ಯಕ್ತ ಭಾವವನ್ನು ಪಡೆದುಕೊಂಡ ಬಳಿಕ ಮನುಷ್ಯನು ಮರಳಿ ಹುಟ್ಟುವುದಿಲ್ಲ. ಅದೇ ಅಕ್ಷರಬ್ರಹ್ಮನ ಸ್ಥಾನವಾಗಿದೆ. ಈ ಅಕ್ಷರಬ್ರಹ್ಮನು ಅನನ್ಯ ಭಕ್ತಿಗೆ ಮಾತ್ರ ದೊರಕುವನು.

# ಅಧ್ಯಾಯ – 9

## ರಾಜವಿದ್ಯಾ – ರಾಜಗುಹ್ಯ ಯೋಗಃ

ರಾಜವಿದ್ಯೆ ಎಂದರೆ ಸರ್ವೋಚ್ಚ ವಿದ್ಯೆ. ಸರ್ವ ವಿದ್ಯೆಗಳಿಗೆ ರಾಜನಾಗಿರುವುದು ಬ್ರಹ್ಮವಿದ್ಯೆ. ಈ ವಿದ್ಯೆಯ ಜ್ಞಾನವನ್ನು ಈ ಅಧ್ಯಾಯದಲ್ಲಿ ವಿಜ್ಞಾನ, ಸಹಿತ ಹೇಳಲಾಗಿದೆ. ರಾಜಗುಹ್ಯ ಎಂದರೆ ರಹಸ್ಯಗಳಲ್ಲಿ ಅತೀರಹಸ್ಯವಾದದ್ದು. ನಮ್ಮ ಇಂದ್ರಿಯಗಳಿಗೆ ಅತೀತವಾದುದ್ದೆಲ್ಲವೂ ರಹಸ್ಯವೇ. ಅಂತಹ ರಹಸ್ಯಗಳಲ್ಲಿ, ಭಗವಂತನಲ್ಲಿ ಯುಕ್ತರಾಗಲು ನಾವು ಮಾಡಬೇಕಾದ ಉಪಾಸನೆ ಅತೀ ರಹಸ್ಯ. ಈ ಗುಹ್ಯತರವಾದ ರಾಜವಿದ್ಯೆಗೆ ರಾಜಮಾರ್ಗವನ್ನು ಶ್ರೀ ಕೃಷ್ಣನು ಈ ಅಧ್ಯಾಯದಲ್ಲಿ ಅರ್ಜುನನ ಮುಖಾಂತರ ನಮಗೆ ವಿವರಿಸಿರುವನು.

ರಾಜಮಾರ್ಗದಲ್ಲಿ (ರಾಜವಿದ್ಯಾ – ರಾಜಗುಹ್ಯ) ಸ್ತ್ರೀಯರನ್ನೊಳಗೊಂಡಂತೆ ಎಲ್ಲಾ ವರ್ಣದವರಿಗೂ ಸಹ ಸಮಾನ ಅವಕಾಶವಿದೆ. ಪರಮಾತ್ಮನು ಬೇಧಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಅನುಗ್ರಹಿಸುವನು. ದುರಾಚಾರಿಯೂ ಸಹ ಅನನ್ಯ ಭಾವದಿಂದ ಭಗವಂತನನ್ನು ಭಜಿಸಿದರೆ, ಆತನು ಸಾಧುವೇ ಆಗುವನು.

ಭಗವಂತನು ಈ ಜಗತ್ತಿನ ಸೃಷ್ಟಿಕರ್ತ, ಏಕೈಕ ಆಧಾರ, ಆಶ್ರಯದಾತ, ನಿಜವಾದ ಸ್ನೇಹಿತ, ನಮ್ಮ ಜೀವನದ ಗುರಿ. ಆ ಪರಮಾತ್ಮನಲ್ಲಿಯೇ ಎಲ್ಲವೂ ಇರುವುದು ಮತ್ತು ಎಲ್ಲವೂ ಆ ಪರಮಾತ್ಮನೇ. ಭಗವಂತನು ತನ್ನ ಗುಣ, ಪ್ರಭಾವ ಮತ್ತು ವಿಭೂತಿಗಳ ಸಹಿತ ತನ್ನ ಸ್ವರೂಪವನ್ನು ಇಲ್ಲಿ ವರ್ಣಿಸಿ, ಸಂಪೂರ್ಣ ಜಗತ್ತು ತನ್ನ ಸ್ವರೂಪವೇ ಎಂದು ತಿಳಿಸುವನು. ಆತನ ಅಧಿಷ್ಠಾನದಲ್ಲಿ (ಅಧ್ಯಕ್ಷತೆಯಲ್ಲಿ) ಪ್ರಕೃತಿಯು ಈ ಸೃಷ್ಟಿಯನ್ನು ಬದಲಾವಣೆಗೊಳಿಸುತ್ತಾ ಸಂಸಾರಚಕ್ರವನ್ನು ನಡೆಸುತ್ತಿರುತ್ತದೆ.

ಮಂಜುಗಡ್ಡೆಯಲ್ಲಿ ನೀರು ವ್ಯಾಪಿಸಿರುವಂತೆ, ಪರಮಾತ್ಮನು ಈ ಸೃಷ್ಟಿಯಲ್ಲಿ ವ್ಯಾಪಿಸಿರುವನು. ಆಕಾಶದಿಂದ ಉತ್ಪನ್ನವಾದ ವಾಯುವು ಎಲ್ಲೆಡೆಯಿರುವಂತೆ, ಭಗವಂತನಿಂದಲೇ ಉತ್ಪನ್ನವಾದ ಸರ್ವಭೂತಗಳು ಆತನಲ್ಲಿಯೇ ನೆಲೆಸಿವೆ. ಸರ್ವಭೂತಗಳ ಸೃಷ್ಟಿಗೆ ಮತ್ತು ಲಯಕ್ಕೆ ಕಾರಣನಾದ ಭಗವಂತನಿಗೆ ನಮ್ಮ ಎಲ್ಲಾ ಕ್ರಿಯೆಗಳನ್ನು ಸಮರ್ಪಿಸಿದಾಗ, ಜೀವಾತ್ಮವು ಕರ್ಮಬಂಧನಗಳಿಂದ ಮುಕ್ತವಾಗುತ್ತದೆ.

ಮೂಢರಿಗೆ, ಮೋಹವಿರುವವರಿಗೆ, ಸಕಾಮ ಭಕ್ತರಿಗೆ, ಆಸುರೀ ಪ್ರಕೃತಿಯುಳ್ಳವರಿಗೆ, ಪರಮಾತ್ಮನ ತತ್ತ್ವವು ಅರ್ಥವಾಗುವುದಿಲ್ಲ. ಕೇವಲ ವೇದಗಳಲ್ಲಿ ಹೇಳಿರುವ ಫಲಾಪೇಕ್ಷಿತ ಆಚರಣೆಗಳನ್ನು ಮಾಡುವುದರಿಂದ ನಾವು ನಮ್ಮ ಗುರಿಯನ್ನು ಮುಟ್ಟಲಾಗುವುದಿಲ್ಲ. ಅಂತಹ ಆಚರಣೆಗಳು ನಮ್ಮನ್ನು ಪುಣ್ಯಲೋಕಗಳಿಗೆ ಒಯ್ದು ಮತ್ತೆ ಪುನರ್ಜನ್ಮ ಪಡೆಯುವಂತೆ ಮಾಡುತ್ತವೆ. ಕೆಲವರಿಗೆ ತಾವು ಮಾಡುತ್ತಿರುವ

ಪೂಜೆ, ಪ್ರಾರ್ಥನೆಗಳು, ಭಗವಂತನ ಸ್ವರೂಪ ಎಂಬ ಅರಿವು ಇರುವುದಿಲ್ಲ. ಆದ್ದರಿಂದ ಅಂತಹವರ ಆಧ್ಯಾತ್ಮಿಕ ಬೆಳವಣಿಗೆಯು ಸ್ಥಗಿತಗೊಂಡು, ಫಲಾಪೇಕ್ಷೆಯ ಧರ್ಮಾಚರಣೆಗಳ ಕಾರಣದಿಂದ ಮತ್ತೆ ಮತ್ತೆ ಪುನರ್ಜನ್ಮ ಪಡೆಯುವ ಈ ಲೋಕಕ್ಕೆ ಮರಳಿ ಬರುತ್ತಲೇ ಇರುತ್ತಾರೆ.

ಅವರವರ ಕರ್ಮಗಳಿಗನುಸಾರ ಪರಮಾತ್ಮನು ಜೀವಿಗಳನ್ನು ರಚಿಸುವನು. ಜ್ಞಾನಯೋಗಿಗಳು ನಿರ್ಗುಣ–ನಿರಾಕಾರನಾದ ಪರಬ್ರಹ್ಮನನ್ನು ಅಭೇದ ಭಾವದಿಂದ ಜ್ಞಾನಯಜ್ಞದ ಮೂಲಕ ಉಪಾಸಿಸುತ್ತಾರೆ. ಕೆಲವರು ವಿರಾಟ್ ಸ್ವರೂಪೀ ಪರಮೇಶ್ವರನಾದ ಭಗವಂತನನ್ನು ಬೇರೆ ಭಾವದಿಂದ ಉಪಾಸಿಸುವರು. ದೃಢನಿಶ್ಚಯವುಳ್ಳ ಭಕ್ತರು ಭಗವಂತನ ಪ್ರಾಪ್ತಿಗಾಗಿ ನಿರಂತರ ಧ್ಯಾನದಲ್ಲಿ ಮಗ್ನರಾಗಿ, ಅನನ್ಯ ಪ್ರೇಮದಿಂದ ಆತನನ್ನು ಉಪಾಸಿಸುವರು. ನಿಷ್ಕಾಮ ಭಾವದಿಂದ ನಾವು ಭಗವಂತನಿಗೆ ಅರ್ಪಿಸುವ ಒಂದು ಪತ್ರ, ಒಂದು ಹೂವು ಅಥವಾ ಒಂದು ಫಲವಾಗಿರಬಹುದು–ಅದನ್ನು ಪ್ರೀತಿಯಿಂದ, ಭಕ್ತಿಯಿಂದ, ದೈವೀ ಭಾವದಿಂದ ಸಮರ್ಪಿಸಿದಾಗ, ಆತನು ಅದನ್ನು ಸಾಕಾರ ರೂಪದಿಂದ ಸ್ವೀಕರಿಸಿ ನಮ್ಮನ್ನು ಕಾರುಣ್ಯದಿಂದ ಅನುಗ್ರಹಿಸುವನು. ನಾವು ಮಾಡುವ ಪ್ರತಿಯೊಂದು ಕರ್ಮವನ್ನು ಆ ಭಗವಂತನಿಗೆ ಸಮರ್ಪಿಸಿದಾಗ, ಸಂನ್ಯಾಸಯೋಗದ ಚಿತ್ತವುಳ್ಳವರಾಗಿ, ಕರ್ಮಬಂಧನದಿಂದ ಮುಕ್ತರಾಗಿ ಆ ಪರಮಾತ್ಮನನ್ನೇ ಹೊಂದುತ್ತೇವೆ. ಸಮಸ್ತ ಪ್ರಾಣಿಗಳಲ್ಲಿ ಆ ಪರಮಾತ್ಮನಿದ್ದರೂ, ನಿರಂತರ ಪ್ರೇಮದಿಂದ ಭಜಿಸುವ ಭಕ್ತರು ಆ ಪರಮಾತ್ಮನಲ್ಲಿ ಇರುವರು. ಅಂತಹ ಭಕ್ತರಲ್ಲಿ ಆ ಪರಮಾತ್ಮನು ಪ್ರಕಟನಾಗುವನು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

ನಿಷ್ಕಾಮ ಭಾವದಿಂದ ನಿತ್ಯ ನಿರಂತರ ಪರಮಾತ್ಮನನ್ನು ಭಜಿಸುವ ಪ್ರೇಮಿ ಭಕ್ತರ ಯೋಗಕ್ಷೇಮವನ್ನು ಆ ಪರಮಾತ್ಮನೇ ಸ್ವತಃ ವಹಿಸಿಕೊಳ್ಳುವನು. ನಿಮ್ಮ ಜೀವನಕ್ಕೆ ಬೇಕಾದ ಅವಶ್ಯಕತೆಗಳನ್ನು ಕೊಟ್ಟು ನಿಮ್ಮನ್ನು ಪೋಷಿಸುವನು. (ಯೋಗವೆಂದರೆ ಕೊಡುವುದು, ಕ್ಷೇಮ–ವೆಂದರೆ ನೋಡಿಕೊಳ್ಳುವುದು).

ಆ ಪರಮಾತ್ಮನು ಸದಾ ನಮ್ಮೊಂದಿಗಿರುವನು ಎಂಬ ಭಾವನೆಯಲ್ಲಿ/ಪ್ರಜ್ಞೆಯಲ್ಲಿ ನಾವಿದ್ದರೆ, ನಾವು ಎಂದಿಗೂ ಆಧ್ಯಾತ್ಮಿಕ ಪ್ರಯತ್ನದಲ್ಲಿ ವಿಫಲರಾಗುವುದಿಲ್ಲ. ಕರ್ಮಬಂಧನದಿಂದ ಮುಕ್ತರಾಗಲು, ಆತ್ಮವು ಅನೇಕ ಜನ್ಮಗಳ ಹೋರಾಟ ನಡೆಸಬೇಕಾಗಿದೆ. ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಆಯ್ಕೆ ಸದಾ ಯೋಗದ ಮುಖಾಂತರವೇ. ಇದಕ್ಕೆ ಪರ್ಯಾಯ ಮಾರ್ಗವಿಲ್ಲ. ಪರಮಾತ್ಮನನ್ನು ತಲುಪಲು ಯೋಗವೊಂದೇ ದಾರಿ.

ರಾಜವಿದ್ಯಾ ಎಂದರೆ, ದೇವರೇ ಎಲ್ಲಾ ಎಂದು ತಿಳಿಯುವುದು. ರಾಜಗುಹ್ಯ ಎಂದರೆ, ದೇವರ ಧರ್ಮದ ಪ್ರಕಾರ ಜೀವನ ನಡೆಸಿ ಎಲ್ಲವನ್ನು ದೇವರಿಗೆ ಅರ್ಪಿಸುವುದು.

ಪರಮಾತ್ಮನನ್ನೇ ಗುರಿಯಾಗಿಸಿಕೊಂಡು, ಆತನಲ್ಲಿ ಮನಸ್ಸುಳ್ಳವರಾಗಿ, ಆತ್ಮನಲ್ಲಿ ಪರಮಾತ್ಮನನ್ನು ನೆಲೆಗೊಳಿಸಿ, ಆತನ ಭಕ್ತರಾಗಿ, ಸರ್ವವನ್ನು ಆತನಿಗೆ ಸಮರ್ಪಿಸಿದಾಗ ಮಾತ್ರ ನಾವು ಆತನಲ್ಲಿ ಯುಕ್ತರಾಗಿ ಆತನನ್ನು ಹೊಂದುತ್ತೇವೆ. ಅದುವೇ ಅಕ್ಷರಬ್ರಹ್ಮ ಧರ್ಮ.

# ಅಧ್ಯಾಯ – 10

## ವಿಭೂತಿ ಯೋಗಃ

ವಿಭೂತಿ ಎಂದರೆ ಪರಮಾತ್ಮನ ರೂಪ, ದಿವ್ಯಶಕ್ತಿ, ಐಶ್ವರ್ಯ, ಅಂಶ, ಲೀಲೆಗಳು.

ಇಂದ್ರಿಯಗಳಿಗೆ ಗೋಚರಿಸದ, ಅತೀಂದ್ರಿಯವಾದ, ಸಮಾಧಿ ಸ್ಥಿತಿಯಲ್ಲಿ ಮಾತ್ರವೇ ತಿಳಿಯಬಹುದಾದಂತಹ, ಅಂತಿಮ ಸತ್ಯ. ಸಕಲ ಸೃಷ್ಟಿಗೆ ಕಾರಣ ಮೂಲನಾದ ಅಕ್ಷರಬ್ರಹ್ಮನ ದೈವೀ ಸ್ವರೂಪವೇ ಶ್ರೀ ಕೃಷ್ಣ.

ಭಗವಂತನ ರಹಿತವಾದ ಚರಾಚರ ಪ್ರಾಣಿ ಯಾವುದೂ ಈ ಸೃಷ್ಟಿಯಲ್ಲಿಲ್ಲ. ಸಮಸ್ತ ಬ್ರಹ್ಮಾಂಡವೇ ಆತನ ವಿಭೂತಿ. ಅಂತಹ ಕೊನೆಯಿಲ್ಲದ ವಿಭೂತಿಗಳಲ್ಲಿ ಕೆಲವೊಂದು ಮುಖ್ಯವಾದ ವಿಭೂತಿಗಳನ್ನು ಮಾತ್ರ ಈ ಅಧ್ಯಾಯದಲ್ಲಿ ನಾವು ಕಾಣಬಹುದು.

ಶ್ರೀಕೃಷ್ಣನ ಮುಖಾಂತರ ಅಕ್ಷರಬ್ರಹ್ಮನು ಇಲ್ಲಿ ತನ್ನ ವ್ಯಕ್ತ ಮತ್ತು ಅವ್ಯಕ್ತ ವಿಭೂತಿಗಳನ್ನು ಹೇಳಿರುವನು. ಧ್ಯಾನ ಮಾಡಲು ಶ್ರೇಷ್ಠವಾದ ವಿಭೂತಿಗಳನ್ನು ಹೆಸರಿಸುತ್ತಾ 'ಓಂ'ಕಾರ, ಶಿವ, ವಿಷ್ಣು, ಗಾಯತ್ರಿ ಮಂತ್ರ, ಗಂಗೆ, ಅಶ್ವತ್ಥ ವೃಕ್ಷ ಮುಂತಾದವುಗಳನ್ನು ತಿಳಿಸುವನು. ಭಗವಂತನಲ್ಲೇ ಭಾವವುಳ್ಳ ಸಪ್ತರ್ಷಿಗಳು, ಸನಕಾದಿಗಳು, ಮನುಗಳು ಮುಂತಾದವರು, ಆತನಿಂದಲೇ ಉತ್ಪತ್ತಿಯಾದವರು. ಅರ್ಜುನನ ಪ್ರಾರ್ಥನೆಯ ಮೇರೆಗೆ ಮುಂದುವರೆದ ಶ್ರೀಕೃಷ್ಣನು ಇನ್ನೂ ಕೆಲವು ವಿಭೂತಿಗಳನ್ನು ಹೆಸರಿಸುವನು ಬ್ರಹ್ಮ, ಸಾಮವೇದ, ಶಂಕರ, ಬೃಹಸ್ಪತಿ, ಬ್ರಹ್ಮವಿದ್ಯೆ, ಭೃಗು, ಉಚ್ಚೈಶ್ರವ, ವಜ್ರಾಯುಧ, ಕಾಮಧೇನು, ಐರಾವತ ಮುಂತಾದವುಗಳು. ಹೀಗೆ ಯಾವ ಯಾವ ವಸ್ತುಗಳು ಐಶ್ವರ್ಯಯುಕ್ತ, ಕಾಂತಿಯುಕ್ತ ಮತ್ತು ಶಕ್ತಿಯುಕ್ತವಾಗಿದೆಯೋ ಅವೆಲ್ಲವೂ ಭಗವಂತನ ತೇಜಸ್ಸಿನ ಅಭಿವ್ಯಕ್ತಿ ರೂಪಗಳು ಮಾತ್ರವಲ್ಲದೆ, ಬುದ್ಧಿಭಾವಗಳೂ ಸಹ ಆತನಿಂದಲೇ ಉಂಟಾಗುತ್ತವೆ. ನಿರ್ಣಯ ಶಕ್ತಿ, ಕ್ಷಮೆ, ಸತ್, ಮನೋ ನಿಗ್ರಹ, ಸಮತೆ, ಕೀರ್ತಿ ಮುಂತಾದವು ಎಲ್ಲವನ್ನೂ ಹೇಳಿದ ಶ್ರೀಕೃಷ್ಣನು ಅವ್ಯಕ್ತವಾದ ತನ್ನ ಸರ್ವಾತ್ಮ ರೂಪವನ್ನು ಹೇಳುವನು. ಸಮಸ್ತ ಪ್ರಾಣಿಗಳ ಹೃದಯದಲ್ಲಿ ಆತ್ಮರೂಪನಾಗಿದ್ದು, ಅದರ ಆದಿ–ಮಧ್ಯ–ಅಂತ್ಯಗಳಾಗಿರುವನು. ಆತ್ಮನು, ಅತಿ ಮುಖ್ಯವಾದ, ಧ್ಯಾನಿಸಲು ಅತಿ ಶ್ರೇಷ್ಠವಾದ ವಿಭೂತಿ, ಈ ಸತ್ಯವನ್ನು ತಿಳಿದಾಗ ರೋಮಾಂಚನಗೊಳ್ಳುವ ಸರದಿ ನಮ್ಮದಾಗುತ್ತದೆ.

ಪರಮೈಶ್ವರ್ಯವಾದ ಈ ವಿಭೂತಿಯನ್ನು ಮತ್ತು ಯೋಗ ಶಕ್ತಿಯನ್ನು ತತ್ತ್ವತಃ ತಿಳಿದವರು ಭಕ್ತಿಯಿಂದ ಯುಕ್ತರಾಗುತ್ತಾರೆ. ಬುದ್ಧಿವಂತ ಭಕ್ತರು ಭಗವಂತನನ್ನೇ ನಿತ್ಯ ನಿರಂತರ ಭಜಿಸುವರು. ಇಂತಹ ಭಕ್ತರಿಗೆ, ಪರಮಾತ್ಮನು ತನ್ನನ್ನೇ ಪಡೆಯುವ ತತ್ತ್ವಜ್ಞಾನ ರೂಪವಾದ ಯೋಗವನ್ನು ಕರುಣಿಸುವನು. ಅಂತಹವರ ಅಂತಃಕರಣದಲ್ಲಿ ಸ್ಥಿತನಾದ ಭಗವಂತನು ಪ್ರಕಾಶಮಯ ತತ್ತ್ವಜ್ಞಾನರೂಪಿ ದೀಪದಿಂದ, ಅವರ

ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ, ಆತ್ಮಸಾಕ್ಷಾತ್ಕಾರ ನೀಡುವನು. ಭಗವಂತನನ್ನು ಅಜನ್ಮ, ಅನಾದಿ ಮತ್ತು ಸಮಸ್ತ ಲೋಕಗಳ ಮಹಾನ್ ಈಶ್ವರನೆಂದು ತತ್ತ್ವತಃ ತಿಳಿಯುವಂತಹ ಜ್ಞಾನಿಗಳು ಯೋಗ ಸಾಧನೆಯಿಂದ ಭಗವಂತನಲ್ಲಿ ಯುಕ್ತರಾಗುವರು.

**ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।**
**ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥**

ಈ ಸಮಸ್ತ ಬ್ರಹ್ಮಾಂಡವನ್ನು ಅಕ್ಷರಬ್ರಹ್ಮನು ತನ್ನ ಒಂದಂಶದಲ್ಲಿ ಧರಿಸಿಕೊಂಡಿರುವುದಾಗಿ ಹೇಳಿದಾಗ, ಕೃಷ್ಣನು ಸ್ವತಃ ಅಕ್ಷರಬ್ರಹ್ಮನ ಪ್ರತಿರೂಪ ಎಂಬ ಸತ್ಯದ ದರ್ಶನವಾಗುತ್ತದೆ. ಆಗ ಅರ್ಜುನನು ಒಬ್ಬ ಯೋಧನಾಗಿರದೆ, ಸತ್ಯದ ಅನ್ವೇಷಕನಾಗುತ್ತಾನೆ.

# ಅಧ್ಯಾಯ – 11

## ವಿಶ್ವರೂಪ ದರ್ಶನ ಯೋಗಃ

ಭಗವಂತನು ತನ್ನೆಲ್ಲಾ ವಿಭೂತಿಗಳನ್ನು ವ್ಯಕ್ತರೂಪದಲ್ಲಿ, ಸಾಕಾರವಾಗಿ ಅರ್ಜುನನಿಗೆ ನೀಡಿದ ದರ್ಶನ ರೂಪವೇ ವಿಶ್ವರೂಪ ದರ್ಶನ. ಈ ದರ್ಶನದಲ್ಲಿ ಸಂಪೂರ್ಣ ಸೃಷ್ಟಿಯನ್ನು, ದೇವರಲ್ಲಿ ಒಂದೆಡೆ ನೋಡಬಹುದು.

ಈ ಅಧ್ಯಾಯವು ಸಂಪೂರ್ಣ ಗೀತೆಯಲ್ಲಿ ಅತ್ಯಂತ ಅದ್ಭುತವಾದ ಅಧ್ಯಾಯವಾಗಿದೆ. ಭಗವಂತನು ತನ್ನ ವಿಭೂತಿಗಳನ್ನು ಹೇಳಿದಾಗ, ಅರ್ಜುನನು ಆತನ ಎಲ್ಲಾ ವಿಭೂತಿಗಳ ಸಾಕಾರ ರೂಪವನ್ನು ನೋಡಲು ಇಚ್ಛಿಸಿ ಆತನಲ್ಲಿ ಪ್ರಾರ್ಥಿಸುವನು. ಆಗ ಭಗವಂತನು

**ನ ತು ಮಾಂ ಶಕ್ಯಸೇ ದ್ರುಷ್ಟುಮನೇನೈವ ಸ್ವಚಕ್ಷುಷಾ ।**
**ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥**

ತನ್ನ ವಿಶ್ವರೂಪವನ್ನು ಸಾಮಾನ್ಯ ಚರ್ಮ ಚಕ್ಷುಗಳಿಂದ ನೋಡಲಾಗುವುದಿಲ್ಲವೆಂದು ಹೇಳಿ, ದಿವ್ಯ ದೃಷ್ಟಿಯನ್ನು ನೀಡುವನು. ಅರ್ಜುನನು, ದಿವ್ಯದೃಷ್ಟಿಯನ್ನು ಪ್ರಸಾದಿಸಿದ ಕೃಷ್ಣನ ಅಕ್ಷರಬ್ರಹ್ಮ ಸ್ವರೂಪವನ್ನು ಸರ್ವೋಚ್ಛ ಉಗ್ರರೂಪದಲ್ಲಿ ಬ್ರಹ್ಮಾಂಡದ ಅಧಿಪತಿಯಾಗಿ ನೋಡುತ್ತಾನೆ. ಈ ದರ್ಶನವನ್ನು ಪಡೆದ ಅರ್ಜುನನು ಸವಿಕಲ್ಪ ಸಮಾಧಿಯಿಂದ ನಿರ್ವಿಕಲ್ಪ ಸಮಾಧಿಗೆ ಏರುವನು. ಇದು ಸಮಾಧಿ ಸ್ಥಿತಿಯ ಅಂತಿಮ ಹಂತ. ಪ್ರಜ್ಞೆಯ ಅತ್ಯುನ್ನತ ಮಟ್ಟ.

ಅರ್ಜುನನು ವಿಶ್ವರೂಪದಲ್ಲಿ ಸಂಪೂರ್ಣ ಜಗತ್ತು ಒಂದೇ ಕಡೆ ಇರುವುದನ್ನು ನೋಡಿ ವಿಸ್ಮಿತ ಮತ್ತು ಹರ್ಷಿತನಾಗಿ ಶ್ರದ್ಧೆಯಿಂದ ಭಗವಂತನಿಗೆ ವಂದಿಸುವನು. ವಿಶ್ವರೂಪದಲ್ಲಿ ಸಂಪೂರ್ಣ ದೇವತೆಗಳನ್ನು, ಶಿವನನ್ನು, ಚತುರ್ಮುಖ ಬ್ರಹ್ಮನನ್ನು, ಸಮಸ್ತ ಋಷಿಗಳನ್ನು ಸಮಸ್ತ ಜೀವಿಗಳ ಸಮುದಾಯವನ್ನು, ಹನ್ನೊಂದು ರುದ್ರರನ್ನು, ದ್ವಾದಶಾದಿತ್ಯರನ್ನು, ಅಷ್ಟವಸುಗಳನ್ನು, ಸಾಧ್ಯರನ್ನು, ವಿಶ್ವೇ ದೇವತೆಗಳನ್ನು, ಅಶ್ವಿನಿ ಕುಮಾರರನ್ನು, ಮರುದ್ಗಣರನ್ನು, ಪಿತೃಗಳ ಸಮುದಾಯವನ್ನು, ಸ್ತುತಿ ಮಾಡುತ್ತಿರುವ ಮಹರ್ಷಿ ಸಮುದಾಯವನ್ನು ಹೀಗೆ ಎಲ್ಲರನ್ನೂ ದರ್ಶಿಸುವನು.

ಅನೇಕ ಮುಖಗಳುಳ್ಳ, ಅನೇಕ ಕಣ್ಣುಗಳುಳ್ಳ, ಅನೇಕ ಬಗೆಯ ದಿವ್ಯವಾದ ಆಭರಣಗಳಿಂದ ಅಲಂಕೃತವಾದ, ಅನೇಕ ದಿವ್ಯಶಸ್ತ್ರಗಳನ್ನು ಧರಿಸಿರುವ, ದಿವ್ಯ ಮಾಲೆ ಮತ್ತು ವಸ್ತ್ರಗಳಿಂದ ಅಲಂಕೃತವಾಗಿರುವಂತಹ, ದಿವ್ಯ ಗಂಧವನ್ನು ಲೇಪಿಸಿಕೊಂಡಿರವಂತಹ, ಎಲ್ಲಾ ಕಡೆ ಮುಖಗಳುಳ್ಳ, ಅನೇಕ ಬಾಹುಗಳುಳ್ಳ, ಅನೇಕ ಉದರಗಳುಳ್ಳ, ಎಲ್ಲಾ ಕಡೆ ಅನಂತ ರೂಪಗಳುಳ್ಳ, ಸೂರ್ಯ–ಚಂದ್ರರೇ ನೇತ್ರಗಳಾಗಿರುವ,

ಪ್ರಜ್ವಲಿಸುವ ಅಗ್ನಿಯಂತೆ ಮುಖವುಳ್ಳ, ಆದಿ–ಮಧ್ಯ–ಅಂತ್ಯ ರಹಿತನಾಗಿ ಸಮಸ್ತ ಜಗತ್ತನ್ನು ಬೆಳಗುವವನಾಗಿರುವ ಅಕ್ಷರಬ್ರಹ್ಮನ ವಿಶ್ವ ರೂಪವನ್ನು ದರ್ಶಿಸಿದನು. ಭೂತ, ವರ್ತಮಾನ ಮತ್ತು ಭವಿಷ್ಯತ್ತನ್ನು ವಿಶ್ವರೂಪದಲ್ಲಿ ದರ್ಶಿಸಿ ಅರ್ಜುನನು ಆಶ್ಚರ್ಯಚಕಿತನಾದನು.

ಕೋರೆದಾಡೆಗಳಿಂದಾಗಿ ವಿಕರಾಳವಾದ ಪ್ರಳಯಕಾಲದ ಅಗ್ನಿಯಂತೆ ಪ್ರಜ್ವಲಿತವಾಗಿರವ ಮುಖವುಳ್ಳ, ಎರಡೂ ಸೈನ್ಯದಲ್ಲಿರುವ ಯೋಧರು ವಿರಾಟ್ ಸ್ವರೂಪದ ಬಾಯಿಯಲ್ಲಿ ಪ್ರವೇಶಿಸಿ ನಾಶವಾಗುತ್ತಿರುವ, ಸಮಸ್ತ ಜನರನ್ನು ಪ್ರಜ್ವಲಿತ ಬಾಯಿಗಳಿಂದ ನುಂಗಿ ಹಾಕುತ್ತಿರುವ, ಸ್ವರ್ಗ ಮತ್ತು ಪೃಥ್ವಿಯ ನಡುವೆ ಎಲ್ಲಾ ದಿಕ್ಕುಗಳನ್ನೊಳಗೊಂಡಂತೆ ವ್ಯಾಪಿಸಿರುವ ಅಲೌಕಿಕವಾದ ಮತ್ತು ಭಯಂಕರವಾದ ದೃಶ್ಯವನ್ನು ನೋಡಿ ಮೂರು ಲೋಕಗಳ ಎಲ್ಲಾ ಜನರು ಅರ್ಜುನನ್ನೊಳಗೊಂಡಂತೆ ಭಯಗೊಳ್ಳುವರು.

ಭಯದಿಂದ ನಡುಗುತ್ತಾ ಅರ್ಜುನನು, ಗದ್ಗದಿತನಾಗಿ ಭಗವಂತನನ್ನು ಸ್ತುತಿಸತೊಡಗುವನು. ಕೃಷ್ಣನನ್ನು ತನ್ನಂತೆ ಸಾಮಾನ್ಯನೆಂದು ತಿಳಿದುಕೊಂಡು ತಾನು ನಡೆದುಕೊಂಡ ರೀತಿಗೆ ಅರ್ಜುನನು ಕ್ಷಮೆ ಯಾಚಿಸುವನು. ಆದಿಕರ್ತೃವಾದ, ಸತ್–ಅಸತ್ ಗಿಂತಲೂ ಶ್ರೇಷ್ಠನಾದ, ಸಚ್ಚಿದಾನಂದ ಘನ ಬ್ರಹ್ಮನಾದ, ಆದಿದೇವನಾದ ಸನಾತನ ಪುರುಷನಾದ, ಅನಂತನಾದ, ಸರ್ವರೂಪನಾಗಿರುವ, ಚರಾಚರ ಜಗತ್ತಿನ ಜನಕನಾಗಿರುವ, ಸರ್ವಶ್ರೇಷ್ಠ ಗುರುವಾಗಿರುವ, ಅತ್ಯಂತ ಪೂಜನೀಯನಾಗಿರುವ, ಅನುಪಮ ಪ್ರಭಾವವುಳ್ಳ ಅಕ್ಷರಬ್ರಹ್ಮನು ನೀನೆಂದು ಶ್ರೀಕೃಷ್ಣನನ್ನು ಸ್ತುತಿಸಿ, ಆತನಿಗೆ ಎಲ್ಲಾ ಕಡೆಗಳಿಂದಲೂ, ಪದೇ ಪದೇ ನಮಸ್ಕರಿಸುತ್ತಾ ತನ್ನ ದೇಹವನ್ನು ಭಗವಂತನ ಚರಣಗಳಲ್ಲಿ ಅರ್ಪಿಸಿ, ಪ್ರಸನ್ನನಾಗುವಂತೆ ಪ್ರಾರ್ಥಿಸುವನು. ಶ್ರೀಕೃಷ್ಣನನ್ನು ಮಕುಟ, ಗದೆ ಮತ್ತು ಚಕ್ರವನ್ನು ಧರಿಸಿರುವ, ನೋಡಲು ದುರ್ಲಭವಾಗಿರುವ ಚತುರ್ಭುಜ ರೂಪದಲ್ಲಿ ನೋಡಲು ಬಯಸುವನು.

ವೇದಾಧ್ಯಯನದಿಂದಾಗಲಿ, ಯಜ್ಞಗಳಿಂದಾಗಲಿ, ದಾನದಿಂದಾಗಲಿ, ವೈದಿಕ ಕರ್ಮಗಳಿಂದಾಗಲಿ, ಉಗ್ರವಾದ ತಪಸ್ಸಿನಿಂದಾಗಲಿ ನೋಡಲು ಅಶಕ್ಯವಾದ ಭಯಂಕರ ರೂಪವನ್ನು ಶಾಂತವಾಗಿಸಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿರುವ ಚತುರ್ಭುಜ ರೂಪವಾದ ಸೌಮ್ಯ ರೂಪವನ್ನು ಧರಿಸಿ ಅರ್ಜುನನಿಗೆ ಧೈರ್ಯ, ಸ್ಥೈರ್ಯಗಳನ್ನು ನೀಡುವನು. ನಂತರ ಅರ್ಜುನನು ಶಾಂತಚಿತ್ತನಾಗಿ ದುರ್ಲಭವಾದ ಚತುರ್ಭುಜ ರೂಪವನ್ನು ದರ್ಶಿಸಿದನು.

ಯಾರು ಸಮಸ್ತ ಕರ್ತವ್ಯ ಕರ್ಮಗಳಲ್ಲಿ ಆಸಕ್ತಿ ರಹಿತರಾಗಿ, ಸರ್ವ ಪ್ರಾಣಿಗಳಲ್ಲಿ ವೈರಭಾವರಹಿತರಾಗಿ, ಭಗವಂತನ ಅನನ್ಯ ಭಕ್ತರಾಗಿ, ಆತನ ಪರಾಯಣರಾಗುತ್ತಾರೆಯೋ, ಅವರು ಆ ಭಗವಂತನನ್ನೇ ತಿಳಿಯುವರು, ನೋಡುವರು ಮತ್ತು ಹೊಂದುವರು.

# ಅಧ್ಯಾಯ – 12
## ಭಕ್ತಿಯೋಗಃ

ನಿರುಪಾಧಿಕವಾದ (ಬೇಡಿಕೆಯಿಲ್ಲದ) ನಿಸ್ವಾರ್ಥ ಪ್ರೀತಿಯನ್ನು ದೇವರಲ್ಲಿ ನಿರಂತರವಾಗಿ ಇರಿಸುವುದೇ ಭಕ್ತಿ. ಇಂತಹ ಭಕ್ತಿಯು ನಮ್ಮ ಕೃತಿಗಳಲ್ಲಿ ವ್ಯಕ್ತವಾದಾಗ ಮಾತ್ರ ಅದು ನಿಜವಾದ ಭಕ್ತಿ. ಈ ಅಧ್ಯಾಯವು ಆಧ್ಯಾತ್ಮಿಕ ಬೆಳವಣಿಗೆಯ ಮೇಲೆ ನಮಗೆ ಇರಬೇಕಾದ ನಂಬಿಕೆ ಮತ್ತು ಶ್ರದ್ಧೆಯ ಮಹತ್ವವನ್ನು ತಿಳಿಸುತ್ತದೆ. ಆಧ್ಯಾತ್ಮಿಕ ಜೀವನಕ್ಕೆ ಸ್ಫೂರ್ತಿಯನ್ನು ನೀಡುತ್ತದೆ.

ನಮ್ಮ ಹೃದಯದಲ್ಲಿ ನೆಲೆಸಿರುವ ಪರಮಾತ್ಮನ ಅಂಶವಾದ ಆತ್ಮನಲ್ಲಿ ನಾವು ಯುಕ್ತರಾದಾಗ, ಆ ಪರಮಾತ್ಮನನ್ನು ಸೇರಲು ಸಾಧ್ಯ. ಇದು ಸಾಧ್ಯವಾಗುವುದು ನಮ್ಮ ಪ್ರಜ್ಞೆಯು ಪೂರ್ಣವಾಗಿ ಪ್ರಜ್ವಲಿಸಿದಾಗ ಮಾತ್ರ. ಇಂದ್ರಿಯ ಸಮುದಾಯವನ್ನು ಚೆನ್ನಾಗಿ ವಶಪಡಿಸಿಕೊಂಡು ಮನ–ಬುದ್ಧಿಗಳಿಗೆ ಅತೀತನಾದ ಸರ್ವವ್ಯಾಪೀ ಅವರ್ಣನೀಯ ಸ್ವರೂಪವುಳ್ಳ ಹಾಗೂ ಸದಾ ಏಕರೂಪನಾಗಿರುವ ನಿತ್ಯ, ಅಚಲ, ನಿರಾಕಾರ ಅವಿನಾಶೀ ಸಚ್ಚಿದಾನಂದ ಘನನಾದ ಬ್ರಹ್ಮನನ್ನು, ನಿರಂತರ ಐಕ್ಯಭಾವದಿಂದ ಧ್ಯಾನ ಮಾಡುವವರು ಸಮಸ್ತ ಪ್ರಾಣಿಗಳ ಹಿತದಲ್ಲಿ ತತ್ಪರರಾಗಿ, ಎಲ್ಲರಲ್ಲಿ ಸಮಭಾವವುಳ್ಳ ಯೋಗಿಗಳಾಗಿ ಆ ಪರಮಾತ್ಮನನ್ನೇ ಹೊಂದುತ್ತಾರೆ. ಆದರೆ ಇಂತಹ ನಿರ್ಗುಣ ನಿರಾಕಾರ ಬ್ರಹ್ಮನನ್ನು ಧ್ಯಾನಿಸಲು ಬಹಳ ಕಠಿಣವಾಗಿರುವುದರಿಂದ, ನಾವು ನಮ್ಮ ಮನಸ್ಸನ್ನು ನಿರಂತರವಾಗಿ ಸುಗುಣ ಸಾಕಾರ ಮೂರ್ತಿಯಲ್ಲಿ ಸ್ಥಿತವಾಗಿಸಿ, ನಮ್ಮ ಕರ್ತವ್ಯ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಭಗವಂತನ ಮೇಲಿನ ಪ್ರೀತಿಗಾಗಿ ಮಾಡಬೇಕು. ಯಾರು ತಮ್ಮ ಸಂಪೂರ್ಣ ಚಿತ್ತವನ್ನು ಆ ಭಗವಂತನಲ್ಲಿ ತೊಡಗಿಸುತ್ತಾರೆಯೋ, ಅಂತಹ ಪ್ರೇಮಿ ಭಕ್ತರನ್ನು ಭಗವಂತನು ಮೃತ್ಯುರೂಪೀ ಸಂಸಾರ ಸಾಗರದಿಂದ ದಾಟಿಸುವನು.

ಭಗವಂತನಲ್ಲಿ ನಾವು ಕರುಣಾಳು ತಂದೆಯನ್ನು, ದೈವೀಸ್ವರೂಪದ ತಾಯಿಯನ್ನು, ಬುದ್ಧಿವಂತ ಸ್ನೇಹಿತನನ್ನು, ಅನುರಾಗ ತುಂಬಿದ ಸಂಗಾತಿಯನ್ನು ಕಾಣಬಹುದು. ಮುದ್ದಿನಿಂದ ಕೂಡಿದ ತುಂಟ ಮಗುವನ್ನು ಪ್ರೀತಿಸುವಂತೆ ಆ ಪರಮಾತ್ಮನನ್ನು ಪ್ರೀತಿಸಬಹುದು. ಭಗವಂತನನ್ನು ಸೇರಲು, ಆತನಲ್ಲಿ ಪ್ರೀತಿಯನ್ನು ವ್ಯಕ್ತಪಡಿಸುವುದು ಕ್ಷೇಮವಾದ, ಶ್ರೇಷ್ಠವಾದ, ಸರಳವಾದ ಹಾಗು ಬಹಳ ಸುಂದರವಾದ ಮಾರ್ಗ.

ನಾವು ಸದಾ ಸ್ವಾರ್ಥ ರಹಿತರಾಗಿ, ದಯಾಪರರಾಗಿ, ಕ್ಷಮಾಶೀಲರಾಗಿ, ಜಿತೇಂದ್ರಿಯರಾಗಿ, ಸಂತುಷ್ಟರಾಗಿ, ದೃಢ ನಿಶ್ಚಯವುಳ್ಳವರಾಗಿ, ಅಂತರಂಗ–ಬಹಿರಂಗ ಶುದ್ಧರಾಗಿ, ಚತುರರಾಗಿ, ನಿಷ್ಪಕ್ಷಪಾತರಾಗಿ, ನಿರಹಂಕಾರಿಗಳಾಗಿ, ಮೋಹರಹಿತರಾಗಿ, ಆಸಕ್ತಿರಹಿತರಾಗಿ, ಸಮಾನತೆಯುಳ್ಳವರಾಗಿ, ಸಮಭಾವವುಳ್ಳವರಾಗಿ, ಸ್ಥಿರ ಬುದ್ಧಿಯುಳ್ಳ ಭಕ್ತರಾಗಿರಬೇಕು.

ಹರ್ಷ, ಅಸೂಯೆ, ಭಯ, ಉದ್ವೇಗ, ಇಚ್ಛೆ, ಕ್ರೋಧಗಳಿಂದ ಮುಕ್ತರಾಗಿರಬೇಕು. ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸಿ, ಶುಭ–ಅಶುಭ ಕರ್ಮಗಳ ಫಲಗಳನ್ನು ತ್ಯಾಗ ಮಾಡಿರುವವರಾಗಿರಬೇಕು. ಶತ್ರು–ಮಿತ್ರರಲ್ಲಿ ಮತ್ತು ಮಾನ–ಅಪಮಾನಗಳಲ್ಲಿ ಸಮಾನ ಭಾವವುಳ್ಳವರಾಗಿರಬೇಕು. ಸಮತ್ವವನ್ನು ಪಡೆದಾಗ ಮಾತ್ರವೇ ನಾವು ಭಗವಂತನಲ್ಲಿ ಯುಕ್ತರಾಗಲು ಸಾಧ್ಯ. ಇದನ್ನು ಅಭ್ಯಾಸ ಬಲದಿಂದ ನಾವು ಬೆಳೆಸಿಕೊಳ್ಳಬೇಕು. ಅಭ್ಯಾಸ ಮಾಡಲು ಅಸಮರ್ಥರಾದಾಗ, ಭಗವಂತನ ಸೇವೆಗಾಗಿ ಕರ್ಮಪರಾಯಣರಾಗಬೇಕು. ಕರ್ಮ ಪರಾಯಣದಿಂದಲೂ ಭಗವಂತನ ಪ್ರಾಪ್ತಿ ರೂಪಿ ಸಿದ್ಧಿಯನ್ನು ಪಡೆಯಲು ಅಸಮರ್ಥರಾದರೆ, ಕರ್ಮಫಲ ತ್ಯಾಗವನ್ನು ಮಾಡಬೇಕು.

**ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಞಾನಾದ್ಧ್ಯಾನಂ ವಿಶಿಷ್ಯತೇ ।**
**ಧ್ಯಾನಾತ್ ಕರ್ಮ ಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್ ॥**

ಮರ್ಮವನ್ನರಿಯದೆ ಮಾಡಿದ ಅಭ್ಯಾಸಕ್ಕಿಂತ ಜ್ಞಾನವು ಶ್ರೇಷ್ಠ, ಜ್ಞಾನಕ್ಕಿಂತ ಭಗವಂತನ ಸ್ವರೂಪ ಧ್ಯಾನಶ್ರೇಷ್ಠ, ಧ್ಯಾನಕ್ಕಿಂತ ಎಲ್ಲ ಕರ್ಮಗಳ ಫಲತ್ಯಾಗವು ಶ್ರೇಷ್ಠವಾಗಿದೆ. ಫಲತ್ಯಾಗದಿಂದ ಭಗವಂತನನ್ನು ಶೀಘ್ರವಾಗಿ ಪಡೆಯಬಹುದು. ಜ್ಞಾನವಿಲ್ಲದೆ ಮಾಡುವ ಕರ್ಮಗಳಿಗಿಂತ ಜ್ಞಾನಪೂರ್ವಕ ಕರ್ಮಗಳು ಶ್ರೇಷ್ಠ.

ಭಕ್ತಿಯೆಂದರೆ ನಮಗೆ ಕಾಣಿಸುವ ಆಕಾರ ಹೊಂದಿರುವ ಅಕ್ಷರಬ್ರಹ್ಮನ ರೂಪವನ್ನು ಸೇವಿಸುವುದು. ಈ ರೀತಿ ಪರಮಾತ್ಮನ ಪರಾಯಣರಾಗಿ ಧರ್ಮಮಯ ಅಮೃತವನ್ನು ನಿಷ್ಕಾಮ ಪ್ರೇಮ ಭಾವದಿಂದ ಸೇವಿಸುವ ಭಕ್ತರು ಭಗವಂತನಿಗೆ ಹೆಚ್ಚು ಪ್ರಿಯರಾಗಿರುತ್ತಾರೆ.

# ಅಧ್ಯಾಯ – 13

## ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗಃ

ಭಗವದ್ಗೀತೆಯ ಮೊದಲ ಆರು ಅಧ್ಯಾಯಗಳಲ್ಲಿ 'ತ್ವಂ' ಅಂದರೆ ನಮ್ಮ ಬಗ್ಗೆ ತಿಳಿದುಕೊಳ್ಳುತ್ತೇವೆ. ಎರಡನೇ ಆರು ಅಧ್ಯಾಯಗಳಲ್ಲಿ 'ತತ್' ಎಂದರೆ, ಆ ಪರಮಾತ್ಮನ ಬಗ್ಗೆ ತಿಳಿದುಕೊಳ್ಳುತ್ತೇವೆ. ಮೂರನೇ ಆರು ಅಧ್ಯಾಯಗಳಲ್ಲಿ 'ಅಸಿ' ಅಂದರೆ ನಮ್ಮ ಹಾಗು ಆ ಪರಮಾತ್ಮನ ನಡುವೆ ಇರುವ ಸಂಪರ್ಕ ಮತ್ತು ಆತನನ್ನು ಸೇರುವ ಜ್ಞಾನವನ್ನು ಪಡೆಯುತ್ತೇವೆ.

ಈ ಅಧ್ಯಾಯದಲ್ಲಿ ಕ್ಷೇತ್ರ ಮತ್ತು ಕ್ಷೇತ್ರವನ್ನು ತಿಳಿದ ಕ್ಷೇತ್ರಜ್ಞನನ್ನು ಸಂಪೂರ್ಣವಾಗಿ ವರ್ಗೀಕರಿಸಿ ವಿಷಯವನ್ನು ಮಂಡಿಸಲಾಗಿದೆ. ಸರಳೀಕರಿಸಿ ಹೇಳುವುದಾದರೆ ಈ ದೇಹವು ಕ್ಷೇತ್ರವಾದರೆ, ಅದನ್ನು ಅರಿತ ಆತ್ಮವು ಕ್ಷೇತ್ರಜ್ಞ.

ಈ ದೇಹವು 20 ಬಹಿರಂಗ ತತ್ತ್ವಗಳು (5 ಪಂಚ ಭೂತಗಳು, 5 ಜ್ಞಾನೇಂದ್ರಿಯಗಳು, 5 ಕರ್ಮೇಂದ್ರಿಯಗಳು, 5 ಇಂದ್ರಿಯ ವಸ್ತುಗಳು) 4 ಅಂತರಂಗ ತತ್ತ್ವಗಳು (ಮನಸ್ಸು, ಬುದ್ಧಿ, ಅಹಂಕಾರ, ಮೂಲಪ್ರಕೃತಿ) 7 ವಿಕಾರಗಳು (ಇಚ್ಛಾ, ದ್ವೇಷ, ಸುಖ, ದುಃಖ, ಸ್ಥೂಲ ದೇಹದ ಪಿಂಡ, ಚೈತನ್ಯ, ಧೃತಿ) ಎಲ್ಲವೂ ಸೇರಿ 31 ತತ್ತ್ವಗಳಿಂದ ಕೂಡಿವೆ. ವಿಕಾರ ಸಹಿತ ಈ ದೇಹವೇ ಕ್ಷೇತ್ರ. ಎಲ್ಲಾ ರೀತಿಯ ಚಟುವಟಿಕೆಯಿರುವ ಈ ಬ್ರಹ್ಮಾಂಡವೂ ಸಹ ಕ್ಷೇತ್ರವೇ. ಈ ಪ್ರಕೃತಿಯು ಜಡ ಪ್ರಕೃತಿ ಮತ್ತು ಜೀವ ಪ್ರಕೃತಿಯನ್ನು ಒಳಗೊಂಡಿರುತ್ತದೆ. ಒಳಗೂ, ಹೊರಗೂ, ತುಂಬಿರುವ ಎಲ್ಲಾ ಕ್ಷೇತ್ರಗಳಲ್ಲಿರುವ ಭಗವಂತನೇ ಕ್ಷೇತ್ರಜ್ಞ. ಈ ಕ್ಷೇತ್ರವನ್ನು ಮತ್ತು ಕ್ಷೇತ್ರಜ್ಞನನ್ನು ತಿಳಿಯುವುದೇ ಜ್ಞಾನ.

ಈ ಜ್ಞಾನವನ್ನು ಹಲವಾರು ವಿಧವಾದ ವೇದಮಂತ್ರಗಳಲ್ಲಿ ನಾನಾ ಬಗೆಯ ಬ್ರಹ್ಮಸೂತ್ರಗಳಿಂದ ಕಾರಣ–ಪರಿಣಾಮಗಳ ತರ್ಕದೊಂದಿಗೆ ವರ್ಣಿಸಿದ್ದಾರೆ. ಆದರೆ ಭಗವದ್ಗೀತೆಯಲ್ಲಿ ಕ್ಷೇತ್ರಜ್ಞನಾದ ಭಗವಂತನೇ ಸ್ವಯಂ ಈ ಜ್ಞಾನವನ್ನು ನಮಗೆ ನೀಡಿರುವುದು ವಿಶೇಷ. ಈ ಜ್ಞಾನವನ್ನು ಪಡೆಯಲು ನಾವು ಅಳವಡಿಸಿಕೊಳ್ಳಬೇಕಾದ ಗುಣಗಳನ್ನು ಶ್ರೀ ಕೃಷ್ಣನು ಹೇಳಿರುವನು.

ನಮ್ರತೆ, ಗರ್ವವಿಲ್ಲದಿರುವುದು, ಅಹಿಂಸೆ, ಸಹನೆ, ಸರಳತೆ, ಆಚಾರ್ಯರ ಸೇವೆ, ಶುಚಿತ್ವ, ಸ್ಥೈರ್ಯ, ಆತ್ಮಸಂಯಮ, ಇಂದ್ರಿಯ ವಿಷಯಗಳಲ್ಲಿ ಅನಾಸಕ್ತಿ, ನಿರಹಂಕಾರ, ಹುಟ್ಟು–ಸಾವು–ಮುಪ್ಪು–ರೋಗ–ದುಃಖ ದೋಷಗಳ ವಿಮರ್ಶೆ, ಪುತ್ರ–ಪತ್ನಿ–ಮನೆ ಮುಂತಾದವುಗಳಲ್ಲಿ ಮೋಹವಿಲ್ಲದಿರುವುದು, ನಿರಂತರವಾಗಿ ಇಷ್ಟ–ಇಷ್ಟವಿಲ್ಲದರ ಪ್ರಾಪ್ತಿಯಲ್ಲಿ ಸಮಚಿತ್ತತೆ, ಯೋಗಾಭ್ಯಾಸದಿಂದ ಪರಮಾತ್ಮನಲ್ಲಿ ಸ್ಥಿರವಾದ ಬುದ್ಧಿ, ಲೋಪವಿಲ್ಲದ ಭಕ್ತಿ, ಏಕಾಂತ ಸ್ಥಳಗಳ ಹಂಬಲ, ಜನಸಮುದಾಯದಲ್ಲಿ ಅನಾಸಕ್ತಿ, ನಿರಂತರವಾಗಿ

ಆತ್ಮದ ಜ್ಞಾನದಲ್ಲಿರುವುದು, ತತ್ತ್ವಜ್ಞಾನದಿಂದ ಪರಮಾತ್ಮನ ಅನ್ವೇಷಣೆ–ಈ ಎಲ್ಲಾ ಗುಣಗಳು ಜ್ಞಾನವನ್ನು ಹೇಳುತ್ತವೆ. ಇದಕ್ಕೆ ಹೊರತಾದವು ಅಜ್ಞಾನ.

ಜ್ಞಾನವನ್ನು ಉಪದೇಶಿಸಿದ ಶ್ರೀಕೃಷ್ಣನು, ಜ್ಞೇಯನಾದ ಪರಮಾತ್ಮನ ಸ್ವರೂಪವನ್ನು ತಿಳಿಸುವನು. ಪರಮಾತ್ಮನು ಅಸ್ತಿತ್ವ ಇರುವವನೂ ಅಲ್ಲ, ಇಲ್ಲದಿರುವವನೂ ಅಲ್ಲ. ಎಲ್ಲೆಲ್ಲೂ ಕೈಗಳು, ಕಾಲುಗಳು, ಕಣ್ಣುಗಳು, ತಲೆಗಳು, ಮುಖಗಳು ಮತ್ತು ಕಿವಿಗಳಿರುವ ಭಗವಂತನು ಲೋಕದಲ್ಲಿ ಸರ್ವವ್ಯಾಪಿಯಾಗಿ ಆವರಿಸಿದ್ದಾನೆ. ಎಲ್ಲಾ ಇಂದ್ರಿಯಗಳ ಮೂಲ ಆಧಾರನು, ಆದರೂ ಇಂದ್ರಿಯ ರಹಿತನು; ಎಲ್ಲಾ ಜೀವಿಗಳ ಪಾಲಕನು ಆದರೂ ಅನಾಸಕ್ತನು, ಭೌತಿಕ ಗುಣಗಳ ಪ್ರಭು, ಆದರೂ ನಿರ್ಗುಣನು, ಎಲ್ಲಾ ಜೀವಿಗಳ ಒಳಗೂ, ಹೊರಗೂ ಇರುವನು. ಭೌತಿಕವಾಗಿ ಕಾಣಲಾಗದವರಿಗೆ ದೂರದಲ್ಲೂ, ಸೂಕ್ಷ್ಮವಾದ ಇಂದ್ರಿಯಗಳಿಗೆ ಗೋಚರನಾಗುವವರಿಗೆ ಹತ್ತಿರದಲ್ಲೂ ಇರುವನು. ವಿಭಜಿತನಾಗದವನಾದರೂ ಎಲ್ಲಾ ಜೀವಿಗಳಲ್ಲಿ ವಿಭಜಿತನಂತೆ ಕಾಣುವನು. ಎಲ್ಲಾ ಜೀವಿಗಳನ್ನು ಬ್ರಹ್ಮ ರೂಪದಿಂದ ಸೃಷ್ಟಿಸಿ, ವಿಷ್ಣು ರೂಪದಿಂದ ಪಾಲಿಸಿ–ಪೋಷಿಸಿ, ರುದ್ರ ರೂಪದಿಂದ ಲಯ ಮಾಡಿಕೊಳ್ಳುವನು. ಇಂತಹ ಪರಬ್ರಹ್ಮನು ಪ್ರಕಾಶಮಾನವಾದ ವಸ್ತುಗಳೆಲ್ಲದರ ಮೂಲನೂ ಆಗಿ ಎಲ್ಲರ ಹೃದಯದಲ್ಲಿ ವಿಶೇಷ ರೂಪದಿಂದ ನೆಲೆಸಿರುವನು. ಪ್ರೇಕ್ಷಕನಾಗಿ, ಅನುಮೋದಕನಾಗಿ, ಒಡೆಯನಾಗಿ, ಜೀವ ರೂಪದಿಂದ ಫಲಾನುಭವಿಯಾಗಿ, ಮಹೇಶ್ವರನಾಗಿ, ಪರಮಾತ್ಮನಾಗಿ ಇಂದ್ರಿಯಗಳಿಗೆ ಅತೀತನಾಗಿರುವನು.

ಈ ರೀತಿ ಕ್ಷೇತ್ರ, ಜ್ಞಾನ ಮತ್ತು ಜ್ಞೇಯ ಇವುಗಳ ತತ್ತ್ವ ತಿಳಿಯುವುದರಿಂದ ಭಕ್ತನಾದವನಿಗೆ ಭಗವಂತನ ಸ್ವಭಾವ ಪ್ರಾಪ್ತಿಯಾಗುತ್ತದೆ. ಕೆಲವರು ಧ್ಯಾನದ ಮೂಲಕ ಹೃದಯದಲ್ಲಿ, ಕೆಲವರು ಜ್ಞಾನಯೋಗದ ಮೂಲಕ ಹಾಗು ಕೆಲವರು ಕರ್ಮ ಯೋಗದ ಮೂಲಕ ಪರಮಾತ್ಮನನ್ನು ಕಾಣುತ್ತಾರೆ. ಇನ್ನೂ ಕೆಲವರು ಕೇಳಿ, ಆಚರಿಸುವ ಮುಖಾಂತರ ಸಂಸಾರ ಸಾಗರವನ್ನು ದಾಟಿ ಹೋಗುವರು.

ಪ್ರಕೃತಿ ಮತ್ತು ಪುರುಷರು ಆದಿಯಿಲ್ಲದವರು. ಗುಣಗಳು ಮತ್ತು ವಿಕಾರಗಳು ಪ್ರಕೃತಿಯಿಂದ ಉತ್ಪನ್ನವಾದವುಗಳು. ಎಲ್ಲ ಕಾರ್ಯ ಮತ್ತು ಕರಣಗಳು ಸಹ ಪ್ರಕೃತಿಯಿಂದಲೇ ಜನ್ಯವಾದವುಗಳು. ಜೀವಾತ್ಮನು ಪ್ರಕೃತಿಯಲ್ಲಿ ನೆಲೆಸಿ ಗುಣಗಳನ್ನು ಅನುಭವಿಸುತ್ತಿರುವ ಕಾರಣದಿಂದ ಒಳ್ಳೆಯ ಮತ್ತು ಕೆಟ್ಟ ಯೋನಿಗಳಲ್ಲಿ ಹುಟ್ಟಲು ಕಾರಣನಾಗುವನು. ಏಕೆಂದರೆ ಅವಿನಾಶಿಯಾದ ಜೀವಾತ್ಮನು ನಿರ್ಗುಣನಾಗಿದ್ದರಿಂದ ಶರೀರದಲ್ಲಿದ್ದರೂ, ವಾಸ್ತವದಲ್ಲಿ ಯಾವುದೇ ಕರ್ಮಗಳಿಗೆ ಕರ್ತಾರನೂ ಅಲ್ಲ, ಲಿಪ್ತನೂ ಆಗುವುದಿಲ್ಲ. ಶರೀರದಲ್ಲಿರುವ ಜೀವಾತ್ಮನನ್ನು ಯಾರು ತತ್ತ್ವದಿಂದ ತಿಳಿದು, ಆಚರಿಸುವ ಕರ್ಮಗಳೆಲ್ಲವೂ ಪ್ರಕೃತಿಯಿಂದ ಆದದ್ದೆಂದು, ತಾನು ಕರ್ತಾರನಲ್ಲವೆಂದು

ಅರ್ಥಮಾಡಿಕೊಂಡು, ವಿಭಿನ್ನ ಭಾವಗಳುಳ್ಳ ಪ್ರಾಣಿಗಳನ್ನು ಪರಮಾತ್ಮನಲ್ಲಿ ಹಾಗೂ ಪರಮಾತ್ಮನಿಂದಲೇ ಸಮಸ್ತ ಪ್ರಾಣಿಗಳ ವಿಸ್ತಾರವನ್ನು ನೋಡುತ್ತಾನೆಯೋ ಅಂತಹ ಜೀವಿಯ ವರ್ತಮಾನ ಸ್ಥಿತಿ ಹೇಗಿದ್ದರೂ, ಆತನು ಪರಮಾತ್ಮನನ್ನು ಹೊಂದುವನು.

ಹೇಗೆ ಆಕಾಶವು ಎಲ್ಲೆಡೆ ವ್ಯಾಪಿಸಿದ್ದರೂ, ಸೂಕ್ಷ್ಮರೂಪದಿಂದ ಯಾವುದರೊಂದಿಗೂ ಲಿಪ್ತವಾಗುವುದಿಲ್ಲವೋ, ಹಾಗೆ ಅತ್ಮ ಚೈತನ್ಯವು ದೇಹವೆಲ್ಲಾ ವ್ಯಾಪಿಸಿದ್ದರೂ, ಅದು ಲಿಪ್ತವಾಗುವುದಿಲ್ಲ. ಹೇಗೆ ಒಬ್ಬನೇ ಸೂರ್ಯನು ಇಡಿಯ ವಿಶ್ವವನ್ನು ಪ್ರಕಾಶಿಸುತ್ತಾನೆಯೋ ಹಾಗೆಯೇ ಆತ್ಮವು ದೇಹವನ್ನು ಪೂರ್ಣವಾಗಿ ಪ್ರಕಾಶಿಸುತ್ತದೆ.

**ಕ್ಷೇತ್ರ ಕ್ಷೇತ್ರಜ್ಞಯೋರೇವ ಮಂತರಂ ಜ್ಞಾನಚಕ್ಷುಷಾ ।**
**ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್ ॥**

ಯಾರು ಜ್ಞಾನದ ದೃಷ್ಟಿಯಿಂದ ಕ್ಷೇತ್ರ ಮತ್ತು ಕ್ಷೇತ್ರಜ್ಞನ ಈ ಭೇದವನ್ನು ಮತ್ತು ಪ್ರಕೃತಿಯಿಂದ ಜೀವಿಯು ಮುಕ್ತನಾಗುವುದನ್ನು ಕಾಣಬಲ್ಲರೋ ಅವರು ಪರಮಾತ್ಮನನ್ನು ಹೊಂದುವರು.

# ಅಧ್ಯಾಯ – 14

## ಗುಣತ್ರಯ ವಿಭಾಗ ಯೋಗಃ

ಗುಣತ್ರಯಗಳೆಂದರೆ, ಮೂರು ರೀತಿಯ ಗುಣಗಳು. ಗುಣಗಳು ಪ್ರಕೃತಿಯ ಮೂರು ಮುಖಗಳು. ಸತ್ತ್ವಗುಣ, ರಜೋಗುಣ, ತಮೋಗುಣ. ಇವು ಒಬ್ಬ ಮನುಷ್ಯನ ವ್ಯಕ್ತಿತ್ವದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತವೆ. ಈ ಗುಣಗಳೇ ಕ್ಷೇತ್ರ ಮತ್ತು ಕ್ಷೇತ್ರಜ್ಞನನ್ನು ಬಂಧಿಸುವ ತ್ರಿಗುಣಗಳು.

ನಾನಾ ಪ್ರಕಾರದ ಎಲ್ಲಾ ಯೋನಿಗಳಲ್ಲಿ ಹುಟ್ಟುವ ಶರೀರಧಾರಿ ಪ್ರಾಣಿಗಳೆಲ್ಲರಿಗೆ, ಗರ್ಭಧರಿಸುವ ತಾಯಿಯಾದ ಪ್ರಕೃತಿ ಕ್ಷೇತ್ರ. ಆ ಕ್ಷೇತ್ರದಲ್ಲಿ ಬೀಜವನ್ನು ಸ್ಥಾಪಿಸುವ ತಂದೆ ಪರಮಾತ್ಮ, ಕ್ಷೇತ್ರಜ್ಞ, ಈ ಜಡ–ಚೇತನ ಸಂಯೋಗದಿಂದಲೇ, ಎಲ್ಲಾ ಪ್ರಾಣಿಗಳ ಉತ್ಪತ್ತಿ.

**ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ ।**
**ನಿಬಧ್ನಂತಿ ಮಹಾಬಾಹೋ ದೇಹೇ ದೇಹೀನಮವ್ಯಯಮ್ ॥**

ಇವು ಸತ್ತ್ವ, ತಮೋ ಮತ್ತು ರಜೋಗುಣಗಳಿಂದ ಸೃಷ್ಟಿಯಾಗಿದೆ. ಹುಟ್ಟುವ ಪ್ರತಿಯೊಂದು ಜೀವಜಾತುವು ಈ ತ್ರಿಗುಣಗಳಲ್ಲಿ ಬಂಧಿತವಾಗಿಯೇ ಹುಟ್ಟುವುದು. ಗುಣಗಳ ಅನುಪಾತದಲ್ಲಿ ಮಾತ್ರ ವ್ಯತ್ಯಾಸವಿರುವುದಷ್ಟೇ.

ಸತ್ತ್ವಗುಣವು ಪ್ರಕಾಶಿತ ಮತ್ತು ಹಿತಕರವಾಗಿರುತ್ತದೆ. ಇದಕ್ಕೆ ಸುಖ ಮತ್ತು ಜ್ಞಾನದ ಬಂಧನವಿರುತ್ತದೆ. ಚೈತನ್ಯ ಮತ್ತು ವಿವೇಕ ಶಕ್ತಿ ಹೆಚ್ಚಾದಾಗ ಸತ್ತ್ವಗುಣವು ಮೇಲುಗೈ ಸಾಧಿಸುತ್ತದೆ. ಇದರಿಂದ ಜ್ಞಾನವು ಬೆಳೆದು ಉತ್ತಮ ಕರ್ಮ ಮಾಡುವ ನಿರ್ಮಲವಾದ ಬುದ್ಧಿಯು ಪ್ರೇರಿತವಾಗುತ್ತದೆ. ದಿವ್ಯವಾದ ಜನ್ಮ ಲಭಿಸಿ ಊರ್ಧ್ವ ಲೋಕಕ್ಕೆ ತೆರಳಲು ಹೇತುವಾಗುತ್ತದೆ.

ರಜೋಗುಣವು ಆಸೆ, ಕಾಮನೆ, ಆಸಕ್ತಿಯಿಂದ ಬಂಧಿತವಾಗಿ ಕ್ರಿಯಾಶೀಲವಾಗಿರುತ್ತದೆ. ಇದು ತನ್ನನ್ನು ತಾನು ಕಾಮ್ಯ ಕರ್ಮದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಲೋಭ ಪ್ರವೃತ್ತಿ, ಸ್ವಾರ್ಥ ಹೆಚ್ಚಾದಾಗ ಈ ಗುಣವು ತನ್ನ ಮೇಲುಗೈ ಸಾಧಿಸುತ್ತದೆ. ಇದರಿಂದ ದುರಾಸೆ, ಲೋಭ ಹೆಚ್ಚಾಗಿ ದುಃಖವನ್ನು ಹೊಂದಿ ಮತ್ತೆ ಕರ್ಮಾಸಕ್ತಿಯುಳ್ಳ ಭೂಲೋಕದಲ್ಲೇ ಜನಿಸಲು ಕಾರಣವಾಗುತ್ತದೆ.

ತಮೋಗುಣವು ಆಲಸ್ಯದ ಗುಣವಾಗಿದ್ದು ಅಜ್ಞಾನದಿಂದ ಹುಟ್ಟಿದ ದೇಹವೆಂಬ ಭ್ರಾಂತಿಯ ಸ್ವಭಾವವನ್ನು ಹೊಂದಿರುತ್ತದೆ. ಇದು ಜ್ಞಾನವನ್ನು ಮುಚ್ಚಿಹಾಕುತ್ತದೆ. ಆಲಸ್ಯ, ನಿದ್ದೆಯಿಂದ ಬಂಧಿತನಾಗಿ ಕರ್ತವ್ಯ ಕರ್ಮಗಳ ರಹಿತರನ್ನಾಗಿ ಮಾಡುತ್ತದೆ. ಅಂಧಕಾರ ಹೆಚ್ಚಾಗಿ ಭ್ರಾಂತಿ, ಅಜ್ಞಾನ, ಮೋಹ ಬೆಳೆದು ಅಧೋಲೋಕದಲ್ಲಿ ಕೀಟ, ಪಶು, ಮೂಢ ಯೋನಿಗಳಲ್ಲಿ ಜನಿಸಲು ಕಾರಣವಾಗುತ್ತದೆ.

**ರಜಸ್ತಮಾಶ್ಚಾ ಭಿಭೂಯ ಸತ್ತ್ವಂ ಭವತಿ ಭಾರತ ।**
**ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ ॥**

ದೇಹದಲ್ಲಿ ಈ ಮೂರು ಗುಣಗಳೂ ಒಂದನ್ನೊಂದು ಅದುಮಿ, ಮೇಲೆ ಬರಲು ಪೈಪೋಟಿ ನಡೆಸುತ್ತಿರುತ್ತವೆ. ನಾವು ಜ್ಞಾನ (ಸತ್ವ), ಆಸಕ್ತಿ (ರಜೋ) ಮತ್ತು ಮೋಹ (ತಮೋ)ಗಳಿದ್ದಾಗ ಅವನ್ನು ದ್ವೇಷಿಸಬಾರದು. ಅವು ಮರೆಯಾದಾಗ ಬಯಸಲೂಬಾರದು. ಗುಣಾತೀತರಾದವರು ಸಮಭಾವವನ್ನು ಮತ್ತು ಸಮದೃಷ್ಟಿಯನ್ನು ಹೊಂದಿರುತ್ತಾರೆ. ನಿತ್ಯ ನಿರಂತರ ಆತ್ಮಭಾವದಲ್ಲಿದ್ದು ಪರಮಾತ್ಮನಲ್ಲಿ ಏಕೀಭಾವದಿಂದ ನೆಲೆಸಿರುತ್ತಾರೆ. ನಾವು ಸಹಾ ಗುಣಾತೀತರಾಗಬೇಕಾದರೆ ಸಮತ್ವವನ್ನು ಮೈಗೂಡಿಸಿಕೊಳ್ಳಬೇಕು. ಆಗ ನಾವು ಗುಣಗಳನ್ನು ದಾಟಿ ಗುಣಾತೀತರಾಗಲು ಸಾಧ್ಯ. ಇದಕ್ಕೆ ಸಮಯ ಮತ್ತು ಕಠಿಣ ಶ್ರಮದ ಅಗತ್ಯವಿರುತ್ತದೆ.

ಪ್ರಕೃತಿಯಿಂದ ಪುರುಷನನ್ನು ಮುಕ್ತಗೊಳಿಸಬೇಕಾದರೆ, ನಾವು ನಮ್ಮ ಕರ್ಮಗಳನ್ನು ಶೂನ್ಯವಾಗಿಸಿಕೊಂಡು ತ್ರಿಗುಣಗಳಾದ ಸತ್ತ್ವ, ರಜೋ, ತಮೋ ಗುಣಗಳನ್ನು ದಾಟಿ ಗುಣಾತೀತರಾಗಬೇಕು. ಆಗ ಮಾತ್ರ ಕ್ಷೇತ್ರಜ್ಞನು, ಕ್ಷೇತ್ರದಿಂದ ಹೊರ ಬರಲು ಸಾಧ್ಯ. ಇದಕ್ಕೆ ಅನನ್ಯ ಪ್ರೇಮಭಾವದ ಭಕ್ತಿ ರೂಪೀ ಯೋಗದ ಮೂಲಕ ನಿರಂತರ ಧ್ಯಾನ/ಸೇವೆ ಮಾಡುವ ಅಗತ್ಯವಿದೆ. ಅಂತಹ ಗುಣಾತೀತ ಜೀವಿಯು ಭಗವಂತನನ್ನು ಆಶ್ರಯಿಸಿ, ಶಾಶ್ವತ ಧರ್ಮವನ್ನು ಪಾಲಿಸಿ, ಏಕಾಂತಿಕ ಸುಖವನ್ನು ಅನುಭವಿಸಿ, ಅಮೃತವನ್ನು ಪಡೆದು, ಅವ್ಯಯನಾದ ಬ್ರಹ್ಮನಲ್ಲಿ ಭಾವೈಕ್ಯನಾಗಲು ಯೋಗ್ಯನಾಗುವನು.

# ಅಧ್ಯಾಯ – 15

## ಪುರುಷೋತ್ತಮ ಯೋಗಃ

ಪುರುಷರಲ್ಲಿ ಉತ್ತಮನಾದವನು ಪುರುಷೋತ್ತಮ. ಸಂಪೂರ್ಣ ಜಗತ್ತಿನ ಕರ್ತಾ–ಹರ್ತಾ, ಸರ್ವಶಕ್ತಿವಂತ, ಸರ್ವವ್ಯಾಪಿ, ಅಂತರ್ಯಾಮಿ, ಪರಮದಯಾಳು, ಎಲ್ಲರ ಸುಹೃದ್, ಸರ್ವಾಧಾರ, ಶರಣಾಗಲು ಯೋಗ್ಯ, ಸುಗುಣ, ಪರಮೇಶ್ವರ, ಭಗವಾನ್, ಪುರುಷೋತ್ತಮ–ಕ್ಷರ ಪುರುಷ ಮತ್ತು ಅಕ್ಷರ ಪುರುಷನಿಗಿಂತಲೂ ಉತ್ತಮನಾಗಿರುವವನು. ಅಂತಹ ಪುರುಷೋತ್ತಮನ ಗುಣ, ಪ್ರಭಾವ ಮತ್ತು ಸ್ವರೂಪದ ವರ್ಣನೆಯನ್ನು ಈ ಅಧ್ಯಾಯದಲ್ಲಿ ನಾವು ಕಾಣಬಹುದು.

ಈ ಅಧ್ಯಾಯದಲ್ಲಿ ಸಂಸಾರ ವೃಕ್ಷವನ್ನು ಊರ್ಧ್ವಮುಖವಾಗಿರುವ ಅಶ್ವತ್ಥ ವೃಕ್ಷಕ್ಕೆ ಹೋಲಿಸಲಾಗಿದೆ. ಆ ವೃಕ್ಷದ ಮೂಲ ಬೇರು ಅಕ್ಷರಬ್ರಹ್ಮ. ಬ್ರಹ್ಮದೇವರು ಮುಖ್ಯ ಕಾಂಡ. ವೇದಗಳು ಎಲೆಗಳು.

ಒಂದು ವೃಕ್ಷವು ವೃದ್ಧಿಗೊಳ್ಳುವುದು ಮತ್ತು ಸಂರಕ್ಷಣೆ ನಡೆಯುವುದು ಎಲೆಗಳ ಮೂಲಕವೇ. ಅದೇ ರೀತಿ ಬದಲಾಗುವ ಅವಿನಾಶಿಯಾದ ಈ ವಿಶ್ವವು ಸುರಕ್ಷಿತವಾಗಿರಬೇಕಾದರೆ ಎಲೆಗಳಂತೆ ಇರುವ ವೇದಗಳನ್ನು ಯತಾರ್ಥವಾಗಿ ಅನುಸರಿಸಿದರೆ, ಈ ಸೃಷ್ಟಿ ಚಕ್ರವು ಸಮತೋಲನದಲ್ಲಿದ್ದು ಸಂಸಾರವೆಂಬ ವೃಕ್ಷವು ಸುರಕ್ಷಿತವಾಗಿರುತ್ತದೆ. ಈ ಜಗದ್ರೂಪೀ ಅಶ್ವತ್ಥ ವೃಕ್ಷವನ್ನು ಮೂಲಸಹಿತ ಅಂದರೆ ಪರಮಾತ್ಮನ ಸ್ವರೂಪವನ್ನು ತತ್ತ್ವತಃ ತಿಳಿದವನು ವೇದಗಳ ತಾತ್ಪರ್ಯವನ್ನು ತಿಳಿದವನಾಗಿದ್ದಾನೆ.

ಈ ಜಗತ್ ವೃಕ್ಷವು ತ್ರಿಗುಣರೂಪೀ ನೀರಿನಿಂದ ಬೆಳೆದಿರುವುದು. ಇದರ ರೆಂಬೆಗಳು ದೇವ, ಮನುಷ್ಯ ಮತ್ತು ಪ್ರಾಣಿಗಳು. ಇದರ ಚಿಗುರುಗಳು (ಟೊಂಗೆ) ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ತನ್ಮಾತ್ರೆಗಳು. ಇವು ವಿಷಯ ಭೋಗ ರೂಪಿಗಳು. ಇವು ಸ್ಥೂಲ ದೇಹ ಮತ್ತು ಇಂದ್ರಿಯಗಳಿಗಿಂತಲೂ ಸೂಕ್ಷ್ಮ. ಈ ಮರದ ಬೇರುಗಳು ಕೆಳಮುಖವಾಗಿಯೂ ಮತ್ತು ಮೇಲ್ಮುಖವಾಗಿಯೂ ಹರಡಿಕೊಂಡಿವೆ. ಕೆಳಮುಖ ಬೇರುಗಳು ಸ್ವಾರ್ಥ ಆಸೆಯನ್ನು ಸೂಚಿಸಿದರೆ, ಮೇಲ್ಮುಖವಾದ ಬೇರುಗಳು ತ್ಯಾಗ ಮತ್ತು ವಿಮೋಚನೆಯನ್ನು ಸೂಚಿಸುತ್ತದೆ. ಈ ರೀತಿ ಇರುವ ಈ ಸಂಸಾರ ವೃಕ್ಷಕ್ಕೆ ಆದಿಯಾಗಲೀ–ಅಂತ್ಯವಾಗಲೀ ಇಲ್ಲ. ಹಾಗೆಯೇ ಉತ್ತಮ ರೀತಿಯ ಸ್ಥಿರತೆಯೂ ಇಲ್ಲ. ಕ್ಷಣ–ಭಂಗುರವಾದ ಈ ವೃಕ್ಷವು ಬದಲಾಗುತ್ತಾ ಬೆಳೆಯುತ್ತಿರುತ್ತದೆ. ಈ ವೃಕ್ಷರೂಪೀ ಸಂಸಾರದಿಂದ ಹೊರ ಬಂದು ಅಕ್ಷರಬ್ರಹ್ಮನನ್ನು ಸೇರಬೇಕಾದರೆ, ಜ್ಞಾನವೆಂಬ ಖಡ್ಗದಿಂದ ವೃಕ್ಷವೆಂಬ ಸಂಸಾರವನ್ನು ಕತ್ತರಿಸಿ, ಅದರ ತಾಯಿಬೇರಾದ ಪರಮಾತ್ಮನನ್ನು ಅನ್ವೇಷಿಸಬೇಕು. ಈ ರೀತಿ ಮಾಡುವುದಕ್ಕೆ

ವೈರಾಗ್ಯವೊಂದೇ ಸಾಲದು, ನಿರಂತರ ಪ್ರಯತ್ನವನ್ನು ಆ ಪರಮಾತ್ಮನನ್ನು ಆಶ್ರಯಿಸುವುದರ ಮೂಲಕ ಮಾಡಬೇಕು. ಕೋಪ, ಅಹಂಕಾರ, ಕೋರಿಕೆ, ದ್ವಂದ್ವತೆ, ದುಃಖ, ಮೋಹ, ಸಂಘ ಎಲ್ಲವನ್ನು ಬಿಟ್ಟು ತತ್ತ್ವಜ್ಞಾನ ಮತ್ತು ಆತ್ಮಜ್ಞಾನದ ಮೇಲೆ ನಮ್ಮ ಗಮನ ಕೇಂದ್ರೀಕೃತವಾಗಬೇಕು. ಅಂತಹ ಸಂದರ್ಭದಲ್ಲೇ ಆ ಪರಮಾತ್ಮನನ್ನು ಸೇರಲು ಸಾಧ್ಯವಾಗುತ್ತದೆ. ಸೂರ್ಯ, ಚಂದ್ರ, ಅಗ್ನಿಗಳು ಸ್ವತಃ ಬೆಳಕನ್ನು ಹೊಂದದೆ, ಸ್ವಯಂ ಪ್ರಕಾಶಿತನಾದ ಆ ಅಕ್ಷರಬ್ರಹ್ಮನ ಬೆಳಕನ್ನು ಪ್ರತಿಫಲಿಸುತ್ತವೆ. ಅಂತಹ ಬೆಳಕನ್ನು/ಅಕ್ಷರಬ್ರಹ್ಮನನ್ನು ಸೇರಿದ ನಂತರ ಮರಳಿ ಬರುವ ಪ್ರಶ್ನೆಯೇ ಬಾರದು. ಅದು ಅಮರವಾದ ಶಾಶ್ವತ ಧಾಮ. ಮಾನವ ಭಾಷೆಯ ವರ್ಣನೆಗೆ ನಿಲುಕಲಾರದ ಅಂತಿಮ ಸತ್ಯ. ಇದೇ ಶಾಶ್ವತವಾದ ಗುರಿ.

ಪರಮಾತ್ಮನ ಒಂದಂಶವಾದ ಈ ಜೀವಾತ್ಮವು ಮೋಹದಿಂದ ಜಡಪ್ರಕೃತಿಯಲ್ಲೇ ಇರುವುದು. ಸಂಸಾರ ವೃಕ್ಷದ ಫಲಗಳನ್ನು ಅನುಭವಿಸುತ್ತಿರುವುದು. ಅಜ್ಞಾನಿಗಳಿಗೆ ಆತ್ಮದ ಕಾರ್ಯದ ಬಗ್ಗೆ ತಿಳುವಳಿಕೆಯಿರುವುದಿಲ್ಲ. ಯೋಗಿಗಳಿಗೆ ತಮ್ಮ ಹೃದಯದಲ್ಲಿ ನೆಲೆಸಿರುವ ಆತ್ಮದ ಬಗ್ಗೆ ಅರಿವಿರುತ್ತದೆ. ಜೀವಿಯು ಪ್ರಾಣವನ್ನು ತೊರೆದಾಗ, ಗಾಳಿಯು ಯಾವ ರೀತಿ ಗಂಧವನ್ನು ಒಂದು ವಸ್ತುವಿನಿಂದ ಇನ್ನೊಂದು ವಸ್ತುವಿಗೆ ತೆಗೆದುಕೊಂಡು ಹೋಗುತ್ತದೆಯೋ, ಅದೇ ರೀತಿ ಈ ಆತ್ಮವು ದೇಹದಿಂದ ಹೊರಬರುವಾಗ ಇಂದ್ರಿಯಗಳ ಸಮೇತ ಮನಸ್ಸನ್ನು ತೆಗೆದುಕೊಂಡು ಇನ್ನೊಂದು ದೇಹದೊಳಗೆ ಪ್ರವೇಶಿಸುತ್ತದೆ.

ಆ ಪರಮಾತ್ಮನನ್ನು ತಿಳಿಯಲು ಒಂದು ಕ್ರಮವಿದೆ. ಒಂದು ಕ್ರಿಯೆ ಅಥವಾ ನಾವು ಪ್ರತಿಕ್ಷಣ ಮಾಡುವ ಕರ್ಮಗಳ ಹಿಂದಿರುವ ಶಕ್ತಿ ಯಾವುದೆಂದು ಅರಿತುಕೊಂಡರೆ, ಆ ಪರಮಾತ್ಮನ ಶಕ್ತಿಯ ಬಗ್ಗೆ/ ಜ್ಞಾನದ ಬಗ್ಗೆ ನಮಗೆ ತಿಳುವಳಿಕೆ ಬರುವುದು. ಶಾಸ್ತ್ರೀಯವಾದ ಉಪದೇಶವಿದ್ದರೂ ಸಹ ನಾವು ಅದನ್ನು ತಿಳಿದುಕೊಳ್ಳುವುದಿಲ್ಲ. ಕಾರಣ–ಈ ಬಾಹ್ಯ ವಸ್ತುಗಳ ಮೇಲೆ ನಮ್ಮಲ್ಲಿರುವ ಬಾಂಧವ್ಯ ಮತ್ತು ಆಸಕ್ತಿ. ಪ್ರಯತ್ನದಿಂದ ನಾವು ನಮ್ಮ ಮನಸ್ಸನ್ನು ಹಿಡಿದಿಟ್ಟುಕೊಳ್ಳಬೇಕು.

**ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವ ಸ್ಥಿತಮ್ ।**
**ಯತಂತೋಪ್ಯ ಕೃತಾತ್ಮಾನೋ ನೈನಂ ಪಶ್ಯಂತ್ಯ ಚೇತಸಃ ॥**

ಪ್ರಯತ್ನಶೀಲರಾದ ಯೋಗೀ ಜನರು ಮಾತ್ರವೇ ತಮ್ಮ ಹೃದಯದಲ್ಲಿ ಸ್ಥಿತನಾಗಿರುವ ಈ ಆತ್ಮನನ್ನು ತತ್ತ್ವದಿಂದ ಬಲ್ಲರು. ಆದರೆ ತಮ್ಮ ಅಂತಃಕರಣವನ್ನು ಶುದ್ಧಮಾಡಿಕೊಳ್ಳದ ಅಜ್ಞಾನೀ ಜನರು ಪ್ರಯತ್ನ ಮಾಡಿದರೂ ಈ ಆತ್ಮ ಸ್ವರೂಪವನ್ನು ತಿಳಿಯಲಾರರು.

ಆ ಪರಮಾತ್ಮನು ಭೂಮಿಯನ್ನು ಪ್ರವೇಶಿಸಿ ಸಮಸ್ತ ಜೀವಿಗಳನ್ನು ತನ್ನ ಶಕ್ತಿಯಿಂದ ಸಂರಕ್ಷಿಸುತ್ತಿರುವನು. ಜೀವರಸವನ್ನು ಒದಗಿಸುವ ಚಂದ್ರನಾಗಿ ಗಿಡಮೂಲಿಕೆಗಳನ್ನು ಪೋಷಿಸುತ್ತಿರುವನು. ಎಲ್ಲಾ ಜೀವಿಗಳ ದೇಹದಲ್ಲಿ ವೈಶ್ವಾನರಅಗ್ನಿದೇವತೆಯಾಗಿ ನೆಲೆಸಿ, ಪ್ರಾಣ–ಅಪಾನಗಳೊಂದಿಗೆ ಸೇರಿ, ನಾಲ್ಕು ಬಗೆಯ (ಅಗಿಯುವ, ನುಂಗುವ, ನೆಕ್ಕುವ, ಹೀರುವ) ಆಹಾರಗಳನ್ನು ಜೀರ್ಣಿಸುತ್ತಿರುವನು.

ಆ ಪರಮಾತ್ಮನು ಎಲ್ಲರ ಹೃದಯದಲ್ಲಿ ನೆಲೆಸಿ, ನೆನಪು, ಜ್ಞಾನ ಮತ್ತು ಮರೆವನ್ನು ಅವರವರ ಕರ್ಮಗಳಿಗನುಸಾರ ನೀಡುತ್ತಿರುವನು.

ವೇದಗಳ ಮೂಲಕ ಪರಮಾತ್ಮನ ತತ್ತ್ವಗಳನ್ನು ತಿಳಿದುಕೊಳ್ಳಬೇಕು. ಆ ಪರಮಾತ್ಮನು ವೇದಗಳ ಕರ್ತೃ ಮತ್ತು ಆ ವೇದಗಳನ್ನು ಅರಿತವನೂ ಸಹ ಅವನೊಬ್ಬನೇ ಆಗಿರುವನು. ಆ ಭಗವಂತ ವೇದವೇದ್ಯ. ಸಾರ್ವಕಾಲಿಕ ಸನಾತನ ಸತ್ಯ.

**ಯಸ್ಮಾತ್ ಕ್ಷರ ಮತೀತೋಹಮಕ್ಷರಾದಪಿ ಚೋತ್ತಮಃ ।**
**ಅತೋऽಸ್ಮಿಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ।**

ಈ ಜಗತ್ತಿನಲ್ಲಿ, ಬದಲಾವಣೆಯಾಗುವ ಸತ್ಯ / ನಾಶವನ್ನು ಹೊಂದುವ ಪ್ರಕೃತಿ / ದೇಹ ಮತ್ತು ಬದಲಾವಣೆಯಾಗದ ಸತ್ಯ / ನಾಶವಾಗದಿರುವ ಜೀವಾತ್ಮ ಇಬ್ಬರು ಪುರುಷರಿರುವರು. ಈ ಇಬ್ಬರೂ ಪುರುಷರಿಗೂ ಉತ್ತಮನಾದವನು ಪುರುಷೋತ್ತಮನಾದ ಪರಮೇಶ್ವರ /ಪರಮಾತ್ಮ/ಅಕ್ಷರಬ್ರಹ್ಮ. ಆತ ಅವಿನಾಶಿ. ಈ ಮೂರು ಲೋಕಗಳಲ್ಲಿಯೂ ಪ್ರವೇಶ ಮಾಡಿ ಎಲ್ಲರ ಧಾರಣೆ ಪೋಷಣೆ ಮಾಡುತ್ತಿರುವನು. ಆದ್ದರಿಂದಲೇ ಲೋಕದಲ್ಲಿ ಮತ್ತು ವೇದಗಳಲ್ಲಿಯೂ ಆ ಪರಮಾತ್ಮನು ಪುರುಷೋತ್ತಮನೆಂದು ಪ್ರಸಿದ್ಧಿಯನ್ನು ಪಡೆದಿರುವನು. ಯಾವ ಜ್ಞಾನೀ ಪುರುಷನು ಈ ರೀತಿಯಾಗಿ ತತ್ತ್ವದಿಂದ ಆ ಪುರುಷೋತ್ತಮನನ್ನು ತಿಳಿಯುತ್ತಾನೆಯೇ ಆತನೇ ಸರ್ವಜ್ಞ. ಆತನು ಸಮಸ್ತ ಜೀವಿಗಳಲ್ಲಿ ವಾಸಿಸುವ ವಾಸುದೇವನಾದ ಆ ಅಕ್ಷರಬ್ರಹ್ಮನನ್ನೇ ಆಶ್ರಯಿಸಿ ಕೃತಾರ್ಥನಾಗುವನು. ಇದು ಅತೀ ರಹಸ್ಯವಾದ ಗೋಪ್ಯವಾದ ಶಾಸ್ತ್ರ.

# ಅಧ್ಯಾಯ – 16

## ದೈವಾಸುರ ಸಂಪದ್ವಿಭಾಗ ಯೋಗಃ

ಅಕ್ಷರಬ್ರಹ್ಮನನ್ನು ಸೇರಲು ಇರಬೇಕಾದ ದೈವೀ ಪ್ರವೃತ್ತಿಯ ಲಕ್ಷಣಗಳನ್ನು ಮತ್ತು ಆತನನ್ನು ಸೇರಲು ತ್ಯಜಿಸಬೇಕಾದ ಆಸುರೀ ಪ್ರವತ್ತಿಯ ಲಕ್ಷಣಗಳನ್ನು ಈ ಅಧ್ಯಾಯದಲ್ಲಿ ವಿಭಾಗಪೂರ್ವಕವಾಗಿ ವಿಸ್ತೃತವಾದ ವರ್ಣನೆಯನ್ನು ಮಾಡಲಾಗಿದೆ.

ದೈವೀ ಪ್ರವೃತ್ತಿಯವರ ಲಕ್ಷಣಗಳು: ಅಭಯ, ಅಂತಃಕರಣ ಶುದ್ಧಿ, ತತ್ತ್ವಜ್ಞಾನಕ್ಕಾಗಿ ಯೋಗಮಾರ್ಗದಲ್ಲಿ ಸ್ಥಿತವಾಗುವುದು, ದಾನ ಮಾಡುವುದು, ಮನಸ್ಸಿನ ನಿಯಂತ್ರಣ, ಯಜ್ಞಗಳ ಆಚರಣೆ, ವೇದ ಶಾಸ್ತ್ರಗಳ ಅಧ್ಯಯನ, ತಪಸ್ಸು, ಸರಳತೆ, ಅಹಿಂಸೆ, ಸತ್ಯತೆ, ಕೋಪವಿಲ್ಲದಿರುವಿಕೆ, ತ್ಯಾಗ ಭಾವನೆ, ಶಾಂತಿ, ತಪ್ಪು ಹುಡುಕದಿರುವುದು, ಎಲ್ಲಾ ಜೀವಿಗಳಲ್ಲೂ ದಯೆ, ದುರಾಸೆಯಿಲ್ಲದಿರುವಿಕೆ, ಮೃದು ಸ್ವಭಾವ, ನಮ್ರತೆ, ದೃಢತೆ, ತೇಜಸ್ಸು, ಕ್ಷಮೆ, ಸ್ಥೈರ್ಯ, ಶುಚಿತ್ವ, ದ್ವೇಷ–ಅಸೂಯೆಗಳಿಲ್ಲದಿರುವುದು, ಗೌರವ–ಮಾನ್ಯತೆಗಳ ನಿರೀಕ್ಷೆಯಿಲ್ಲದಿರುವುದು.

ಇಂತಹ ಗುಣಸ್ವಭಾವದವರು ಮುಕ್ತರಾಗಲು ಅರ್ಹತೆಯುಳ್ಳವರು. ಇಂತಹವರು ಜ್ಞಾನ, ಧ್ಯಾನ ಮತ್ತು ಕರ್ಮಸಂನ್ಯಾಸ ಯೋಗವೆಂಬ ಮೂರು ದ್ವಾರಗಳ ಮೂಲಕವೇ ಅಕ್ಷರಬ್ರಹ್ಮನನ್ನು ಸೇರಲು ಸಾಧ್ಯ.

ಆಸುರೀ ಪ್ರವೃತ್ತಿಯವರ ಲಕ್ಷಣಗಳು: ಅಜ್ಞಾನ, ಅಶುಚಿ, ದುರಾಚಾರ, ಸತ್ಯತೆ ಇಲ್ಲದಿರುವಿಕೆ, ಈ ಸೃಷ್ಟಿಯಲ್ಲಿ ಅಪನಂಬಿಕೆ, ಮಂದಮತಿ, ಜಗತ್ ವಿನಾಶದ ಬುದ್ಧಿ, ಒಣ ಪ್ರತಿಷ್ಠೆ, ದರ್ಪ, ದುರಭಿಮಾನ, ಮೋಹ, ಭ್ರಷ್ಠತೆ, ಭಯ, ಆತಂಕ, ಆಸೆ, ಕಾಮ, ಕ್ರೋಧ, ಸಂಗ್ರಹಣೆ, ವೈರತ್ವ, ಕ್ರೂರತೆ, ಅಹಂ, ಭ್ರಾಂತಿ, ಆತ್ಮಾಭಿಮಾನ, ಉದ್ಧಟತನ, ಸ್ವ–ಪ್ರತಿಷ್ಠೆ, ಅಹಂಕಾರ, ಬಲ, ದರ್ಪ, ಅಸೂಯೆ, ದ್ವೇಷ, ಮದ, ಮಾತ್ಸರ್ಯ, ದುಷ್ಟತನ.

ಇಂತಹ ಮನುಷ್ಯರು ತಮ್ಮನ್ನು ತಾವೇ ಭೋಕ್ತಾರರೆಂದು, ಪ್ರಭುಗಳೆಂದು ತಿಳಿದು ತಾವು ಸುಖಿಗಳು ಎಂದು ತಿಳಿದುಕೊಳ್ಳುತ್ತಾರೆ. ಇವರು ಹೆಸರಿಗೆ ಮಾತ್ರ ಯಜ್ಞ ಮತ್ತು ದಾನಗಳನ್ನು ಮಾಡಿ ತಮ್ಮ ಸಮಾನರು ಯಾರೂ ಇಲ್ಲವೆಂದು ಮೆರೆಯುವರು. ಇಂದ್ರಿಯ ಭೋಗಗಳಲ್ಲಿ ಅತ್ಯಂತ ಆಸಕ್ತರಾಗಿ ಅಧಃಪತನ ಹೊಂದುವರು.

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾ ದೇತತ್ತ್ರಯಂ ತ್ಯಜೇತ್ ॥**

ಕಾಮ, ಕ್ರೋಧ, ಲೋಭವೆಂಬ ಈ ಮೂರು ನರಕದ ಬಾಗಿಲುಗಳು ನಮ್ಮನ್ನು ಅಧೋಗತಿಗೆ ಕೊಂಡೊಯ್ಯುವುದರಿಂದ, ನಾವು ಇವುಗಳನ್ನು ತ್ಯಜಿಸಬೇಕು. ಹೀಗೆ ಮಾಡದಿದ್ದವರನ್ನು ಅಕ್ಷರಬ್ರಹ್ಮನು ಜನ್ಮ–ಜನ್ಮಗಳಲ್ಲಿ ಆಸುರೀ ಯೋನಿಯಲ್ಲಿಯೇ ಹುಟ್ಟಿಸುವನು. ಬಳಿಕ ಅದಕ್ಕಿಂತಲೂ ನೀಚಗತಿಯನ್ನೇ ಹೊಂದುವಂತಾಗುತ್ತದೆ. ಇಂತಹ ಪ್ರವೃತ್ತಿಯವರು ಯೋಗವನ್ನು ಅಭ್ಯಾಸ ಮಾಡುವುದರ ಮೂಲಕ ಬದಲಾಗಬಹುದಾಗಿದೆ. ತಮ್ಮ ಶ್ರೇಯಸ್ಸಿಗಾಗಿ ಶಾಸ್ತ್ರವಿಧಿಯನ್ನು ಆಚರಿಸಬೇಕು.

ಅರ್ಜುನನು ದೈವೀ ಸಂಪತ್ತಿನಿಂದ ಕೂಡಿರುವವನಾದುದರಿಂದ, ಆತನನ್ನು ಎಚ್ಚರಿಸುವ ಅಗತ್ಯವಿಲ್ಲವೆಂದು ಶ್ರೀಕೃಷ್ಣನು ಹೇಳುವನು.

**ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।**
**ಜ್ಞಾತ್ವಾಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥**

ನಮಗೆ ಯಾವುದೇ ಒಂದು ಕರ್ತವ್ಯ ಕರ್ಮ ಮಾಡಲು ಶಾಸ್ತ್ರವೇ ಪ್ರಮಾಣವಾಗಿದೆ. ಶಾಸ್ತ್ರವಿಧಿಯಿಂದ ನಿಯತ ಕರ್ಮವನ್ನು ಮಾಡಬೇಕೇ ವಿನಃ ತಮ್ಮ ಮನಸ್ಸಿಗೆ ಬಂದಂತೆ ಆಚರಣೆ ಮಾಡಿದರೆ, ಇಹದಲ್ಲಿ ಸುಖವನ್ನು ಹೊಂದುವುದಿಲ್ಲ ಹಾಗು ಪರದಲ್ಲಿ ಪರಮಗತಿಯನ್ನೂ ಪಡೆಯುವುದಿಲ್ಲ. ಪ್ರತಿಯೊಬ್ಬ ಮನುಷ್ಯರಲ್ಲಿ ದೈವೀ ಮತ್ತು ಆಸುರೀ ಗುಣಗಳು, ಎರಡೂ ಇರುತ್ತವೆ. ನಾವು ಯಾವುದಕ್ಕೆ ಉತ್ತೇಜನಕೊಟ್ಟು ಪ್ರೊತ್ಸಾಹಿಸುತ್ತೇವೆಯೋ, ಅವು ಮೇಲುಗೈ ಸಾಧಿಸುತ್ತವೆ.

## ಅಧ್ಯಾಯ – 17

## ಶ್ರದ್ಧಾತ್ರಯ ವಿಭಾಗ ಯೋಗಃ

ಶ್ರದ್ಧೆ ಎಂದರೆ ಬಲವಾದ ನಂಬಿಕೆ. ದೇವರ ಮೇಲೆ ಪೂರ್ಣವಾದ ನಂಬಿಕೆಯಿಟ್ಟು ಭಕ್ತಿ ಮತ್ತು ಪ್ರೀತಿಯಿಂದ ನಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸುವುದೇ ಶ್ರದ್ಧೆ. ಪ್ರತಿ ಮನುಷ್ಯನಲ್ಲಿಯೂ ಶ್ರದ್ಧಾಮಯವಾದ, ಸಕಾರಾತ್ಮಕ ಗುಣವಾದ ನಂಬಿಕೆಯಿರುತ್ತದೆ. ಅದಕ್ಕೆ ಅನುಗುಣವಾಗಿ ಆತನು ತನ್ನ ಜೀವನವನ್ನು ನಡೆಸುತ್ತಾನೆ.

**ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ ।**
**ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು ॥**

ಮನುಷ್ಯರ ಶಾಸ್ತ್ರೀಯ ಸಂಸ್ಕಾರ ರಹಿತವಾದ, ಕೇವಲ ಸ್ವಭಾವದಿಂದ ಉಂಟಾದ ಶ್ರದ್ಧೆಯು, ಆತನ ಪ್ರಾರಬ್ಧಗಳಿಗನುಸಾರವಾಗಿ ಸ್ವಾಭಾವಿಕವಾಗಿಯೇ ಬಂದಿರುತ್ತದೆ. ಅಂತಹ ಶ್ರದ್ಧೆಗಳು ಮೂರು ವಿಧಗಳಲ್ಲಿ ಇರುತ್ತವೆ. ಅವೇ ಸಾತ್ವಿಕ, ರಾಜಸ, ತಾಮಸ ಶ್ರದ್ಧೆಗಳು. ನಮ್ಮ ವ್ಯಕ್ತಿತ್ವವು ನಮ್ಮ ಶ್ರದ್ಧೆಯನ್ನು ತೋರಿಸುತ್ತದೆ.

ನಾವು ಆಧ್ಯಾತ್ಮಿಕತೆಯ ಬಗ್ಗೆ ಒಲವು ಬೆಳೆಸಿಕೊಂಡು, ಅಕ್ಷರಬ್ರಹ್ಮನಲ್ಲಿ ಪೂರ್ಣವಾದ ನಂಬಿಕೆಯಿಟ್ಟು, ಭಕ್ತಿ ಮತ್ತು ಪ್ರೀತಿಯನ್ನು ನಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸಿದಾಗ, ಅದು ದೇವರ ಮೇಲಿನ ಶ್ರದ್ಧೆಯಾಗುತ್ತದೆ. ದೇವರ ಮೇಲಿನ ಶ್ರದ್ಧೆಯು ಮೇಲೆ ತಿಳಿಸಿದ ಮೂರು ಶ್ರದ್ಧೆಗಳಿಗೂ ಮಿಗಿಲಾದದ್ದು ಮತ್ತು ಅತ್ಯುತ್ತಮವಾದದ್ದು. ದೇವರ ಮೇಲಿನ ನಮ್ಮ ಶ್ರದ್ಧೆ, ಪ್ರಥಮ ಶ್ರದ್ಧೆಯಾಗಬೇಕಾದರೆ, ಭಗವದ್ಗೀತೆಯಲ್ಲಿ ಹೇಳಿದಂತೆ ನಾವು ನಡೆದುಕೊಂಡಾಗ ಮಾತ್ರ ಅದು ಸಾಧ್ಯವಾಗುತ್ತದೆ. ದೇವರಿಗೆ ನಾವು ಹತ್ತಿರವಾಗಬೇಕಾದರೆ ಯಜ್ಞ, ದಾನ ಮತ್ತು ತಪಸ್ಸುಗಳೇ ಸಾಧನ. ಇವು ನಮ್ಮ ಕರ್ಮಗಳನ್ನು ಶುದ್ಧಗೊಳಿಸುತ್ತವೆ.

**ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ ।**
**ಯಜ್ಞ ಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು ॥**

ಆಹಾರವು ಯಾವ ರೀತಿ ತಮ್ಮ ತಮ್ಮ ಪ್ರಕೃತಿಗನುಗುಣವಾಗಿ ಮೂರು ವಿಧವಾಗಿ ಪ್ರಿಯವಾಗಿರುತ್ತದೆಯೋ, ಹಾಗೆಯೇ, ಯಜ್ಞ–ದಾನ–ತಪಸ್ಸುಗಳೂ ಕೂಡ ಮೂರು ಪ್ರಕಾರಗಳಿಂದ ಕೂಡಿರುತ್ತದೆ.

ಸಾತ್ವಿಕ ಶ್ರದ್ಧೆ ಇರುವವರು ದೇವರನ್ನು ಪೂಜಿಸಿ, ಸರಳ ಜೀವನವನ್ನು ನಡೆಸಿ, ಕಲ್ಯಾಣಕಾರಿಯಾಗುವ ಯೋಚನೆಗಳಿಂದ ಕೂಡಿರುತ್ತಾರೆ. ಇವರು ಸಾರಯುಕ್ತವಾದ, ಸ್ಥಿರವಾದ, ಆಯಸ್ಸು–ಆರೋಗ್ಯ–ಬುದ್ಧಿಗಳನ್ನು ಹೆಚ್ಚಿಸುವ ಆಹಾರವನ್ನು ಸವಿದು ಶಾಸ್ತ್ರವಿಧಿಯ ಅನುಸಾರವಾಗಿ ಯಜ್ಞಗಳನ್ನು ತಮ್ಮ ಕರ್ತವ್ಯವೆಂದು ಪರಿಗಣಿಸಿ, ಯಾವುದೇ ಫಲಾಪೇಕ್ಷೆಯಿಲ್ಲದೆ ಕಾಯಾ–ವಾಚಾ–ಮನಸಾ ಅದನ್ನು ತಪಸ್ಸಿನಂತೆ ಆಚರಿಸುತ್ತಾರೆ. ದೇಶ, ಕಾಲ, ಪಾತ್ರ ದೊರಕಿದಾಗ ದಾನಗಳನ್ನು ಸಹ ಮಾಡುವರು.

ರಾಜಸಿಕ ಶ್ರದ್ಧೆ ಇರುವವರು ಯಕ್ಷ/ರಾಕ್ಷಸರನ್ನು ಪೂಜಿಸಿ ತಮ್ಮ ಇಚ್ಛೆ ಪೂರೈಸಿಕೊಳ್ಳಲು, ಸ್ವಂತ ಲಾಭಕ್ಕಾಗಿ ಅಭ್ಯಾಸ ಮಾಡಿ ಸಕ್ರಿಯರಾಗಿ ಪ್ರಾಪಂಚಿಕ ಜೀವನದಲ್ಲಿ ಮುನ್ನಡೆದು ಪ್ರಗತಿಯನ್ನು ಹೊಂದುತ್ತಾರೆ. ಇಂತಹವರು ಹೆಚ್ಚು ಕಹಿ, ಹುಳಿ, ಬಿಸಿ, ಉಪ್ಪು, ಖಾರಗಳಿಂದ ಕೂಡಿದ ಆಹಾರವನ್ನು ತೆಗೆದುಕೊಂಡು ದುಃಖ, ಚಿಂತೆ ಹಾಗೂ ರೋಗಗಳಿಂದ ಕೂಡಿರುತ್ತಾರೆ. ತೋರಿಕೆಗಾಗಿ ಯಜ್ಞ, ಸತ್ಕಾರ ಮತ್ತು ಸ್ವಾರ್ಥಕ್ಕಾಗಿ ತಪಸ್ಸು ಮತ್ತು ಪ್ರತ್ಯುಪಕಾರದ ಇಚ್ಛೆಯಿಂದ ದಾನ ಮಾಡುವವರಾಗಿದ್ದಾರೆ.

ತಾಮಸಿಕ ಶ್ರದ್ಧೆಯಿರುವವರು ಪ್ರೇತ ಮತ್ತು ಭೂತಗಳನ್ನು ಪೂಜಿಸಿ ಯುಕ್ತಿ ಶೂನ್ಯರಾಗುವರು. ಇವರು ಹಳಿಸಿದ, ಅಪವಿತ್ರವೂ ಆದ ಆಹಾರವನ್ನು ಸವಿದು ಶಾಸ್ತ್ರವಿಧಿಯನ್ನು ಬಿಟ್ಟು, ಅಶ್ರದ್ಧೆಯಿಂದ ಯಜ್ಞಗಳನ್ನು ಮಾಡಿ, ಮೂರ್ಖತೆಯಿಂದ ದೇಹಕ್ಕೆ, ಮನಸ್ಸಿಗೆ ಮತ್ತು ವಾಣಿಗೆ ಕಷ್ಟಕೊಟ್ಟು ತಪಸ್ಸನ್ನಾಚರಿಸುವರು. ಸತ್ಕಾರವಿಲ್ಲದೆ, ತಿರಸ್ಕಾರದಿಂದ ಅಯೋಗ್ಯ ದೇಶ–ಕಾಲಗಳಲ್ಲಿ ಕುಪಾತ್ರರಿಗೆ ದಾನ ಕೊಡುವರು.

ಸಾತ್ವಿಕ ಶ್ರದ್ಧೆಯು ಶುದ್ಧವಾಗಿರುತ್ತದೆ. ರಾಜಸಿಕ ಶ್ರದ್ಧೆಯು ಸ್ವಾರ್ಥವಾದ ಕ್ರಿಯೆಗಳಲ್ಲಿ ಬೆಳವಣಿಗೆಯನ್ನು ತೋರಿಸುತ್ತದೆ. ತಾಮಸಿಕ ಶ್ರದ್ಧೆಯು ಅಜ್ಞಾನದ ಕಾರಣದಿಂದ ಆಧ್ಯಾತ್ಮಿಕ ನೆಲೆಯಿಂದ ನಮ್ಮನ್ನು ದಾರಿ ತಪ್ಪಿಸುತ್ತದೆ.

ಶ್ರೀ ಕೃಷ್ಣನು ಇಲ್ಲಿ 'ಓಂ ತತ್ ಸತ್' ಎಂಬ ಪ್ರಯೋಗಗಳ ಮಹಿಮೆಯನ್ನು ಪ್ರತ್ಯೇಕವಾಗಿ ವಿವರಿಸಿರುವನು.

**ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ।**
**ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ ॥**

'ಓಂ(ನಿಜಾಂಶ / ಜ್ಞಾನ) ತತ್(ಅದು) ಸತ್(ಒಳ್ಳೆಯತನ / ಒಳ್ಳೆಯದು)'– ಹೀಗೆ ಮೂರು ಪ್ರಕಾರದ ಹೆಸರುಗಳು ಓರ್ವ ಸಚ್ಚಿದಾನಂದ ಘನ ಬ್ರಹ್ಮನದ್ದೇ ಆಗಿವೆ. ಆತನಿಂದಲೇ ಸೃಷ್ಟಿಯ ಆದಿಯಲ್ಲಿ ಬ್ರಾಹ್ಮಣ, ವೇದ ಮತ್ತು ಯಜ್ಞಾದಿಗಳು ರಚಿತವಾಗಿವೆ.

ಭಗವಂತನು ಜ್ಞಾನಕ್ಕಾಗಿ ವೇದಗಳನ್ನು ಸೃಷ್ಟಿಸಿ, ಜ್ಞಾನಿಗಳಾಗಿರೆಂದು ಬ್ರಾಹ್ಮಣರನ್ನು ಸೃಷ್ಟಿಸಿ, ಜ್ಞಾನಪೂರ್ವಕವಾಗಿ ಕರ್ಮಗಳನ್ನು ಮಾಡಿರೆಂದು ಯಜ್ಞಗಳನ್ನು ಸೃಷ್ಟಿಸಿದನು.

ವೇದಗಳನ್ನು ಉಚ್ಚರಿಸುವ ಬ್ರಾಹ್ಮಣರ(Pure human) ಶಾಸ್ತ್ರಗಳು ಮತ್ತು ಯಜ್ಞ, ದಾನ, ತಪೋ ಕ್ರಿಯೆಗಳು ಯಾವಾಗಲೂ 'ಓಂ' ಎಂಬ ಪರಮಾತ್ಮನ ನಾಮವನ್ನು ಉಚ್ಚರಿಸಿಯೇ ಆರಂಭವಾಗುತ್ತದೆ.

'ತತ್' ಎಂಬುದು ಪರಮಾತ್ಮನನ್ನು ಸಂಭೋದಿಸುವ ಹೆಸರೇ ಆಗಿದೆ. ಪರಮಾತ್ಮನು ವೇದಗಳ(Pure knowledge) ಸ್ವರೂಪದಲ್ಲಿ ನಮ್ಮ ಮುಂದಿರುವನು. ವೇದಗಳಲ್ಲಿ ಹೇಳಿರುವಂತೆ ಭಗವಂತನಿಂದ ಬಂದ ಎಲ್ಲವನ್ನೂ ನಿಷ್ಕಾಮದಿಂದ ಫಲಾಪೇಕ್ಷೆಯಿಲ್ಲದೆ, ಸಮಸ್ತವೂ ಆತನಿಗೆ ಸಮರ್ಪಿಸಬೇಕು.

'ಸತ್' ಎಂಬುದನ್ನು ಪರಮಾತ್ಮನನ್ನು ಸತ್ಯಭಾವದಲ್ಲಿ ಮತ್ತು ಶ್ರೇಷ್ಠಭಾವದಲ್ಲಿ ಕರೆಯಲಾಗುತ್ತದೆ. ಎಲ್ಲಾ ಉತ್ತಮವಾದ ಕಾರ್ಯಗಳಲ್ಲಿ (Pure / noble work) ಸತ್ ಶಬ್ದವನ್ನು ಪ್ರಯೋಗಿಸಲಾಗುತ್ತದೆ.

ಶ್ರದ್ಧೆಯಿಂದ ಪರಮಾತ್ಮನ ಮೇಲಿನ ಪ್ರೀತಿಗಾಗಿ ಮಾಡಿದ ಯಜ್ಞ, ದಾನ, ತಪಸ್ಸುಗಳು 'ಸತ್' ಆದರೆ, ಅಶ್ರದ್ಧೆಯಿಂದ ಮಾಡಿದ ಯಜ್ಞ, ದಾನ, ತಪಸ್ಸುಗಳು ಅಸತ್ ಆಗುತ್ತವೆ. ಆದ್ದರಿಂದ ಅದು ಇಹಕ್ಕೂ ಮತ್ತು ಪರಕ್ಕೂ ಸಲ್ಲುವುದಿಲ್ಲ. ಆದ್ದರಿಂದ ನಾವು ಯಾವುದೇ ಕರ್ಮಗಳನ್ನು ಮಾಡುವಾಗ, ಅದು ಯಜ್ಞಪೂರ್ವಕವಾಗಿ ತಪಸ್ಸಿನ ರೀತಿಯಲ್ಲಿ ಆಚರಿಸಿ, ಯಜ್ಞ ಫಲವನ್ನು ದಾನ ಮಾಡಿ ಭಗವಂತನ ಪ್ರೀತಿಗೆ ಪಾತ್ರರಾಗಬೇಕು.

# ಅಧ್ಯಾಯ – 18

## ಮೋಕ್ಷ ಸಂನ್ಯಾಸ ಯೋಗಃ

ಜನ್ಮ ಮರಣರೂಪೀ ಸಂಸಾರದ ಚಕ್ರದಿಂದ ಎಂದೆಂದಿಗೂ ಬಿಡುಗಡೆ ಹೊಂದಿ ಪರಮಾನಂದ ರೂಪೀ ಪರಮಾತ್ಮನನ್ನು ಪ್ರಾಪ್ತಿ ಮಾಡಿಕೊಳ್ಳುವುದರ ಹೆಸರು ಮೋಕ್ಷವಾಗಿದೆ. ಇಲ್ಲಿ ಜೀವಾತ್ಮ ಪರಮಾತ್ಮನಲ್ಲಿ ಲೀನವಾಗುತ್ತದೆ. ಈ ಕರ್ಮದ ಕರ್ತೃತ್ವ ಮತ್ತು ಅಹಂಕಾರವನ್ನು ತ್ಯಜಿಸುವುದೇ ಸಂನ್ಯಾಸ. ತ್ಯಾಗವೆಂದರೆ ಕರ್ಮ ಫಲ ತ್ಯಾಗ. ತ್ಯಾಗ ಮತ್ತು ಸಂನ್ಯಾಸವನ್ನು ಪಾಲಿಸಿ, ಹೇಗೆ ಮೋಕ್ಷವನ್ನು ಪಡೆಯುವುದು ಎಂದು ಈ ಅಧ್ಯಾಯದಲ್ಲಿ ಹೇಳಲಾಗಿದೆ. ಹಿಂದೆ ಹೇಳಿದ ಸಮಸ್ತ ಅಧ್ಯಾಯಗಳ ಸಾರಸಂಗ್ರಹವೇ ಈ ಅಧ್ಯಾಯ.

ಹಿಂದಿನ ಅಧ್ಯಾಯಗಳಲ್ಲಿ ನಮ್ಮ ಸಾಧನೆ ಹೇಗಿರಬೇಕು ಎಂದು ವಿವರಿಸಿದ್ದ ಕೃಷ್ಣ, ಈ ಅಧ್ಯಾಯದಲ್ಲಿ ಆ ಸಾಧನೆಯ ಸಂದೇಶವನ್ನು ಸಂಗ್ರಹ ರೂಪದಲ್ಲಿ ನಮ್ಮ ಮುಂದೆ ಇಟ್ಟಿರುವನು. ಇದರ ಜೊತೆಗೆ ವಿವರಿಸದೇ ಇರುವ ಸಾಧನೆಗೆ ಕುರಿತಾದ ತ್ರೈಗುಣ್ಯದ ಮುಂದುವರಿದ ವಿವರಣೆ ಕೂಡ ಇಲ್ಲಿದೆ. ಶ್ರದ್ಧೆಯ ಅನುಸಾರವಾಗಿ ತ್ಯಾಗ, ಜ್ಞಾನ, ಕರ್ಮ, ಕರ್ತಾ, ಬುದ್ಧಿ, ಧೃತಿ ಮತ್ತು ಸುಖಗಳನ್ನು ವಿವರಿಸಲಾಗಿದೆ.

ಪ್ರವೃತ್ತಿ ಮಾರ್ಗ ಮತ್ತು ನಿವೃತ್ತಿ ಮಾರ್ಗ, ಕರ್ತವ್ಯ ಹಾಗು ಅಕರ್ತವ್ಯ, ಭಯ ಮತ್ತು ಅಭಯ ಹಾಗೆಯೇ ಬಂಧನ ಮತ್ತು ಮೋಕ್ಷಗಳನ್ನು ಯಥಾರ್ಥವಾಗಿ ತಿಳಿಯುವವನು ಬುದ್ಧಿವಂತ. ಆಧ್ಯಾತ್ಮಿಕ ಶಿಸ್ತನ್ನು ಪ್ರತಿಯೊಬ್ಬರು ಪಾಲಿಸಲೇ ಬೇಕು. ಅದುವೇ ಯಜ್ಞ, ದಾನ ಮತ್ತು ತಪಸ್ಸುಗಳು.

**ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।**
**ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥**

ಯಜ್ಞ, ದಾನ, ತಪೋ ರೂಪೀ ಕರ್ಮಗಳನ್ನು ಹಾಗೂ ಇತರ ಸಮಸ್ತ ಕರ್ತವ್ಯ ಕರ್ಮಗಳನ್ನು ಆಸಕ್ತಿ ಮತ್ತು ಫಲಗಳನ್ನು ತ್ಯಜಿಸಿ ಅವಶ್ಯವಾಗಿ ಮಾಡಬೇಕು. ಇದು ಭಗವಂತನ ನಿಶ್ಚಿತವಾದ ಅಭಿಪ್ರಾಯ. ಶಾಸ್ತ್ರವಿಧಿಯಿಂದ ನಿಯಮಿಸಿದ ಕರ್ಮವನ್ನು ಕರ್ತೃತ್ವದ ಅಭಿಮಾನದಿಂದ ರಹಿತರಾಗಿ ಫಲವನ್ನು ಬಯಸದೆ ಮಾಡುವ ಕರ್ಮವೇ ನಿಜವಾದ ಕರ್ಮ, ಯಾವುದೇ ಒಂದು ಕರ್ಮ ಘಟಿಸಲು ಐದು ಕಾರಣಗಳಿರುತ್ತವೆ.

**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿದಮ್ ।**
**ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥**

ಮೊದಲನೆಯದು ಅಧಿಷ್ಠಾನ ಅಂದರೆ ಕ್ರಿಯೆ ನಡೆಯುವ ಸ್ಥಳ. ಈ ದೇಹವೇ ನಮ್ಮ ಅಧಿಷ್ಠಾನ. ಎರಡನೆಯದು ಕರ್ತಾ. ಅಂದರೆ ಕರ್ಮಗಳನ್ನು ಮಾಡುವವನು (ಆಸೆ, ಕೋಪ, ಭಯ, ಭಗವದ್ಗೀತೆಯ ಜ್ಞಾನ ಮುಂತಾದವುಗಳು). ಮೂರನೆಯದು ಕರಣಗಳು ಅಂದರೆ ಯಾವ ಯಾವ ಇಂದ್ರಿಯಗಳ ಮೂಲಕ ಕ್ರಿಯೆಗಳು ನಡೆಯುವವೋ ಅವು ಕರಣಗಳು. ನಾಲ್ಕನೆಯದು ಕ್ರಿಯೆ ನಡೆಯಲು ಹೇತುವಾದ ನಮ್ಮ ಸುತ್ತಮುತ್ತಲಿನ ಪರಿಸರದ ಪ್ರಭಾವ. ಐದನೆಯದು ದೈವ, ಪೂರ್ವಕೃತ ಕರ್ಮಗಳ ಫಲ ಅಥವಾ ದೈವ ಇಚ್ಛೆ ಆಥವಾ ಅಜ್ಞಾತವಾದ ಅಂಶ.

ಕರ್ಮ ಘಟಿಸಲು ಈ ಐದು ಕಾರಣಗಳಾದರೆ, ಕರ್ಮದ ಪ್ರೇರಣೆ ಮೂರು ವಿಧಗಳಲ್ಲಿರುತ್ತವೆ. ಅವೇ ಪರಿಜ್ಞಾತ, ಜ್ಞಾನ ಮತ್ತು ಜ್ಞೇಯ. 'ಪರಿಜ್ಞಾತ' ಎಂದರೆ ಜ್ಞಾನವನ್ನು ಪಡೆದುಕೊಳ್ಳುವವನ ಹೆಸರು. ಕರ್ಮಗಳನ್ನು ಮಾಡುವುದು ಜ್ಞಾನವನ್ನು ಪಡೆಯುವುದರ ಸಲುವಾಗಿ. 'ಜ್ಞಾನ' ಎಂದರೆ ಯಾವುದರ ಮೂಲಕ ತಿಳಿದುಕೊಳ್ಳಲಾಗುವುದೋ ಅದೇ ಜ್ಞಾನ. ಯಾವ ಜ್ಞಾನದಿಂದ ಮನುಷ್ಯನು ಬೇರೆ-ಬೇರೆಯಾದ ಎಲ್ಲ ಪ್ರಾಣಿಗಳಲ್ಲಿ ಒಂದೇ ಅವಿನಾಶಿಯಾದ ಪರಮಾತ್ಮ ಭಾವವನ್ನು ವಿಭಾಗರಹಿತ ಸಮಭಾವದಿಂದ ಸ್ಥಿತನಾಗಿದ್ದಾನೆ ಎಂದು ತಿಳಿದುಕೊಳ್ಳುವನೋ ಅದೇ ನಿಜವಾದ ಜ್ಞಾನ. ಭಗವದ್ಗೀತೆಯೇ ನಿಜವಾದ ಜ್ಞಾನ. ಮೂರನೆಯದು ಜ್ಞೇಯ, ಅಂದರೆ ತಿಳಿದುಕೊಳ್ಳಲು ಯೋಗ್ಯವಾದ ವಸ್ತುವಿನ ಹೆಸರು. ತಿಳಿಯಲು ಯೋಗ್ಯವಾದ ವಸ್ತು ಸಂಪೂರ್ಣ ಪ್ರಜ್ಞೆಯಾದ **ಅಕ್ಷರಬ್ರಹ್ಮ.**

ಕರ್ಮದ ಪ್ರೇರಣೆ ಮೂರು ವಿಧಗಳಲ್ಲಿರುವಂತೆ, ಕರ್ಮದ ಸಂಗ್ರಹವೂ ಮೂರು ರೀತಿಯಲ್ಲಿರುತ್ತವೆ. ಕರ್ತಾ, ಕರಣ ಮತ್ತು ಕ್ರಿಯೆ. ಕರ್ಮ ಮಾಡುವವನ ಹೆಸರು ಕರ್ತಾ, ಶುದ್ಧವಾದ ಕರ್ತನು ಸಂಗರಹಿತನಾಗಿ, ಅಹಂಕಾರದ ಮಾತನಾಡದೆ, ಧೈರ್ಯ-ಉತ್ಸಾಹದಿಂದ ವಿಕಾರರಹಿತನಾಗಿ ಕರ್ಮಗಳನ್ನು ಮಾಡುವನು. ಕರ್ಮಗಳನ್ನು ಮಾಡಲು ಬೇಕಾದ ಸಾಧನ ಕರಣಗಳು ಮತ್ತು ಮಾಡುವ ಹೆಸರು ಕ್ರಿಯೆ. ದೇಹ, ಇಂದ್ರಿಯ ಮತ್ತು ಮನಸ್ಸಿನ ಕ್ರಿಯೆಗಳನ್ನು ದಾರಿ ತಪ್ಪದಂತೆ ಮಾಡುವುದು ಅವ್ಯಭಿಚಾರಿಣಿ ಭಕ್ತಿ. ಭಕ್ತಿಯ ಧೃತಿಯನ್ನು ನಾವು ಪಡೆಯುವುದು ಧ್ಯಾನಯೋಗದ ಮೂಲಕ. ಭಜನೆ, ಧ್ಯಾನ ಮತ್ತು ಸೇವೆಯ ಅಭ್ಯಾಸದಲ್ಲಿ ಸಂತೋಷವನ್ನು ಕಾಣುವವನೇ ನಿಜವಾದ ಸುಖಿ.

**ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।**
**ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ ॥**

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಇವರ ಕರ್ಮಗಳು ಸ್ವಭಾವತಃ ಉತ್ಪನ್ನವಾದ ಗುಣಗಳಿಂದ ವಿಭಾಗಿಸಲಾಗಿದೆ. ಇಂದ್ರಿಯ ಮನಸ್ಸುಗಳನ್ನು ನಿಗ್ರಹಿಸಿ, ಅಂತಃಕರಣ ಶುದ್ಧಿಯಿಂದ, ವೇದ ಶಾಸ್ತ್ರಗಳ ಅಧ್ಯಯನ ಮತ್ತು ಪಾಲನೆ ಮಾಡುವುದು ಬ್ರಾಹ್ಮಣರ ಸ್ವಾಭಾವಿಕ ಕರ್ಮ. ತಮ್ಮ ಶೌರ್ಯ, ತೇಜಸ್ಸಿನಿಂದ ಸಮಾಜದ ರಕ್ಷಣೆ ಮಾಡುವುದು ಕ್ಷತ್ರಿಯರ ಸ್ವಾಭಾವಿಕ ಕರ್ಮ. ಕೃಷಿ, ಗೋಪಾಲನೆ, ಸತ್ಯವಾದ ವ್ಯಾಪಾರ ಮತ್ತು ವ್ಯವಹಾರ ಮಾಡುವುದು ವೈಶ್ಯರ ಸ್ವಾಭಾವಿಕ ಕರ್ಮ. ಸರ್ವ ವರ್ಣಗಳ ಸೇವೆಯನ್ನು ಮಾಡುವುದು ಶೂದ್ರರ ಸ್ವಾಭಾವಿಕ ಕರ್ಮ. ತಮ್ಮ ತಮ್ಮ ವರ್ಣಗಳ ಧರ್ಮವನ್ನು ಪಾಲನೆ ಮಾಡುವುದರ ಮುಖಾಂತರ ಪರಮಸಿದ್ಧಿಯನ್ನು ಪಡೆಯಬಹುದು. ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತ, ಗುಣರಹಿತವಾದ ಸ್ವಧರ್ಮವೇ ಶ್ರೇಷ್ಠವಾದುದು.

ಪರಮೇಶ್ವರನೇ ಸರ್ವಸ್ವವೆಂದು ತಿಳಿದುಕೊಂಡು, ಆತನ ಚಿಂತನೆ ಮಾಡುತ್ತಾ, ಆತನ ಆಜ್ಞಾನುಸಾರ ಕಾಯ–ವಾಚ–ಮನಸಾ ಪರಮಾತ್ಮನಿಗಾಗಿಯೇ ಪ್ರಕೃತಿಗೆ ಅನುಸಾರವಾಗಿ ಶಾಸ್ತ್ರೋಕ್ತ ವಿಧಿಯಿಂದ ನಿಯಮಿಸಲ್ಪಟ್ಟ ವರ್ಣಾಶ್ರಮದ ಧರ್ಮ ಮತ್ತು ಸಾಮಾನ್ಯ ಧರ್ಮರೂಪೀ ಸ್ವಾಭಾವಿಕವಾದ ಕರ್ತವ್ಯ ಕರ್ಮಗಳಾದ ಸ್ವಧರ್ಮ ಆಚರಣೆಗಳನ್ನು ಮಾಡುತ್ತಾ, ನಿಷ್ಕಾಮ ಕರ್ಮಗಳ ಮುಖಾಂತರ ಪರಮಾತ್ಮನ ಪೂಜೆಯನ್ನು ಮಾಡಬೇಕು. ಆಸಕ್ತಿರಹಿತ ಬುದ್ಧಿಯಿಂದ ನಿಸ್ಪೃಹರಾಗಿ ಅಂತಃಕರಣವನ್ನು ಗೆದ್ದು, ಜ್ಞಾನ ಯೋಗದ ಮೂಲಕ ನೈಷ್ಕರ್ಮ್ಯ ಸಿದ್ಧಿಯನ್ನು ಪಡೆಯಬೇಕು. ನಿಯಮಿತವಾಗಿ ಸಾತ್ವಿಕ ಆಹಾರವನ್ನು ತೆಗೆದುಕೊಂಡು ಏಕಾಂತದಲ್ಲಿ ಅಂತಃಕರಣವನ್ನು ಸಂಯಮದಲ್ಲಿಟ್ಟುಕೊಂಡು, ಮನಸ್ಸು–ವಾಣಿ–ಶರೀರವನ್ನು ವಶಪಡಿಸಿಕೊಂಡು, ರಾಗ–ದ್ವೇಷಗಳನ್ನು ತ್ಯಜಿಸಿ, ದೃಢವಾದ ವೈರಾಗ್ಯವನ್ನು ಆಶ್ರಯಿಸಿ, ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಸಂಗ್ರಹ ಪ್ರವೃತ್ತಿಗಳನ್ನು ತ್ಯಜಿಸಿ, ನಿರಂತರ ಧ್ಯಾನಯೋಗ ಪರಾಯಣರಾದಾಗ ಮಮತಾ ರಹಿತರಾಗಿ, ಶಾಂತಿಯುಕ್ತರಾಗಿ, ನಾವು ಆ ಸಚ್ಚಿದಾನಂದಘನ ಬ್ರಹ್ಮನಲ್ಲಿ ಅಭಿನ್ನರಾಗಿ ಸ್ಥಿತರಾಗುತ್ತೇವೆ. ಈ ರೀತಿ ಸಚ್ಚಿದಾನಂದ ಘನ ಬ್ರಹ್ಮನಲ್ಲಿ ತದ್ರೂಪವಾಗಿ ಪ್ರಸನ್ನ ಚಿತ್ತವುಳ್ಳವರಾದಾಗ, ಯೋಗಿಯಾಗಿ ಪರಾಭಕ್ತಿಯನ್ನು ಪಡೆಯುವೆವು. ಈ ರೀತಿ ಪರಾಭಕ್ತಿಯನ್ನು ಗಳಿಸಿಕೊಂಡಾಗ ಪರಮಾತ್ಮನನ್ನು ತತ್ತ್ವತಃ ತಿಳಿದುಕೊಂಡು, ಭಕ್ತಿಯಿಂದ ಆ ಪರಮಾತ್ಮನಲ್ಲೇ ಪ್ರವೇಶವನ್ನು ಪಡೆಯುವೆವು. ಸಮತ್ವ ಬುದ್ಧಿಯಿಂದ ಮನಃಪೂರ್ವಕ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿ ಆತನ ಪಾರಾಯಣರಾದಾಗ ಭಕ್ತಿಸಹಿತ ನಿಷ್ಕಾಮ ಕರ್ಮ ಯೋಗದಿಂದ ಆ ಭಗವಂತನನ್ನು ಪಡೆಯುತ್ತೇವೆ.

ಈ ರೀತಿ ಸ್ವಧರ್ಮವನ್ನು ಪಾಲಿಸುತ್ತಾ, ನಿಷ್ಕಾಮ ಕರ್ಮಗಳನ್ನು ಮಾಡುತ್ತಾ, ನೈಷ್ಕರ್ಮತೆಯನ್ನು ಗಳಿಸಿಕೊಂಡು, ಧ್ಯಾನದಲ್ಲಿ ಮಗ್ನರಾಗಿ, ಸ್ಥಿರವಾದ ಪ್ರಜ್ಞೆಯನ್ನು ಹೊಂದಿದವರಾಗಿ, ಯೋಗಿಗಳಾಗಿ, ಅವ್ಯಭಿಚಾರಿಣಿ ಭಕ್ತಿಯನ್ನು ಹೊಂದಿ, ತದ್ರೂಪನಾದ ಆ ಪರಬ್ರಹ್ಮನನ್ನು ತತ್ತ್ವತಃ ತಿಳಿದುಕೊಂಡು ಆತನಲ್ಲಿ ಪ್ರವೇಶವನ್ನು ಪಡೆಯಬಹುದಾಗಿದೆ.

ವ್ಯಾಮೋಹದಿಂದ ನಾವು ಯಾವುದೇ ನಿರ್ಣಯಗಳನ್ನು ಕೈಗೊಂಡರೂ ಸಹ, ನಮ್ಮ ಸ್ವಭಾವ, ನಮ್ಮ ನಿರ್ಣಯಗಳನ್ನು ಮೀರಿ ನಡೆದುಕೊಳ್ಳುತ್ತದೆ.

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**

ನಮ್ಮ ಶರೀರದಲ್ಲಿ ಸರ್ವಾಂತರ್ಯಾಮಿಯಾಗಿ ನೆಲೆಸಿರುವ ಭಗವಂತನು ನಮ್ಮ ಕರ್ಮಗಳಿಗನುಸಾರ ನಮ್ಮನ್ನು ನಡೆಸುವನು. ನಾವು ಅಹಂಕಾರವನ್ನು ಬಿಟ್ಟು ಆ ಪರಮಾತ್ಮನಲ್ಲಿ ಶರಣಾದಾಗ (ನಮ್ಮ ಕರ್ತವ್ಯ ಕರ್ಮಗಳನ್ನು ಆತನಿಗೆ ಸಮರ್ಪಿಸಿದಾಗ) ನಮ್ಮ ಕರ್ಮಗಳಿಗನುಸಾರ ನಮ್ಮನ್ನು ಆ ಭಗವಂತನು ಧರ್ಮಪಥದಲ್ಲಿ ಕೊಂಡೊಯ್ಯುವನು. ಆತನಲ್ಲಿಯೇ ಮನಸ್ಸುಳ್ಳವರಾಗಿ ಆತನ ಭಕ್ತರಾಗಿ, ಆತನನ್ನು ಪೂಜಿಸಿ, ನಮಸ್ಕರಿಸಬೇಕು. ಈ ರೀತಿ ಭಗವಂತನಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿದಾಗ, ನಾವು ಆತನನ್ನೇ ಪಡೆಯುತ್ತೇವೆ. ಇದು ಪರಮರಹಸ್ಯವಾದ ಮಾತು. ಈ ರಹಸ್ಯವನ್ನು; ಇಚ್ಛೆ ಇಲ್ಲದ, ಭಕ್ತಿ ಹೀನರಾದ, ತಪಸ್ಸು ಮಾಡದ, ದೋಷ ದೃಷ್ಟಿಯಿರುವ ಮನುಷ್ಯರಿಗೆ ಹೇಳಬಾರದು. ಯಾರು ಭಗವಂತನಲ್ಲಿ ಪರಮ ಪ್ರೇಮವುಳ್ಳವರೋ, ಅವರಿಗೆ ಮಾತ್ರ ಈ ಗೀತೆಯನ್ನು ಹೇಳಬೇಕು.

**ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।**
**ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥**

ಕೃಷ್ಣಾರ್ಜುನ ಸಂವಾದ ರೂಪದ ಗೀತಾಶಾಸ್ತ್ರವನ್ನು ಅಧ್ಯಯನ ಮತ್ತು ಪಾಲನೆ ಮಾಡುವುದು, ನಾವು ಆ ಭಗವಂತನಿಗೆ ಸಲ್ಲಿಸುವ ಉತ್ಕೃಷ್ಟವಾದ ಜ್ಞಾನಯಜ್ಞದ ಪೂಜೆ.

ಈ ಉಪದೇಶ ವಾಕ್ಯಗಳು, ಅರ್ಜುನನ ಎಲ್ಲಾ ಸಂಶಯಗಳನ್ನು ನಿವಾರಿಸಿ, ಪರಮಾತ್ಮನಲ್ಲಿ ಚಿತ್ತವುಳ್ಳವನಾಗಿ, ಆತನ ಉಪದೇಶದಂತೆ ನಡೆಯುವ ದೃಢಚಿತ್ತತೆಯನ್ನು ಪಡೆದುಕೊಳ್ಳುವವನನ್ನಾಗಿ ಮಾಡಿತು.

ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳ ನಿರೂಪಕನಾದ, ವ್ಯಾಸರಿಂದ ದಿವ್ಯದೃಷ್ಟಿಯನ್ನು ಪಡೆದಿದ್ದ ಜ್ಞಾನಿ ಸಂಜಯನು–ಆ ಭಗವಂತನ ವಿಶ್ವರೂಪವನ್ನು ದರ್ಶಿಸಿದ ಮತ್ತು ಸ್ವಯಂ ಭಗವಂತನಿಂದ ಬಂದ ಉಪದೇಶವಾದ ಗೀತೆಯನ್ನು ಕೇಳಿದ ತನ್ನ ಭಾಗ್ಯವನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾ ಆನಂದತುಲಿತನಾದನು.

**ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥**

ಎಲ್ಲಿ ಯೋಗೇಶ್ವರನಾದ ಶ್ರೀ ಕೃಷ್ಣನಿರುವನೋ (ಭಗವಂತ) ಮತ್ತು ಎಲ್ಲಿ ಗಾಂಢೀವಧಾರಿ ಅರ್ಜುನನಿರುವನೋ (ಭಗವದ್ಗೀತೆಯನ್ನು ಪಾಲಿಸುವ ಭಕ್ತ), ಅಲ್ಲಿ ಸದಾ ಶ್ರೀ (ಐಶ್ವರ್ಯ), ವಿಜಯ (ಸ್ವಾರ್ಥದ ಮೇಲೆ ಗೆಲುವು), ಭೂತಿಃ (ದೇವರ ಆಶೀರ್ವಾದ ಮತ್ತು ಆನಂದ), ಧೃವಾ ನೀತಿ (ಶಾಶ್ವತವಾದ ಧರ್ಮ) ನೆಲೆಸಿರುತ್ತದೆ ಎಂದು ಸಂಜಯನ ಅಭಿಪ್ರಾಯ.

**॥ ಓಂ ತತ್ಸತ್ ॥**

**॥ ಶ್ರೀ ಕೃಷ್ಣಾಪರಬ್ರಹ್ಮಾರ್ಪಣಮಸ್ತು ॥**

# ಗೀತಾ ಆರತಿ

**ಜಯ ಭಗವದ್ಗೀತೇ, ಜಯ ಭಗವದ್ಗೀತೆ ।**
**ಹರಿ – ಹಿಯ – ಕಮಲ ವಿಹಾರಿಣಿ ಸುಂದರ ಸುಪುನೀತೆ ॥ ಜಯ ॥**

ತಾಯಿ ಭಗವದ್ಗೀತೆಯೇ ನಿನಗೆ ಜಯವಾಗಲಿ. ಸುಂದರ ಮತ್ತು ಪುಣ್ಯವತಿಯಾದ ನೀನು ಹರಿಯ ಹೃದಯ ಕಮಲದಲ್ಲಿ ವಿಹರಿಸುವ ಭಾಗ್ಯವಂತೆ.

**ಕರ್ಮ –ಸುಮರ್ಮ – ಪ್ರಕಾಶಿನಿ ಕಾಮಾಸಕ್ತಿಹರಾ ।**
**ತತ್ತ್ವಜ್ಞಾನ – ವಿಕಾಶಿನಿ, ವಿದ್ಯಾ ಬ್ರಹ್ಮ ಪರಾ ॥ ಜಯ ॥**

ಕರ್ಮಗಳ / ಕ್ರಿಯೆಗಳ ಮರ್ಮವನ್ನು / ರಹಸ್ಯಗಳನ್ನು ಪ್ರಕಾಶಗೊಳಿಸುವ, ಕಾಮನೆ / ಆಸೆಗಳ ಆಸಕ್ತಿಯನ್ನು ನಾಶಪಡಿಸುವ ನೀನು ತತ್ತ್ವಜ್ಞಾನವನ್ನು ಪ್ರಕಾಶಗೊಳಿಸುವೆ. ಪರಬ್ರಹ್ಮನೆಡೆಗೆ ಕರೆದುಕೊಂಡು ಹೋಗುವ ವಿದ್ಯೆಯೇ ನೀನಾಗಿರುವೆ.

**ನಿಶ್ಚಲ–ಭಕ್ತಿ–ವಿಧಾಯಿನಿ ನಿರ್ಮಲ ಮಲಹಾರೀ ।**
**ಶರಣ – ರಹಸ್ಯ – ಪ್ರದಾಯಿನಿ ಸಬ ವಿಧಿ ಸುಖಕಾರೀ ॥ ಜಯ ॥**

ಸರ್ವೋಚ್ಚವಾದ ನಿಶ್ಚಲ ಮತ್ತು ನಿರ್ಮಲವಾದ ಭಕ್ತಿಯನ್ನು ಕರುಣಿಸುವ, ಎಲ್ಲಾ ಅಡೆತಡೆಗಳನ್ನು ಹೋಗಲಾಡಿಸುವ, ಶರಣಾದವರಿಗೆ (ಜೀವನದ ಸಾಗರವನ್ನು ದಾಟಲು) ರಹಸ್ಯವನ್ನು ಪ್ರಸಾದಿಸುವ ನೀನು ಎಲ್ಲರ ಭಾಗ್ಯವನ್ನು ಸುಖಮಯವಾಗಿರಿಸುವೆ.

**ರಾಗ – ದ್ವೇಷ – ವಿದಾರಿಣಿ ಕಾರಿಣಿ ಮೋದ ಸದಾ ।**
**ಭವ – ಭಯ – ಹಾರಿಣಿ ತಾರಿಣಿ ಪರಮಾನಂದ ಪ್ರದಾ ॥ ಜಯ ॥**

ರಾಗ – ದ್ವೇಷಗಳನ್ನು ತೊಲಗಿಸಿ, ಹುಟ್ಟು–ಸಾವುಗಳ ಭಯವನ್ನು ಹೋಗಲಾಡಿಸಿ, ಸಂಸಾರವೆಂಬ ಸಾಗರವನ್ನು ದಾಟಿಸುವ ತಾಯಿ ಭಗವದ್ಗೀತೆಯೇ, ನೀನು ಸದಾ ಸಂತೋಷ ಮತ್ತು ಪರಮ ಆನಂದವನ್ನು ನೀಡುವೆ.

**ಆಸುರ – ಭಾವ – ವಿನಾಶಿನಿ ನಾಶಿನಿ ತಮ – ರಜನೀ ।**
**ದೈವೀ – ಸದ್ಗುಣದಾಯಿನಿ ಹರಿ ರಸಿಕಾ – ಸಜನೀ ॥ ಜಯ ॥**

ಆಸುರ ಭಾವವನ್ನು ನಾಶಪಡಿಸುವೆ, ಅಜ್ಞಾನ ಮತ್ತು ಅಂಧಕಾರಗಳನ್ನು ದೂರ ಮಾಡಿ ದೈವೀ ಗುಣಗಳನ್ನು ಮತ್ತು ದಿವ್ಯದೃಷ್ಟಿಯನ್ನು ನೀಡುವೆ. ನಿನ್ನಲ್ಲೇ ಸದಾ ರಮಿಸುವ ಹರಿಗೆ ನೀನು ಪರಮಪ್ರಿಯೆಯಾಗಿರುವೆ.

**ಸಮತಾ, ತ್ಯಾಗ – ಸಿಖಾವನಿ ಹರಿ – ಮುಖಕೀ ಬಾನೀ ।**
**ಸಕಲ – ಶಾಸ್ತ್ರಕೀ ಸ್ವಾಮಿನಿ, ಶ್ರುತಿಯೋಕೀ ರಾನೀ ॥ ಜಯ ॥**

ಸಮಚಿತ್ತತೆ ಮತ್ತು ತ್ಯಾಗವನ್ನು ಕಲಿಸುವ, ನೀನು ಹರಿಯ ಮುಖಾರವಿಂದದಿಂದಲೇ ಹೊರಟಿರುವೆ. ಎಲ್ಲಾ ಶಾಸ್ತ್ರಗ್ರಂಥಗಳ ಭಂಡಾರವಾದ ನೀನು ವೇದಗಳಿಗೆ / ಶೃತಿಗಳಿಗೆ ರಾಣಿಯಾಗಿರುವೆ.

**ದಯಾ – ಸುಧಾ ಬರಸಾವನಿ ಮಾತು! ಕೃಪಾ ಕೀಜೈ ।**
**ಹರಿಪದ – ಪ್ರೇಮ ದಾನ ಕರ ಅಪನೋ ಕರ ಲೀಜೈ ॥ ಜಯ ॥**

ಅಮೃತವನ್ನು ಕೃಪೆತೋರಿ ದಯಪಾಲಿಸಿರುವ ಮಾತೆಯಾದ ಭಗವದ್ಗೀತೆಯೆ ನಿನಗೆ ಜಯವಾಗಲಿ. ಹರಿಯ ನಾಮವನ್ನು ಪ್ರೇಮದಿಂದ ಸ್ಮರಿಸಿ, ದಾನಿಗಳಾಗಿ ಜಯಶೀಲರಾಗೋಣ.

# ಶಾಂತಿ ಮಂತ್ರಗಳು

**ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯಾ ।**
**ಮೃತ್ಯೋರ್ಮ ಅಮೃತಂಗಮಯಾ ಓಂ ಶಾಂತಿಃ ಶಾಂತಿಃ ಶಾಂತಿಃ ॥**

ಅರ್ಥ : ಸರ್ವವ್ಯಾಪಿಯಾದ ಪರಮಾತ್ಮನೇ, ಅಸತ್ಯದಿಂದ ಸತ್ಯಕ್ಕೆ, ಅಂಧಕಾರದಿಂದ ಪ್ರಕಾಶಕ್ಕೆ, ಮೃತ್ಯುವಿನಿಂದ ಅಮರತ್ವದೆಡೆಗೆ ನಮ್ಮನ್ನು ನಡೆಸು.

**ಓಂ ಸಹನಾ ವವತು ಸಹನೌ ಭುನಕ್ತು ।**
**ಸಹ ವೀರ್ಯಂ ಕರವಾವಹೈ**
**ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ ।**
**ಓಂ ಶಾಂತಿಃ ಶಾಂತೀ ಶಾಂತಿಃ ॥**

ಅರ್ಥ : ಭಗವಂತ ನಮ್ಮೆಲ್ಲರ ರಕ್ಷಣೆ ಮಾಡಲಿ, ನಾವೆಲ್ಲ ಒಂದಾಗಿ ಸುಖವನ್ನು ಅನುಭವಿಸೋಣ, ಒಬ್ಬರು ಇನ್ನೊಬ್ಬರ ಕಲ್ಯಾಣಕ್ಕಾಗಿ ಪ್ರಯತ್ನ ಮಾಡೋಣ, ನಮ್ಮೆಲ್ಲರ ಜೀವನದಲ್ಲಿ ಪ್ರಕಾಶ ತುಂಬಿರಲಿ, ಪರಸ್ಪರ ಯಾವುದೇ ದ್ವೇಷ ಮತ್ತು ಅಸೂಯೆ ಇಲ್ಲದಿರಲಿ, ಎಲ್ಲೆಡೆ ಶಾಂತಿ ತುಂಬಿರಲಿ.

## ಗುರುಗಳ ಹಾರೈಕೆಗಳು – ಸಮಗ್ರ ಜೀವನವನ್ನು ನಡೆಸಲು ಶುಭವಾಗಲಿ

**ಗೋವಿಂದ = ಗೋ (ಸೃಷ್ಟಿ) ವಿಂದ ( ರಕ್ಷಕ / ಪ್ರಭು)**

**ಗೋವಿಂದ = ಗೋ (ಜೀವಾತ್ಮ) ವಿಂದ (ಉಪಸ್ಥಿತ / ಪ್ರಭು)**

ಯಾರು ವೇದಜ್ಞಾನವನ್ನು ಕಲಿತು, ಅದನ್ನು ಇದೇ ಜನ್ಮದಲ್ಲಿ ಅಳವಡಿಸಿಕೊಂಡು ಜೀವನವನ್ನು ಆನಂದಿಸುವರೋ ಅವರೇ ಧನ್ಯರು

ಅತ್ಯಂತ ಶಕ್ತಿಯುತವಾದ ಗುಣಶಕ್ತಿಗಳಾದ ಇಚ್ಛೆ, ಭಯ, ಕ್ರೋಧಗಳು ನಮ್ಮನ್ನು ಅಕ್ಷರಬ್ರಹ್ಮನಿಂದ ದೂರ ಒಯ್ಯುವ ಪ್ರಸ್ತುತ ಈ ಕಲಿಯುಗದಲ್ಲಿ ನಮ್ಮನ್ನು ಅಕ್ಷರಬ್ರಹ್ಮನೆಡೆಗೆ ಅಕರ್ಷಿಸುವವನೇ ಕೃಷ್ಣ. ಭಗವದ್ಗೀತೆಯು ಕಲಿಯುಗಕ್ಕೆ ಉಪಯುಕ್ತವಾದುದಾಗಿದೆ.

### <u>ಗುರುಗಳ ಪರಿಚಯ</u>


**ಶ್ರೀ ಡಿ. ಎಸ್. ಶ್ರೀಧರ್** – ಭಗವದ್ಗೀತೆಯ ಆಧಾರದ ಮೇಲೆ ಸೌಹಾರ್ದ ಜೀವನದ ಮಾರ್ಗದರ್ಶಕರು ಮತ್ತು ತರಬೇತುದಾರರು

- Bachelors in Civil Engineering @ University of Mysore - 1985
- Masters in Civil Engineering @ Bangalore University
- Advanced Management Program @ Indian Institute of Management, Bangalore.
- Structural Engineer for many award winning structures
- Lastly worked as CEO of a Real Estate Developer Company
- Author – Holistic Life Orientation and Holistic Life Vision, sourced from Srimad Bhagavad Gita
- President – Paramakshara Charitable Trust for poor & deserving
- Free Gita Pravachans & Meditation @ Old age homes, Orphanages, etc - 2014

ನಾವು ನಮ್ಮ ಜೀವನೋಪಾಯಕ್ಕಾಗಿ ಸಂಪಾದಿಸಿದ ನಂತರ, ನಾವು ಸ್ವಾವಲಂಬಿಗಳಾಗಲು ಸಹಾಯ ಮಾಡಿದ ಜನರಿಗಾಗಿ ಮತ್ತು ಅರ್ಹ ಬಡ ವ್ಯಕ್ತಿಗಳಿಗಾಗಿ ಸಂಪಾದಿಸಬೇಕು.

ಹಂಚುವುದು ಆಧ್ಯಾತ್ಮಿಕ, ಸಂಗ್ರಹಣೆ ಪ್ರಾಪಂಚಿಕ

**ಉಚಿತವಾದ ಬಾಡಿಗೆಯ ಈ ಪ್ರಪಂಚದಿಂದ ಅಕ್ಷರಬ್ರಹ್ಮನ ಮೂಲ ಶಾಶ್ವತ ಅಲೌಕಿಕ ವಾಸಸ್ಥಾನಕ್ಕೆ ಚಲಿಸಿರಿ.**



## ಗೀತೆಯ ಮೂಲಕ ಗೊಂದಲಗಳಿಲ್ಲದ ಆನಂದಮಯ ಜೀವನವನ್ನು ಅನುಭವಿಸಿರಿ.

ಸಮತೋಲನ ಭಾವದಿಂದ ಎಲ್ಲಾ ಸಂದರ್ಭಗಳಲ್ಲೂ ದ್ವೇಷವಿಲ್ಲದೆ ನಿರ್ಲಿಪ್ತತೆಯಿಂದ ಎಲ್ಲರನ್ನೂ ಸಮಾನರಾಗಿ ನೋಡುವುದರ ಮೂಲಕ ತಟಸ್ಥತೆಯನ್ನು ಮತ್ತು ಶೂನ್ಯ ಕರ್ಮಫಲವನ್ನು ಸಾಧಿಸಬಹುದು.

## 5D

| | |
|---|---|
| DETACHMENT BY EQUALITY TO ALL | **ಮಮಕಾರವನ್ನು ಬಿಟ್ಟು ಎಲ್ಲರನ್ನೂ ಸಮಾನವಾಗಿ ನೋಡಿ** |
| DISCIPLINE OF BODY, SPEECH & MIND | **ಕಾಯಾ,ವಾಚಾ,ಮನಸಾ – ಶಿಸ್ತನ್ನು ಅಳವಡಿಸಿಕೊಳ್ಳಿ** |
| DEDICATION TO SERVING POOR | **ಬಡಜನರಿಗೆ ಸಹಾಯ ಮಾಡಲು ಸಮರ್ಪಿತರಾಗಿರಿ** |
| DETERMINATION IN HAPPINESS & SORROW | **ಧೃತಿಗೆಡದೆ ಸುಖ–ದುಃಖಗಳನ್ನು ಎದುರಿಸಿ** |
| DOERSHIP (I, ME, MINE, EGO) RENUNCIATION | **ಕರ್ತೃತ್ವವನ್ನು (ನಾನು, ನನಗೆ, ನನ್ನದು, ಅಹಂಕಾರ) ತ್ಯಜಿಸಿ.** |

# ಗುರುಗಳು ಮತ್ತು ಧನ್ಯವಾದಗಳು



**ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್ । ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರಮ್ ।**

ಅಕ್ಷರಬ್ರಹ್ಮನ ಸುಗುಣರೂಪನಾದ ಶ್ರೀಕೃಷ್ಣನು, ಈ ಜಗತ್ತಿಗೇ ಗುರು. ಶ್ರೀಕೃಷ್ಣನನ್ನೇ ಗುರುವನ್ನಾಗಿಸಿಕೊಂಡು ಸ್ವ–ಅಧ್ಯಯನ ಮಾಡಿರುವ ನಮ್ಮ ಗುರುಗಳಾದ ಶ್ರೀ ಶ್ರೀಧರ್ ಧೂಳಿಪೇಟರವರಿಗೆ, ಆತನ ನಿಸ್ವಾರ್ಥ ಅವತಾರವೇ ಪ್ರೇರಕ ಶಕ್ತಿ. ಗೀತಾಮೃತದಿಂದ, ಅಕ್ಷರಬ್ರಹ್ಮನನ್ನು ಸಂಪೂರ್ಣವಾಗಿ ಅನುಭವಿಸಲು ಬೇಕಾಗಿರುವ ಧ್ಯಾನ ಮತ್ತು ಜ್ಞಾನವನ್ನು ಪಡೆದು, ನಿಜವಾದ ಸಂಪೂರ್ಣ ಜೀವನ ದೃಷ್ಟಿಯನ್ನು ಹೊಂದಿ, ಗೀತೆಯನ್ನು ಪ್ರಾಯೋಗಿಕವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಿಷ್ಕಾಮದಿಂದ ಸತ್ಕರ್ಮಾಚರಣೆಗಳನ್ನು ಮಾಡುತ್ತಿರುವರು.

1964ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಇವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ತಾಂತ್ರಿಕ ಪದವಿಯಲ್ಲಿ ರಾಜ್ಯ ಮಟ್ಟದಲ್ಲಿ ರ‍್ಯಾಂಕ್‌ಗಳಿಸಿ, ಉನ್ನತ ಶಿಕ್ಷಣವನ್ನು ಮುಂದುವರೆಸಿದರು. ತಮ್ಮ ಶಾಲಾ–ಕಾಲೇಜು ದಿನಗಳಲ್ಲೇ, ಅಧ್ಯಾಪಕರ ಪ್ರಭಾವದಿಂದ ಸಮಾಜ ಸೇವೆಯ ದೃಷ್ಟಿಯನ್ನು ಹೊಂದಿದ್ದರು. ಶೈಕ್ಷಣಿಕ ಶಿಕ್ಷಣದ ನಂತರ ಉದ್ಯೋಗ ಕ್ಷೇತ್ರದಲ್ಲೂ ಸಹ ಅತ್ಯುನ್ನತ ಹುದ್ದೆಯಾದ ಒಂದು ಪ್ರತಿಷ್ಠಿತ ಕಂಪನಿಯ ಸಿ.ಇ.ಒ. ಆಗಿ ಕಾರ್ಯ ನಿರ್ವಹಿಸಿದರು. ಈ ಉದ್ಯೋಗದಲ್ಲಿರುವಾಗಲೇ ತಮ್ಮ ತಾಯಿಯ ಅಗಲಿಕೆಯು ಅವರಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕಿ ಅವರನ್ನು ಸಂಪೂರ್ಣವಾಗ ಆಧ್ಯಾತ್ಮಿಕ ದಾರಿಯನ್ನು ಹಿಡಿಯುವಂತೆ ಮಾಡಿತು. ಕೈತುಂಬಾ ಸಂಬಳ ತರುವ ಹುದ್ದೆಗೆ ರಾಜಿನಾಮೆಯನ್ನು ನೀಡಿ ಸತ್ಯದ ಅನ್ವೇಷಣೆಯತ್ತ ಚಲಿಸಿದರು. ನಿರಂತರ 6 ವರ್ಷಗಳ ಕಾಲ ಕಠಿಣ ಪರಿಶ್ರಮದಿಂದ ಪಡೆದುಕೊಂಡ ಜ್ಞಾನ ಮತ್ತು ಧ್ಯಾನವನ್ನು, 2014ರ ನಂತರ ಪ್ರಸಾರ ಮಾಡಲು ಆರಂಭಿಸಿದರು.

ಬೆಳಕು ವೃದ್ಧಾಶ್ರಮ, ಪುನಶ್ಚೇತನ ಫೌಂಡೇಷನ್, ಅಶಕ್ತ ಪೋಷಕ ಸಭೆ, ನೆಮ್ಮದಿ ಮನೆ, ಶಾಂಕರಿ ಬಳಗ ವ್ರದ್ಧಾಶ್ರಮ, ಆಶಾಜೀವನ ಇನ್ನೂ ಮುಂತಾದ ಐವತ್ತಕ್ಕೂ ಹೆಚ್ಚು ವೃದ್ಧಾಶ್ರಮ ಮತ್ತು ಅನಾಥ ಮಕ್ಕಳ ಆಶ್ರಮಗಳಿಗೆ ಭೇಟಿ ನೀಡಿ, ಗೀತೆಯ ಬೋಧನೆಯಿಂದ ಅವರಲ್ಲಿ ಚೈತನ್ಯ ತುಂಬಿ, ಅವರ ಸಮಸ್ಯೆಗಳಿಗೆ ಸ್ಪಂದಿಸಿರುವರು. ನಿಸ್ವಾರ್ಥವಾಗಿ ಅರ್ಹ ಬಡ ಜನರಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಸಹಾಯ ಮಾಡಲೆಂದು 2019ರಲ್ಲಿ " ಪರಮಾಕ್ಷರ ಚಾರಿಟಬಲ್ ಟ್ರಸ್ಟ್ " ನ್ನು ಪ್ರಾರಂಭಿಸಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವರು.

ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಅವ್ರೋಪ ಮುಂತಾದ ಸಂಘ ಸಂಸ್ಥೆಗಳ ವೇದಿಕೆಗಳಲ್ಲಿ ಉಪನ್ಯಾಸಗಳನ್ನು ನೀಡಿರುವ ಇವರು ದೇವಸ್ಥಾನಗಳಲ್ಲೂ ಸಹ ಪ್ರವಚನಗಳನ್ನು ಮಾಡಿರುವರು.

ನಿತ್ಯನಿರಂತರವಾಗಿ ಆಶ್ರಮಗಳ ಭೇಟಿ ಮಾಡಿ, ಸಮಾಜದ ಒಳತಿಗಾಗಿ ಶ್ರಮಿಸುತ್ತಿದ್ದ ಇವರ ಕಾರ್ಯಕ್ಕೆ ಕೊವಿಡ್ ಅಲೆಯು ತಡೆಯೊಡ್ಡಿತು. ಸಕ್ರಿಯರಾಗಿದ್ದ ಇವರು ಕ್ರಿಯಾಶೀಲರಾಗಿ, ತಮ್ಮ ಅಧ್ಯಯನ ಮತ್ತು ಅನುಭವದಿಂದ ಪಡೆದ ಜ್ಞಾನವನ್ನು **Holistic Life Orientation** ಮತ್ತು **Holistic Life Vision** ಎಂಬ ಪುಸ್ತಕಗಳನ್ನು ಬರೆದು, **'Online'** ತರಗತಿಗಳನ್ನು ನಡೆಸಿ ಯುವ ಜನಾಂಗವನ್ನು ತಲುಪಿದರು. ಇವರ ನೇತೃತ್ವದಲ್ಲಿ ಪ್ರಸ್ತುತ ಸಮಾಜದ ಒಳತಿಗಾಗಿ ಸಾಮೂಹಿಕವಾಗಿ ಗೀತಾ ಶ್ಲೋಕಗಳ ಕೋಟಿ ಯಜ್ಞವು ನಡೆಯುತ್ತಿದೆ.

ಅಗೆದಷ್ಟು ಆಳ, ಚಲಿಸಿದಷ್ಟು ದೂರ, ಕಲಿತಷ್ಟು ಕಲಿಸುವ ಗೀತಾ ಜ್ಞಾನವು ತನ್ನೆಡೆಗೆ ಬಂದ ಯಾರನ್ನೂ ಹಾಗೇ ಕಳಿಸುವುದಿಲ್ಲ. ಅವರವರಿಗೆ ಏನನ್ನು ತಿಳಿದುಕೊಳ್ಳಲು ಸಾಧ್ಯವೋ, ಎಷ್ಟನ್ನು ತಿಳಿದುಕೊಳ್ಳಲು ಸಾಧ್ಯವೋ, ಅಷ್ಟನ್ನು ಕೊಟ್ಟು ಕಳುಹಿಸುವುದು. ಗುರುಗಳು ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ಈ ಗೀತಾ ಜ್ಞಾನವನ್ನು ನೀಡಿರುವರು.

ಇವರ ಭಗವದ್ಗೀತೆಯ ಪ್ರವಚನಗಳ ಪ್ರಭಾವಕ್ಕೆ ಒಳಗಾದ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ತಂದುಕೊಂಡಿರುವರು. ಗೀತೆಯನ್ನು ಓದುವುದು ಮಾತ್ರವಲ್ಲ, ಅದರ ಸಂದೇಶದಂತೆ ನಡೆದುಕೊಳ್ಳುವುದು ಮುಖ್ಯ ಎಂಬುದನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸಿರುವರು. ದೇವರ ಮೇಲಿರುವ ನಮ್ಮ ನಂಬಿಕೆ ಮತ್ತು ಭಕ್ತಿಯನ್ನು ಕೃತಿಗಳ ಮೂಲಕ ವ್ಯಕ್ತಪಡಿಸಲು ಕಲಿಸಿರುವರು. ತಾವು ಮಾಡುವ ಸತ್ಕಾರ್ಯಗಳಲ್ಲಿ, ವಿದ್ಯಾರ್ಥಿಗಳನ್ನು ಸಹ ಕ್ರಿಯಾಶೀಲಗೊಳಿಸಿ ಅಕ್ಷರಬ್ರಹ್ಮನೆಡೆಗೆ ಸಾಗುವ ದಾರಿಯನ್ನು ತೋರಿಸಿರುವರು.

ಶಿಕ್ಷಣವು ಮನುಷ್ಯನ ಅಂತರ್ಗತ ಪರಿಪೂರ್ಣತೆಯ ಅಭಿವ್ಯಕ್ತಿಯಾಗಿದೆ. ಇಂತಹ ಶಿಕ್ಷಣವು ಲೌಕಿಕವಾಗಿ ಮಾತ್ರವಲ್ಲದೆ ಪಾರಮಾರ್ಥಿಕವಾಗಿಯೂ ಇರಬೇಕು. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಬೆಳವಣಿಗೆಗೆ ಇದು ಸಹಾಯಕಾರಿ. ಇಂತಹ ಶಿಕ್ಷಣವನ್ನು ಪುಸ್ತಕಗಳ ಮೂಲಕ ಮಾತ್ರ ಮಾಡದೆ, ನಡವಳಿಕೆ ಮತ್ತು ಆಚರಣೆಗಳ ಮೂಲಕ ನೀಡಬೇಕು. ಇಂತಹ ಕಾರ್ಯವೈಖರಿಯನ್ನು ಹೊಂದಿರುವ ನಮ್ಮ ಗುರುಗಳು, ನಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಿ, ನಮ್ಮನ್ನು ಅಶೀರ್ವದಿಸಿರುವುದಕ್ಕೆ ಅನೇಕಾನೇಕ ಧನ್ಯವಾದಗಳು.

– ಶ್ರೀಮತಿ ಭಾರತಿ ಭಾಸ್ಕರ್, ಶ್ರೀಮತಿ ರೂಪ ಶ್ರೀನಿವಾಸ್
ಮತ್ತು ಶಿಷ್ಯವೃಂದ

# ವಿದ್ಯಾರ್ಥಿಗಳ ಭಾವಾಭಿವ್ಯಕ್ತಿ

ಜೀವನದ ಆರಂಭ .....ಅಂತ್ಯದ ನಡುವಿನ ಜೀವನವನ್ನು ಹೇಗೆ ಸಾರ್ಥಕವಾಗಿ ರೂಪಿಸಿಕೊಳ್ಳಬಹುದು ಎಂಬುದರ ಬಗ್ಗೆ ತಿಳಿಸಿರುವ ವ್ಯಕ್ತಿ ಶ್ರೀಧರ್ ಸರ್. ಮೊದಲಿಗೆ ಕ್ಲಿಷ್ಟ ಅಥವ ಜಟಿಲ ಎನಿಸುವ ಭಗವದ್ಗೀತೆಯನ್ನು ದೈನಂದಿನ ಉದಾಹರಣೆಗಳೊಂದಿಗೆ ತಿಳಿಸುವ ಅವರ ವೈಖರಿ, ಭಗವದ್ಗೀತೆಯ ಬಗೆಗಿನ ಅವರ ಸ್ಪಷ್ಟತೆ, ವಿಚಾರ, ಘನತೆ, ವಾಕ್ಚಟುತ್ವ, ಜ್ಞಾನ, ಸರಳ ನೇರ ವಿಸ್ತರಣೆ, ಧ್ಯಾನ ಹಾಗು ದಾನದ ಬಗ್ಗೆ ವಿವರಣೆ, ಶಿಸ್ತು, ಸಮಯಪಾಲನೆ, ನನಗೆ ತುಂಬಾ ಪ್ರಿಯವೆನಿಸಿತು. ಅವರಿಗೆ ಹೃತ್ಪೂರ್ವಕ ವಿನಮ್ರ ನಮಸ್ಕಾರಗಳು. ಇಂತಹ ಗುರುಗಳ ಪ್ರವಚನದಿಂದ ಭಗವದ್ಗೀತೆಯ ಸತತ ಅಧ್ಯಯನ, ಸಮಭಾವ ಕಾಣುವ ಮನಸ್ಥಿತಿ, ಶಿಸ್ತುನ್ನು ಹಾಗೂ ಅವರ ವಿಚಾರಧಾರೆಗಳನ್ನು ಸ್ವಲ್ಪಮಟ್ಟಿಗೆ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಅವರಿಗೆ ಮತ್ತೊಮ್ಮೆ ವಿಧೇಯಪೂರ್ವಕ ವಂದನೆಗಳು.

– **ಸೂರ್ಯಪ್ರಭಾ**

ನನ್ನ ಮತ್ತು ಗುರುಗಳ ಭಗವದ್ಗೀತೆಯ ಪ್ರವಚನಗಳ ಒಡನಾಟ ಮೂರು ವರ್ಷಗಳದ್ದು. ಗುರುಗಳ ಭಗವದ್ಗೀತೆಯ ಪ್ರವಚನಗಳು ನನ್ನ ಜೀವನದಲ್ಲಿ ಬಹಳ ಪ್ರಭಾವವನ್ನು ಬೀರಿದೆ. ಒತ್ತಡದ ಜೀವನದಿಂದ ಹೊರಬಂದು ಕರ್ಮಬಂಧನವಿಲ್ಲದೆ ಕರ್ತವ್ಯ ಕರ್ಮಗಳನ್ನು ಮಾಡುತ್ತಾ ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯವನ್ನು ಪಡೆದಿರುವೆನು. ಜ್ಞಾನವನ್ನು ಪಡೆಯುವುದು ಮಾತ್ರ ಮುಖ್ಯವಾಗಿರದೆ, ಅದನ್ನು ಅಳವಡಿಸಿಕೊಳ್ಳುವುದರ ಪ್ರಾಮುಖ್ಯತೆಯನ್ನು ಅವರ ಪ್ರವಚನಗಳಿಂದ ತಿಳಿದುಕೊಂಡೆನು. ಯಜ್ಞ – ದಾನ – ತಪಸ್ಸು ಮತ್ತು ಧ್ಯಾನದ ಮಹಿಮೆಗಳನ್ನು ಅರಿತೆನು. ಇದನ್ನು ಅನುಸರಿಸಿದಾಗಲೇ ಮಾನವ ಜೀವನದ ಸಾರ್ಥಕತೆ ಎಂಬ ಅರಿವು ಮೂಡಿ ನನ್ನ ಜೀವನದ ಗುರಿಯೇನು ಎಂಬ ತಿಳುವಳಿಕೆಯನ್ನು ಪಡೆದುಕೊಂಡೆನು. ಈ ರೀತಿ ಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವಂತಹ ಗೀತಾ ಗುರುಗಳಾದ ಶ್ರೀಧರ್‌ರವರಿಗೂ ಹಾಗೂ ಇಂತಹ ಗುರುಗಳನ್ನು ನೀಡಿದ ಅಕ್ಷರಬ್ರಹ್ಮನಿಗೂ ನನ್ನ ಅನಂತಾನಂತ ಕೋಟಿ ನಮಸ್ಕಾರಗಳು. ಗುರುಗಳ ಆಶೀರ್ವಾದ ಸದಾ ನಮ್ಮ ಮೇಲೆ ಇರಲಿ.

– **ಶ್ರೀಮತಿ ಸುಧಾ ಶ್ರೀನಿವಾಸ್**

ಶ್ರೀಧರ್ ಸರ್ ಮೂಲಕ ನಾವು ಭಗವದ್ಗೀತೆಯನ್ನು ಕಲಿತಿರುವುದು ಒಂದು ಸುಯೋಗವೇ ಎಂದು ಹೇಳಬಹುದು. ಇವರ ವಿಶೇಷತೆ ಏನೆಂದರೆ, ಒಂದೊಂದು ಶ್ಲೋಕದ ವಿವರಣೆಯನ್ನು ವಿವರಿಸುವುದಲ್ಲದೆ ನಮ್ಮ ಅಭಿಪ್ರಾಯಗಳನ್ನು ಕೇಳಿ, ತಪ್ಪಿದ್ದರೆ ತಿಳಿಸಿ ಹೇಳುವರು. ಜನಸೇವೆಯೇ ಜನಾರ್ಧನ ಸೇವೆ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಿಸಿದ್ದಾರೆ. ಆಧ್ಯಾತ್ಮ ವಿದ್ಯೆ ಬಹಳ ಶ್ರೇಷ್ಠ. ಈ ತರಗತಿಯಿಂದ ನಾನು ಶಿಸ್ತು, ಸಂಯಮ, ಗೀತೆಯ ತಾತ್ಪರ್ಯ, ಜನಸೇವೆ, ಜ್ಞಾನ, ಧ್ಯಾನ, ಒತ್ತಡ ರಹಿತ ಜೀವನ ಬಹಳಷ್ಟು ಕಲಿತಿದ್ದೇನೆ. ಧನ್ಯೋಸ್ಮಿ.

– **ರೋಹಿಣಿ**

A great teacher is a treasure to students and the community. We are blessed to have that treasure with us. You are helping us to navigate through life by Bhagavadgita teachings. Thank you Sir, for your effort, continue to inspire as many people as you can through your teachings.

- Vaishnavi

ಸಾಮಾಜಿಕ ಮತ್ತು ಆರ್ಥಿಕ ಅಭದ್ರತೆಯಿಂದಾಗಿ ಮನೋಸ್ಥೈರ್ಯವನ್ನು ಕಳೆದುಕೊಂಡಿದ್ದ ನನಗೆ, ಆತ್ಮಸ್ಥೈರ್ಯವನ್ನು ತುಂಬಿ, ಭಗವದ್ಗೀತೆಯ ಜ್ಞಾನವನ್ನು ನೀಡಿರುವರು. ಅವರು ನೀಡಿದ ಜ್ಞಾನವನ್ನು, ನಾನು ಅಳವಡಿಸಿಕೊಳ್ಳಲು ಆರಂಭಿಸಿದೆ. ಇದರಿಂದ ನನ್ನ ಜೀವನ ಶೈಲಿ ಸಂಪೂರ್ಣ ಬದಲಾವಣೆಯಾಯಿತು. ನನ್ನ ಚಿಂತೆಗಳು ದೂರವಾಗಿ, ಪರಮಾತ್ಮನನ್ನು ಪಡೆಯುವ ದಾರಿಯಲ್ಲಿ ಸಾಗಿರುವೆನು. ಭಗವಂತನ ಸೇವೆ ಮಾಡಲು ನಾನು ಶಕ್ತಳಲ್ಲ ಎಂದು ಪರಿತಪಿಸುತ್ತಿದ್ದಾಗ, ಆಕ್ಷರ ಬ್ರಹ್ಮನು, ನನ್ನನ್ನು ಆಶೀರ್ವದಿಸಿ, ಹೊಸ ಉದ್ಯೋಗವನ್ನು ನೀಡಿರುವನು. ಇಂತಹ ಒಂದು ಜ್ಞಾನವನ್ನು ನೀಡಿ, ಪರಮಾತ್ಮನೆಡೆಗೆ ಸಾಗುವ ದಾರಿಯನ್ನು ತೋರಿಸಿರುವ ನಮ್ಮ ಜೀವನ ಗುರುಗಳಾದ ಶ್ರೀ ಶ್ರೀಧರ್ ಅವರಿಗೆ ಪದಾಭಿವಂದನೆಗಳು.

– **ಮಹಾಲಕ್ಷ್ಮಿ**

## ಉಪಕೃತರ ಪ್ರತಿಕ್ರಿಯೆಗಳು



ಶ್ರೀಧರ್ ಗುರುಗಳು ನಮ್ಮ ಆಶ್ರಮಕ್ಕೆ ಭೇಟಿ ನೀಡಿ, ವೃದ್ಧರ ಅವಶ್ಯಕತೆಗಳನ್ನು ಪೂರೈಸಿ, ಗೀತಾ ಜ್ಞಾನದಿಂದ, ಅವರಲ್ಲಿರುವ ದುಃಖ–ಚಿಂತೆಗಳನ್ನು ಹೋಗಲಾಡಿಸಿ ಉತ್ಸಾಹಿಗಳನ್ನಾಗಿ ಮಾಡುವರು.

**– ಶ್ರೀಮತಿ ದೀಪಾ, ಕಾರ್ಯ ನಿರ್ವಾಹಕಿ, ಪುನಶ್ಚೇತನ ಫೌಂಡೇಶನ್**

ಸುಮಾರು ಏಳೆಂಟು ವರ್ಷಗಳಿಂದ ನಮ್ಮ ಆಶ್ರಮಕ್ಕೆ ಭೇಟಿ ನೀಡಿ, ಅನಾಥ ಮಕ್ಕಳ ಶೈಕ್ಷಣಿಕ ಶುಲ್ಕವನ್ನು ಭರಿಸಿ, ಆರ್ಥಿಕ ಸಹಾಯವನ್ನು ಮಾಡಿರುವರು. ಕೆಲವೊಮ್ಮೆ ದಿವಸಿ ಪದಾರ್ಥಗಳಿಗೂ ಸಹ ಆರ್ಥಿಕ ಸಹಾಯವನ್ನು ಮಾಡಿರುವರು. ನಮ್ಮಲ್ಲಿರುವ Refrigerator ಸಹ ಅವರ ತಂಡದವರ ಕೊಡುಗೆಯೇ. ಐದು ವರ್ಷಗಳಿಂದ ನಾವು ಅದನ್ನೇ ಬಳಸುತ್ತಿದ್ದೇವೆ.

**– ಶ್ರೀ ನಾಗರಾಜ್, ಕಾರ್ಯ ನಿರ್ವಾಹಕ, ನೆಮ್ಮದಿ ಮನೆ**

ಸುಮಾರು ಐದಾರು ವರ್ಷಗಳಿಂದ ನಾವು ಶ್ರೀಧರ್ ಗುರುಗಳನ್ನು ಬಲ್ಲೆವು. ಅವರ ಆಗಮನ ನಮ್ಮಲ್ಲಿ ಚೈತನ್ಯವನ್ನು ತುಂಬುತ್ತದೆ. ಅವರ ಗೀತೆಯ ಜ್ಞಾನದಲ್ಲಿ ನಾವು ಆನಂದಿತರಾಗುತ್ತೇವೆ.

**– ಬೆಳಕು ವೃದ್ಧಾಶ್ರಮದ ವಾಸಿಗಳು**

ಶ್ರೀಧರ್ ಗುರುಗಳು ಪ್ರತಿಬಾರಿಯೂ ಭೇಟಿ ಮಾಡಿದಾಗ, ನಮಗಾಗಿ ಏನಾದರೊಂದನ್ನು ತರುವರು. ನಮ್ಮನ್ನು ಹಸನ್ಮುಖಿಗಳಾಗಿಸಿ, ತಾವು ತಂದಿರುವುದನ್ನು ನಮಗೆ ಹಂಚಿ ಸಂತೋಷಪಡುವರು.

**– ಶಾಂಕರಿ ಬಳಗ ವೃದ್ಧಾಶ್ರಮದ ವಾಸಿಗಳು**

ಬಡತನದಲ್ಲಿರುವ ನಮ್ಮ ಕುಟುಂಬದಲ್ಲಿ, ನನಗೆ ಇದ್ದಕ್ಕಿದ್ದಂತೆ ಕಿಡ್ನಿ ಡಯಾಲಿಸಿಸ್ ಮಾಡಬೇಕಾದ ಪರಿಸ್ಥಿತಿ ಎದುರಾಯಿತು. ಹಣದ ಸಹಾಯಕ್ಕಾಗಿ ಎದುರು ನೋಡುವ ಪರಿಸ್ಥಿತಿಯಲ್ಲಿದ್ದಾಗ, ಶ್ರೀಧರ್ ಸರ್ ರವರು ತಮ್ಮ ಟ್ರಸ್ಟ್‌ವತಿಯಿಂದ ಪ್ರತಿವರ್ಷ ಮೂರು ತಿಂಗಳು ಡಯಾಲಿಸಿಸ್ ವೆಚ್ಚವನ್ನು ಭರಿಸುತ್ತಾ ಬಂದಿದ್ದಾರೆ. ಈ ಸಹಾಯವನ್ನು ನಾನು ಖಂಡಿತಾ ಮರೆಯಲಾರೆ.

**– ವಸಂತ್ ಕುಮಾರ್, ವೈದ್ಯಕೀಯ ಸಹಾಯ ಪಡೆದವರು**

ನಮ್ಮ ಶಾಲೆಯು ಸರಕಾರಿ ಅನುದಾನಿತವಾದ ಶಾಲೆ. ಅತ್ಯಂತ ಬಡ ಕುಟುಂಬ ವರ್ಗದಿಂದ ಬಂದಿರುವ ವಿದ್ಯಾರ್ಥಿಗಳಿಗೆ, ಕೊವಿಡ್ ಪರಿಸ್ಥಿತಿಯಲ್ಲಿ ಶಾಲೆಯ ಶುಲ್ಕವನ್ನು ಕಟ್ಟಲಾಗದೆ, ಅವರ ಪೋಷಕರು ಕಷ್ಟವನ್ನನುಭವಿಸುತ್ತಿರುವಾಗ, ಶ್ರೀಧರ್ ಗುರುಗಳು ತಮ್ಮ ಟ್ರಸ್ಟ್ ವತಿಯಿಂದ ಸುಮಾರು 30 ವಿದ್ಯಾರ್ಥಿಗಳಿಗೆ ಶುಲ್ಕವನ್ನು ಕಟ್ಟಿ ತಮ್ಮ ಸಹಾಯಹಸ್ತವನ್ನು ನೀಡಿದರು. ನಮ್ಮ ವಿದ್ಯಾರ್ಥಿಗಳ ಪೋಷಕರು ಸದಾ ಅವರಿಗೆ ಆಭಾರಿಗಳು.

**– ಪ್ರಾಂಶುಪಾಲರು, ಸಹಕಾರಿ ವಿದ್ಯಾಕೇಂದ್ರ, ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಪದ್ಮನಾಭನಗರ**

ಶ್ರೀಧರ್ ಸರ್ ತುಂಬಾ ತುಂಬ ಥ್ಯಾಂಕ್ಸ್. ಎರಡು ವರ್ಷಗಳಿಂದ ನಮ್ಮ ಮಕ್ಕಳಿಗೆ ನೀವು ಫೀಸ್ ಕಟ್ಟಿದ್ದೀರ. **– ಹೂವು ಮಾರುವವರು**

## ಕೃತಜ್ಞತೆಗಳು

1. ದಿ. ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ದಿ. ಶ್ರೀ ಎಂ. ಕೃಷ್ಣಯ್ಯ ಶೆಟ್ಟಿ
2. ಶ್ರೀಮತಿ ಎಂ. ಆರ್. ವೆಂಕಟಲಕ್ಷ್ಮಮ್ಮ ಮತ್ತು ಶ್ರೀ ಎಂ. ಕೆ. ರಾಮಚಂದ್ರ ಗುಪ್ತ ಮತ್ತು ಮಕ್ಕಳು
3. ಶ್ರೀಮತಿ ಆನಂದಮ್ಮ ಮತ್ತು ದಿ. ಶ್ರೀ ಜಯರಾಮಮೂರ್ತಿ ಗುಪ್ತ ರವರ ಕುಟುಂಬ
4. ಶ್ರೀಮತಿ ಸುಧಾ ಶ್ರೀನಿವಾಸ್ – ಪುಸ್ತಕದ ಬರವಣಿಗೆಯಲ್ಲಿ ನಿರಂತರ ವಿಚಾರ ಮಂಥನ ನಡೆಸಿದ ನನ್ನ ಸಹಪಾಠಿ
5. ಶ್ರೀಮತಿ ಕೆ. ಸರಸ್ವತಿ, ಮಂಜುನಾಥ ಎಂಟರ್‌ಪ್ರೈಸಸ್
6. ಶ್ರೀ ಶ್ರೀನಿವಾಸ್ ಬೆಲ್ಲಂಕೊಂಡ ಮತ್ತು ಶ್ರೀ ರಘು ಬೆಲ್ಲಂಕೊಂಡ
7. ಶ್ರೀ ಎಸ್. ಕಿರಣ್ ಮತ್ತು ಶ್ರೀ ಜಿ. ಪಿ. ಮಹೇಶ್

## ಜ್ಞಾನ ಪ್ರಸಾರಕ್ಕೆ ಕೊಡುಗೆ ನೀಡಿದವರು (ಪ್ರಾಯೋಜಕರು)

1. ಶ್ರೀಮತಿ ಭಾರತಿ ಭಾಸ್ಕರ್ ದಿ॥ ಎಂ. ಆರ್. ಭಾಸ್ಕರ್‌ರವರ ಸವಿನೆನಪಿಗಾಗಿ
2. ಶ್ರೀಮತಿ ರೂಪ ಶ್ರೀನಿವಾಸ್ ಮತ್ತು ಶ್ರೀ ಬಿ. ಎಸ್. ಶ್ರೀನಿವಾಸ್
3. ಶ್ರೀಮತಿ ಎಂ. ಬಿ. ನಾಗಶೃತಿ ಮತ್ತು ಶ್ರೀ ಎಸ್. ರಘುವಂಶಿ ಕೃಷ್ಣ
4. ಶ್ರೀಮತಿ ಕೆ. ಆರ್. ಸುಬ್ಬಲಕ್ಷ್ಮಿ ಮತ್ತು ಶ್ರೀ ಕೆ. ಜಿ. ಎಸ್. ರವಿಕುಮಾರ್
5. ಶ್ರೀಮತಿ ಅಪೂರ್ವ ಕಿಶೋರ್ ಮತ್ತು ಶ್ರೀ ಕೆ. ಶಿವಸ್ವರೂಪ್
6. ಶ್ರೀಮತಿ ನೇತ್ರಾಮೂರ್ತಿ ಮತ್ತು ಶ್ರೀ ಎ. ಎಂ. ಮೂರ್ತಿ
7. ಶ್ರೀಮತಿ ಗಾಯತ್ರಿ ಶ್ರೀನಿವಾಸ್ ಮತ್ತು ಶ್ರೀ ಸಿ. ಆರ್. ಶ್ರೀನಿವಾಸ್



## ಆಕರಗಳು (References)

– ಪ್ರಮುಖವಾಗಿ ಶ್ರೀಮದ್ಭಗವದ್ಗೀತಾ, ಗೀತಾ ಪ್ರೆಸ್, ಗೊರಖ್‌ಪುರ್, ಉ. ಪ್ರ.

– Holistic Life Orientation - Paramakshara Charitable Trust

– Holistic Life Vision - Paramakshara Charitable Trust

– ಗೀತಾ ಪ್ರವಚನಗಳು – ಶ್ರೀ ಡಿ. ಎಸ್. ಶ್ರೀಧರ್

– ಧ್ಯಾನದಿಂದ ಪಡೆದಿರುವ ಜ್ಞಾನ

– ಜೀವನದ ಅನುಭವಗಳು

– ಅಂತರ್ಜಾಲ ಶೋಧನೆಯಿಂದ ಪಡೆದ ಮಾಹಿತಿ

– ಇತರ ಭಗವದ್ಗೀತೆ ಆಧಾರಿತ ಪುಸ್ತಕಗಳು, ಪ್ರವಚನಗಳು

॥ ಧನ್ಯವಾದಗಳು ॥


॥ ಓಂ ಅಕ್ಷರಬ್ರಹ್ಮಾರ್ಪಣಮಸ್ತು ॥

॥ ಓಂ ತತ್ ಸತ್ ॥

॥ ಶುಭಂ ॥



ಭಗವದ್ಗೀತೆಯ ಜ್ಞಾನವನ್ನು ಅಳವಡಿಸಿಕೊಂಡು
ಪ್ರತಿ ಜನ್ಮದಲ್ಲೂ ಭಗವಂತನೆಡೆಗೆ ಸೇರುವಲ್ಲಿ
ಪ್ರಗತಿಯನ್ನು ಹೊಂದಿ.



**ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ। ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥**

**ಯಜ್ಞದ ನಿಮಿತ್ತವಾದ ಕರ್ಮಗಳಲ್ಲದೆ ಇತರ ಕರ್ಮಗಳಲ್ಲಿ ತೊಡಗಿದ ಈ ಮನುಷ್ಯ ಸಮುದಾಯವು ಕರ್ಮಗಳಿಂದ ಬಂಧಿತವಾಗಿದೆ । ಅದ್ದರಿಂದ ಅರ್ಜುನನೇ! ನೀನು ಆಸಕ್ತಿರಹಿತನಾಗಿ ಯಜ್ಞಕ್ಕಾಗಿಯೇ ಚೆನ್ನಾಗಿ ಕರ್ತವ್ಯ ಕರ್ಮವನ್ನು ಮಾಡು ॥**

**ಪ್ರಾರ್ಥಿಸುವ**
**ಕೈಗಳಿಗಿಂತ,**
**ಸಹಾಯ ಮಾಡುವ**
**ಕೈಗಳು ಉತ್ತಮ**



**ಬುದ್ಧಿಗೆ ಆಹಾರ ಜ್ಞಾನ**
**ಮನಸ್ಸಿಗೆ ಆಹಾರ ಧ್ಯಾನ**

**ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೆ ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥**
**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**